ಕನ್ನಡ ಶಾಲಾ ಪತ್ರಿಕೆ

1877

ಾವದು, ಇದನ್ನೆಲ್ಲ ಓದುವವರಿಗೆ ತಿಳಿಯುವಂತೆ ಬಹಳ
ಾಡಿ ಎಂದಿಗೂ ಬರೆಯಲಿಕ್ಕೆ ಬರಲಿಕ್ಕಿಲ್ಲ.

ಕುದ್ಧ ವಿಷಯವೆಂತಲೂ, ಸಂಕೀರ್ಣ ವಿಷಯವೆಂತಲೂ, ವಿ
ುಗಳು ಇವೆ ಜಿಲ್ಲಾ ದವಿರುತ್ತವೆ. ಶುದ್ಧ ವಿಷಯದಲ್ಲಿ
ದೇ ಮೂಲ ಕ್ಕೆ ಇದ್ದು ಅದರ ವಿಷಯಕ್ಕೇ ಹೇಳುತ
ನ್ನು ಇರುತ್ತದೆ. ಸಂಕೀರ್ಣ ವಿಷಯದಲ್ಲಿ ಮೂಲ ಸಂಗತಿ ಒಂ
ು ಇದ್ದು ಅದಕ್ಕೆ ಂಗ್ಲ ಭೂತ ಕೆಲವು ಸಂಗತಿಗಳಿರುತ್ತವೆ.
ಂಕೀರ್ಣ ವಿಷಯದ ಮೇಲೆ ಬೊಮ್ಮಾಪ್ಪಾಗ್ಯಮೂಲ ಸಂಗತಿಗೂ,
ಂಗ ಭೂತಗಳಾದ ಸಂಗತಿಗಳಿಗೂ ಲಿಪಿ ಸ್ಥಾಪಿಸುವದಕ್ಕೆ ಡಿಪ್ಪೂಟಿ
ುತ್ತದೆಂಬದು ತೋರಸಲಿಕ್ಕೆ ಬೇಕಾ ತೆ ವಿೂರಿ ಅಧಿಕಪ್ರಸಂಗ
ಗೆ ಮಾಡುವ ಪ್ರಯೋಜ ಮೇಲಿಂದ ಸದರಿಯವರಿಗೆ

ಕುದ್ಧ ವಿಷಯಗಳ ಮೇಲೆ ಬ ಸ್ಕೂರವದು ಐದ ರೂಪಾಯಿ
ುವ ಪದ್ಧತಿ ಹಿಡಿದು ಪ್ರೋವಡಿ ಇದೇ ಪ್ರಕಾರದ ಅಧಿಕಪ್ರ
ು ಬರೆಯ ಹೇಳಿದ ವಿಷಯ ಗೆಯ್ದ ದಂಡ ಆಗಿರುತ್ತದೆ ಇಂ
ನಸಿನ ವ್ಯಾಪಾರಗಳಿಗಾಗಲಿ ತಂಮ ನಡಾವಳಿ ಸುಧಾರಿಸಬೇ
ು ಪಂಚಿಕ ಲಾಭಕ್ಕಾಗಲೀ, ಗಿ ೧೮ ಎಪ್ರೀಲ ಸನ್ ೧೮೭೬
ವರ ಬಗೆ ವಿಚಾರ ಮಾಡಬೆ
ಗಳೂ. ಭೇದಗಳೂ, ಅವುಗಳ Appajee B Divekur.
ಆಗುವ ಒಳಿತು ಕೇಡುಗಳೂ. ಡಿ. ಎ. ಇ. ಬೆಳಗಾ ಗತ
ವರ ಸಂಬಂಧ ಯಾವ ಕಾಲಕ್ಕೆ ಸ್ತ್ರೀಯರ ಉಂ
ದೆಯೋ ಅದರ ಬಗೆ ಬರೆಯ ಮಾಡಲಿಲ್ಲೆಂಬು
ಉದಾಹರಣಕ್ಕಾಗಿ ನಂಬರ ೧ ಯುವ
ಎರೆಯು ಹೇಳಿದರೆ ಪ್ರಾರಂಭ ಯಾವತ್ತೂ ಮೇ ಖಡಾಯನು
ವೆ:-ಇಬ್ಬರು ಇಲ್ಲವೆ ಇಬ್ಬರಿಗೆ ಯರ ವಿದ್ಯಾ ಜೆತ್ತಕ್ಕೆ
ಎರಡು ಇಲ್ಲವೆ ಎರೆಡಕ್ಕಿ

ಗಲೀ, ಹಲವು ಕಾರಣಗಳಿಂದ ವೈಮನಸ್ಯ ಹುಟ್ಟಿದರಿಂದ ಯು
ದ್ಧಗಳು ಆಗುತ್ತವೆ. ಪ್ರತಿಯೊಂದು ಜನಾಂಗದವರು ತಂ
ಲ್ಲಿಯ ಹರೆಯದವರಿಗೆಲ್ಲ ಆದ ಮಟ್ಟಿಗೆ ಯುದ್ಧಕಲೆಯ
ಜ್ಞಾನವನ್ನು ಮಾಡಿ ಸಿದ್ಧ ಇಡಬೇಕು. ಕಾರಣವೇನಂದ
ಯುದ್ಧ ಮಾಡತಕ್ಕ ಪ್ರಸಂಗ ಬೇಳಿ ಕೆ[illegible]ವದಿಲ್ಲ. ಯು
ದ್ಧದಲ್ಲಿ ಅನೇಕ ತರಗಳುಂಟು. ಕೆಲ[illegible]ಪ್ರಸಂಗದಲ್ಲಿ ತ
ನು ಸಂರಕ್ಷಣಕ್ಕಾಗಿ ಯುದ್ಧ ಮಾಡುವದು ಬೇಳ್ಳುತದೆ.

[illegible]ಹೊತ್ತು, ತಾವೇ ಜಗಳ್ಳಾತೆಗೆದ[illegible]ಯವರೊಡನೆ
ಯುದ್ಧಕ್ಕೆ ಹೊ[illegible]. ಕೆಲವು ಯುದ್ಧಗಳು ನೆ
ಕೆಲವು ನೀರಿನಲ್ಲಿ ಆಗುತ್ತವೆ. ಕೆ
ೀಶದ ಜನರು ತಮ್ಮ ತಮ್ಮೊಳ
ಡಿಸುತ್ತಾರೆ. ಆದರೆ ಈ
ಕ್ಕೆ ಬಹಳ ಕೇಡು ಉಂಟಾ
ಳಗೆಯೇ ಯಾವವಿ ಮಾಡಿ
ಬಂದು ಅವರನ್ನು ಗೆಲ್ಲುವದ
ರಾಜ್ಯದ ಮೇರೆಗಳ ಬಗ್ಗೆ
ತಾರವೂ, ದಂಡಿನಲ್ಲಿ ತಾ
ವಣಿಕೆಯೂ, ಅವಿಚಾರದಿಂ
, ಮುರಿಯುವದೂ, ಇವೇ ಮೊ
ಯುದ್ಧಗಳು ಹುಟ್ಟುತ್ತವೆ
ೀಡು ಉಂಟಾಗುತ್ತದೆ. ಯು
ದರಿಂದ ಜನರ ಜೀವಗಳ
ರಾಜ್ಯಗಳು ಮು

ಮುಂದಕ್ಕೆ ನಡೆಯುವದು.)

NOTICES AND CIRCULARS.
ನೋಟಿಸಗಳೂ, ಸರಕ್ಯೂಲರಗಳೂ

ಜಾವಕ ನಂಬರ ೬೦.

ಬೆಳಗಾಂವ ಜೆಲ್ಹಾ, ಬೀಡಿ ತಾಲೂಕ, ಕಸಬಾ ನಂದಗಡ
ಕೂಲ ಮಾಸ್ತರ, ಕೃಷ್ಣಾಜಿ ಹರಿ ಮಾವಳಂಗೆ, ಚಂದಗಡ ಸಾ
ಯಲ್ಲಿ ಹೆಡ್ಡ ಮಾಸ್ತರಿದ್ದಾಗ್ಯೆ ಸಾಲಿಯ ಕೆಲಸ ಬರೋಬರ
ಮಾಡದೆಯಿದ್ದ ಕಾರಣ, ಸುಮಾರು ಎರಡು ಎರಡೂವರಿ ವರು
ಷದೊಳಗೆ ಹ್ರುಡುಗರ ಅಭ್ಯಾಸವು ವೃದ್ಧಿಯಾಗಿಲ್ಲ. ಇದು ಅವ
ಪ್ರೂರ್ ತಪ್ಪಿದ್ದು ತಪ್ಪ ಅಲ್ಲಂತ ಸ್ಥಾಪಿಸುವದಕ್ಕೆ ಡಿಪ್ರೂಟಿ
ಎ. ಇನಸ್ಪೇಕ್ಟರರ ಕಡಿಗೆ ಯೋಗ್ಯತೆ ವಿೂರಿ ಅಧಿಕಪ್ರಸಂಗ
ನದ ರಿಪ್ರೋರ್ಟ ಕಳುಹಿಸಿದ್ದರ ಮೇಲಿಂದ ಸದರಿಯವರಿಗೆ
ಸಿ. ಎ. ಇ. ಸಾಹೇಬ ಬಾಹದ್ದೂರವರು ಐದ ರೂಪಾಯಿ
ದಂಡ ಮಾಡಿರುತ್ತಾರೆ. ಒಳಗಡೆ ಇದೇ ಪ್ರಕಾರದ ಅಧಿಕಪ್ರ
ಸಂಗಿತನದದಶಿಂದ ಇವರಿಗೆ ಒಮ್ಮೆ ದಂಡ ಆಗಿರುತ್ತದೆ. ಇಂ
ನಮೇಲಾದರೂ ಸದರಿಯವರು ತಮ್ಮ ನಡಾವಳಿ ಸುಧಾರಿಸಬೇ
ಸು. ತಿಳಿಯೋದು ತಾರೀಖು ೧೮ ಎಪ್ರೀಲ ಸನ್ ೧೮೭೬
ಸಿಸವಿ.

(Sd.) Appajee B Divekur.
ಆ. ಡಿ. ಎ. ಇ. ಬೆಳಗ

ಸರಕ್ಯೂಲರ ನಂಬರ

ಕಲಾದಗಿ ಜೆಲ್ಹೆಯೊಳಗಿನ ಯಾವತ್ತು
ಮಾಸ್ತರರಿಗೆ–
ತಿಳಿಪಡಿಸುವದೇನಂದರೆ – ತಾಲೂಕ

ಮುಂತಾದವರ ಸಂಬಳಾ ವೇಳೆ ವೇಳೆಕ್ಕೆ ಮುಟ್ಟಿಸುವದಿಲ್ಲಾ
ಹೀಗೆ ತಿಳಿಯುತ್ತದೆ. ಆದರೆ ಇನ್ನು ಹೀಗೆ ಸುಸ್ತಿ ಯಾವ ಕ
ಪಾಯಿ ಕಡಿಂದ ಆಧೀತು, ಅವನ ವಿಷಯಕ್ಕೆ ಸಖ್ತ ವಿಚಾರ
ಮಾಡಲಾಧೀತು. ತಾಲೂಕಕ್ಕೆ ಪಗಾರ ಮುಟ್ಟಿ ಎಂಟದಿವಸಗ
ಳಲ್ಲಿ, ತಾಲೂಕದೊಳಗಿನ ಯಾವತ್ತು ಮಾಸ್ತರ ಮುಂತಾದವರ
ಸಂಬಳಾ ಮುಟ್ಟಿಸಲಿಕ್ಕೇ ಬೇಕು. ಕಾರಣಾ ತಾಲೂಕ ಮಾ
ಸ್ತರರು ದರ ತಿಂಗಳ ಸಂಬಳಾ ಬತವಡಾ ಮಾಡುವ ಕೆಲಸ
ತೀರಿದ ಕೂಡ್ಲೆ, ಹಣಾ ಖಜ್ಯಾನೆಯಿಂದ ಎಂದ ,ದೊರೀತು ಆ
ಶಿಪಾಯಿ ಇವನ ಕೈಯಲ್ಲಿ ಎಂದ ಕೊಟ್ಟಿರುತ್ತದೆ ಬ ಬತವಡ
ದ ಕೆಲಸಾ ಎಂದ ಮುಗೀತು, ಬಟ್ಟ ದಿವಸಳು ಎಷ್ಟು ಹಿಡಿದ
ವ್ರು; ಈ ಬಗ್ಗೆ ರಿಪ್ರೋರ್ಟ ನನ್ನ ಕಡಿಗೆ ಕಳುಹಿಸುತ್ತಿರಬೇ
ಕು. ಅಂದರೆ ಸುಸ್ತಿ ಅಯಿತೋ ಇಲ್ಲವ್ರೋ ತಿಳಿಯುವದು,
ತಾ. ೧ ನೇ ಮಾಹೆ ಅಪ್ರೀಲ, ೧೮೭೬ ಇಸ್ವಿ.

(Sd.) R. A. Savanur.
ಡಿ. ಎ. ಇನಸ್ಪೇಕ್ಟರ ಜಿಲ್ಲಾ ಕಲಾದಗಿ.

ಕಲಾದಗಿ ಜಿಲ್ಲೆಯೊಳಗಿನ ಸಾಲಿಯ ಮಾಸ್ತರ ಜನರ ವ
ಗ್ರಾವಗಿರ್ ನೇಮಣೂಕಗಳು, ಮಾರ್ಚ ತಿಂಗಳಲ್ಲಿ ಆದ ಬಗ್ಗೆ,
ಗೋಪಾಳ ರಾಮಚಂದ್ರ ಬೇಡೀಕರ, ಟ್ರೇನಿಂಗಕಾಲೇಜ,
ರನ್ನು ತೊವಿ೯ಯ ಮಾಸ್ತರ ಕೆಲಸಕ್ಕೆ ನೇಮಿಸಿರುತ್ತ
ರು. ೧೫.

ಾವಪ್ಪ ಮಾಸ್ತರ, ತೊವಿ೯, ಇವರನ್ನು ಅ
ಮಾಸ್ತರ ಕೆಲಸಕ್ಕೆ ನೇಮಿಸಿರುತ್ತಾ
ಿಮರಾವ, ಮಾಸ್ತರ, ಅವಿೂನಗಡ, ಇವರನ್ನು
ಾಸ್ತರ ನೇಮಿಸಿಧೆ. ಸಂಬಳ ರು. ೧

ಗುರುನಾಥ ಅಪ್ಪಾಜಿ, ಮಾಸ್ತರ, ಶಿರಶಾಡ, ಇವರನ್ನು ಪ್ರೊ
ತ್ಸಾ ಸಾಲಿಯ ಮಾಸ್ತರ ಕೆಲಸಕ್ಕೆ ನೇಮಿಸಿದೆ. ಸಂಬಳ
ರು. ೧೬.

ವೀರಪ್ಪಾ ಹಣಮಪ್ಪಾ, ಮಾಸ್ತರ, ಪ್ರೊತ್ಸಾ, ಇವರನ್ನು ಇ
ಲಕಲ್ಲಿ ನಂಬರ ೨ ನೇ ಸಾಲಿಯ ಮಾಸ್ತರ ಕೆಲಸಕ್ಕೆ ನೇ
ಮಿಸಿದೆ. ಸಂಬಳ ರು. ೧೮.

ಲಷ್ಮಣ ಧೋಂಡದೇವ ಹಂಣ ಹುಡುಗರ ಸಾಲಿಯಯ
ಮಾಸ್ತರ ಮುದ್ದೇಬಿಹಾಳ, ಇವರನ್ನು ಅದೇ ಗ್ರಾಮದಲ್ಲಿ
ಗಂಡ ಹುಡುಗರ ಸಾಲಿಯ ಅಶಿಷ್ಟಂಟ ಮಾಸ್ತರ ನೇಮಿ
ಸಿದೆ. ಸಂಬಳ ರು. ೧೬.

ಸ್ವಾಮಿರಾವ ಅಪ್ಪಾಜಿ, ಅ. ಮಾಸ್ತರ, ಮುದ್ದೇಬಿಹಾಳ, ಇ
ವರನ್ನು ಅದೇ ಗ್ರಾಮದಲ್ಲಿ ಹಂಣ ಹುಡುಗರ ಸಾಲಿಯ
ಮಾಸ್ತರ ನೇಮಿಸಿದೆ. ಸಂಬಳ ರು. ೪೦.

ಪ್ರಭಾಕರ ಬಾಪ್ಪಾಜಿ, ಅಶಿಷ್ಟಾಂಟ, ಮಾಸ್ತರ, ಇಂಡಿ, ಇವ
ರಿಗೆ ಸಂಬಳ ರು. ೨೯ ಇದ್ದದ್ದು ೩೦ ರೂಪಾಯಿ ಮಾ
ಡಿರುತ್ತದೆ.

ಕೃಷ್ಣಾಜಿ ಗುರುನಾಥ, ಟ್ರೇನಿಗಕಾಲೇಜ, ಇವರನ್ನು ಬಾ
ಗಲಕೋಟ ಸಾಲಿಯ ಅಶಿಷ್ಟಾಂಟ ಮಾಸ್ತರ ಕೆಲಸಕ್ಕೆ ನೇ
ಮಿಸಿದೆ. ಸಂಬಳ ರೂ. ೩೨. ತಾರೀಖ ೨೨ ಅಪ್ರೇಲ
೧೮೭೬ ಸಸ್ವಿ.

(Sd.) R. A. Sav[illegible]ರ ಉಂ
ಡಿ. ಎ. ಇ. ಜಿಲ್ಲಾ [illegible]ಗಾಡಲಿಲ್ಲೆಂಬು

[illegible]ರೇ ಖುದಾಯನ
[illegible]ಚರ ವಿದ್ಯ ಜೆತ್ತಕ್ಕೆ

CORRESPONDENCE.

ಪತ್ರವ್ಯವಹಾರವು.

ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾಪತ್ರಿಕೆಯ ಏಡಿ
ಟರರ ಸನ್ನಿಧಾನಕ್ಕೆ.

೨. ವಿ. ಸನ್ನ ೧೮೭೬ ಇ. ಜಾನೇವಾರಿ ತಿಂಗಳ ಶಾಲಾಪತ್ರಿ
ಕೆಯ ಸಂಚಿಕೆ (೧೨), ಪುಟ (೨೩೭) ನೇದರಲ್ಲಿ, ರಾಣೆಬೆದ
ನೂರ ತಾಲೂಕ ಪ್ಯಕಿ ಐರಣಿ ಸಾಲಿಯ ಮಾಸ್ತರರಾದ ರಾಂ.
ಶಾಮಚಂದ್ರ ನರಸೋ ಇವರು ಕೊಟ್ಟಿರುವ ಕನ್ನಡ ಪದಗ
ಳಿಗೆ ಅರ್ಥವನ್ನು ನನ್ನ ಬುದ್ಧಿಗೆ ತಿಳಿದಷ್ಟು ಬರೆದಿದ್ದೇನೆ.
ಇದನ್ನು ದಯಮಾಡಿ ತಮ್ಮ ಸರಸವಾದ ಶಾಲಾಪತ್ರಿಕೆಯೋ
ಳ್ ಮುದ್ರಿಸಿ ಪ್ರಸಿದ್ಧ ಮಾಡಬೇಕೆಂದು ಕೋರುತ್ತೇನೆ

ವಂಶಾವಳಿಗಳು.

ಅರ್ಥ-ಅನಿಲನ=ಗಾಳಿಯು, ಅಹರವಮಾಡಿಕೊಂಡನ=ಭಕ್ಷಿಸ
ವ ಮಾಡಿಕೊಂಡ ಕನ್ಯಾಋಷಿಯ, ತನಯಳ=ಪುತ್ರಿಯಾದ ಶ
ಕುಂತಲೆಯ। ಅರಸನ=ಪತಿಯಾದ ದುಷ್ಯಂತ ಮಹಾರಾಜನ, ಪಿ
ತನ=ತಂದೆಯಾದ ಪುರೂರವನ, ತಂದೆಯ=ಪಿತನಾದ ದಮುನ
ಋಷಿಯ, ಜನಕನ=ಅಯ್ಯನಾದ ಕಶ್ಯಪನ, ಅಪ್ಪನ=ಜನಕನಾ
ನ ಬ್ರಹ್ಮನ, ಪಡದನ=ಹಡದಂಥ ಶ್ರೀಕೃಷ್ಣನ, ಅನುಜೆಯ=
ಯಾದ ಸುಭದ್ರೆಯ, ಮಗನ=ಪುತ್ರನಾದ ಅಭಿಮನ್ಯುನಿ
ನನ=ಬೀಗನಾದ ಉತ್ತರನ, ಜನಕನ=ತಂದೆಯಾದ
ಅಣುಗಿಯ= ಮಗಳಾದ ಉತ್ತರೆಯು, ತಾಯೆ
ಸುದಿಷ್ಣೆಯ, ಅನುಜನ=ತಂಮನಾದ ಶೀಚ
ನುದಿಂದ ಕೊಂದನ=ಬಹು ಸಾಮರ್ಥ್ಯದಿಂದ
ಜನನಿ=ತಾಯಿಯಾದ ಕುಂತಿಯ ನ

ನಿ=ನಾಪನಿಯಾದ ದೇವಕಿಯ, ಸೊಸೆಯ=ಸೊಸೆಯಾದ ಲ
ಕ್ಷ್ಮಿಯ, ಪಾಲಿಸು=ರಕ್ಷಿಸು ॥೩॥

ಗಿರಿಜೆಯರಸನ=ಶಂಕರನ ಕಾದಿಮೆಚ್ಚಿಸಿ=ಯುದ್ಧ ಮಾಡಿ
ಲಿಸಿ, ಕರವಪಡೆದನ=ಪಾಶುಪತಾಸ್ತ್ರವನ್ನು ಪಡೆದ ಅರ್ಜುನ
ನ, ಮುತ್ತೈನ=ಅಜ್ಜನಾದ ಭೀಷ್ಮನ ಪಿತನ=ತಂದೆಯಾದ ಶಾಂ
ನು ರಾಜನ ಅರಸಿಯ=ಹೆಂಡತಿಯಾದ ಭಾಗೀರಥಿಯ ಆಯ್ದ
ಣ=ಅಪ್ಪನಾದ ನಾರಾಯಣನ ಸುತನ=ತನಯನನಿಪ ಬ್ರಹ್ಮನ,
ಹೊಂಮಗನ=ಮಗನಿಗೆ ಮಗನಾದ ರಘುರಾಯನ ಮಗನ=ಸಾ
ನಾದ ದಶರಥರಾಯನ ಹೆಂಮಗನ=ಹಿರಿಯ ಮಗನಾದ ರಾ
ಮನ ಅರಸಿಯಳಿಗೆ=ಪಟ್ಟದರಸಿಯಾದ ಜಾನಕಿಗೆ ಆಳುಮಿದ
ಣ=ಆಕೆ ಬಟ್ಟ ರಾವಣನ ಮಥಿಸಿದ=ಸಂಹರಿಸಿದ ಮಂಡಿವಂಥ ಸ
ರಸಿಜಾಂಬಕ=ಕಮಲಾಪ್ತನಾದ ರಾಮಚಂದ್ರನ = ಶ್ರೀರಾಮಚಂ
ದ್ರನ, ಚರಣಸೇವಕ=ಪಾದ ಸೇವೆಯನ್ನುಳ್ಳ 'ಕರಿಮುಖಾರ್ಚಕ=
ಳಯು ಪುತ್ರನೆನಿಸುವ ಜನಮುಸ್ಸಹೊನಾ=ಮಾಮತಿಯೀ ನಂ
ಬಿನು ರಕ್ಷಿಸು ॥೪॥

ಕರಿಮುಖ=ವಿನಾಯಕನ ಅನುಜನ=ತಂಮನಾದ ಷಣ್ಮುಖ
ನ, ಅರಿಯ=ಶತ್ರುವಾದ ತಾರಕಾಸುರನ, ಮಕ್ಕಳ = ಪುತ್ರರಾದ
ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿಗಳ ಪುರವ=ತ್ರಿಪುರಗಳ
ನ್ನು ಕೆಡಹಿದನ=ಬಾಣರೂಪಿನಿಂದ ಕೆಡಸಿದ ಕೃಷ್ಣನ, ಆತ್ತೆ
ಯ=ಅತ್ತೆಯಾದ ಕುಂತಿಯ, ಆತ್ಮಜನ=ತನಯನಾದ ಧರ್ಮರಾಜ
ನ, ಅರಸನ=ಧರ್ಮರಾಜನ ಅನುಗನ=ಮಗನಾದ ಶೂರ ಅರ್ಜು
ನನ ಭಾವನ=ಬೀಗನಾದ ಮನ್ಮಥನ ಅಪ್ಪಯ್ಯನಾಡಲಿಲ್ಲಿಂಬು
ಲಕ್ಷ್ಮಣ ಅನುಜನನು=ತಂಮನಾದ ಚಂದ್ರನ
ಮಾತನ=ತಲೆಯಲ್ಲಿ ಧರಿಸಿಕೊಂಡ ಮಹಾಶ್ವೇರೀ ಮುದಾಯನು
ಪ್ರಿಯಾದಂಥ, ಮೈಷಾಸುರನಮರ್ದಿಸಿದ=ಸುರ ವಿದ್ಯ ಜೆತ್ತಕ್ಕೆ

ನ್ನು ಕೊಂದಂಥ, ವೈಷ್ಣವಿ=ವಿಷ್ಣುರೂಪಿಯಾದಂಥ ಗಿರಿಜೆಯ
ಮಾರ್ತಿಯೇ ಪರಮಕೃಪೆಯಲಿ=ಶ್ರೇಷ್ಠವಾದ ಕೃಪೆಯಲಿ ಎ
ನಂನು ಕರುಣಿಸು=ನಂನಂನು ಕರುಣದಿಂದ ರಕ್ಷಿಸು ॥೩॥

ಈ ಪ್ರಕಾರ ಅರ್ಥವಾಗುವದುಂಟು. ಇತಿ ವಿಜ್ಞಾಪನಾ.

ಮುಕ್ಕಾನು ಕೌಜಗೇರಿ
ತಾ॥ ೩ ನೇ ಮಾಹೆ ಎ
ಪ್ರೀಲ ಸನ್ ೧೮೬೬
ಇಸ್ವಿ.

ಮಲ್ಲಯ್ಯಾ, ವೆದ್ವಯ್ಯಾ, ಜಗಾಪೂ
ರ ಸ್ಕೂಲ ಮಾಸ್ತರ,ಕ ಜಗೇರಿ,
ತಾಲೂಕ ರೋಣ, ಜಿಲ್ಲಾ ಧಾರ
ವಾಡ.

ಮ॥ ರಾ॥ ರಾ॥ ಕಂನಡ ಮರಪತ್ರಕರ್ತಾರವರ
ಚರಣಾಸಂನಿಧಿಗೆ,

ವಿನಂತಿ ವಿಜ್ಞಾಪನಂಗಳು. ಸಂನ ೧೮೬೫ ನೇ ೧॥ ದಿಶಂಬ
ರ ತಿಂಗಳ ಶಾಲಾಪತ್ರಿಕದ ಸಂಚಿಕೆ (೯), ಪುಟ (೨೫೫)ನೇ
ದರಲ್ಲಿ, ರಾ. ರಾ. ರಂಗೋ ವೆಂಕಟೇಶ ಹೆಡ್ಡ, ಮಾಸ್ತರ,ಕುರ್ತ
ಕೋಟಿ, ತಾಲೂಕ ಗದಗ, ಜಿಲ್ಲಾ ಧಾರವಾಡ, ಇವರು ಕೊಟ್ಟ,
ಸಂಸ್ಕೃತ ಎರಡು ಶ್ಲೋಕಗಳಲ್ಲಿ ಒಂದರ ಕಬ್ಬಾರ್ಥ ಭೂವಾ
ರ್ಥವನ್ನು ಬರೆದು, ನನ್ನ ಕೈಲಾದ ಮಟ್ಟಿಗೆ ಕೋಧ ವಾಡಿ
ಕಳುಹಿಸಿದ್ದೇನೆ. ಇದಂನು ದಯವಾಡಿ ತಂಮ ಸುಂದರವಾದ
ಪತ್ರಿಕದಲ್ಲಿ ನಾಲ್ಕು ಸಾಲು ತೆಗೆದುಕೊಂಡು ಅಚ್ಚು ಹಾಕಿ, ಪ
ಡಬೇಕೆಂದು ಅಪೇಕ್ಷಿಸುತ್ತೇನೆ.

ಪ್ರತಿಮಾ ಖರೋ ವಹತಿ ಕಂ ಕಂ ಯಾತಿ
। ಕಾ ದರ್ಪಾ ಪಹನಾತ್ಮಜೇನೆ ಬಲಿನಾ ಕಂ
ೀಧನಂ ॥ ಕಾ ವಿಷ್ಣುಪ್ರಸುದಾ ಎಯೇಶಪ್ರ
ತ್ಯಜಂತಿ ಸ್ತ್ರಿಯಃ । ಆರೋಹಾದವರೋ
ಕಂ ದ್ಯಯೋರುತ್ತರಂ ॥ ೧ ॥

ಅರ್ಥ–ಆರೋಹಾವರೋಹಣಾಭ್ಯಾಂ=ಶಬ್ದ ಇಪ್ಪಂತೆ ಪೋ
ಪುವದರಿಂದ ಒಂದು ಅರ್ಥ ಆಗಬೇಕು, ಅದೇ ಶಬ್ದ ತಿರುಪು
ಮುರುವು ಮಾಡಿ ಓದುವದರಿಂದ ಮತ್ತೊಂದು ಅರ್ಥ ಆ
ಗ್ತೋ.

(ಮೇಲಿನ ಕವಿತೆಯ ಶಬ್ದಾರ್ಥಗಳು.)

೧ ಚಕಾರುಪ್ರತಿವಾ, ಕಾಖರಃ ಕಂ ವಹತಿ. } ಸುಂದರವಾದ ಮೂರ್ತಿ ಯಾವದು? ರಂಭಾ
ಕತ್ತೆಯು ಏನು ಹೊರುತ್ತದೆ? ಭಾರಂ

೧ ಪಾಪಿಪ್ರಜಾಕಂ ಯಾತಿ } ಪಾಪಿಷ್ಠ ಜನರು ಎಲ್ಲಿ ಹೋಗುತ್ತಾರೆ? ಯಮನ ಹತ್ತರ. } ಕಾಲಂ
೧ ಬಲಿನಾಬನನಾತ್ಮಜೇನಕಾದಗ್ಧಾ. } ಬಲಿಷ್ಠನಾದ ಹನುಮಂತನಿಂದ ಏನು ಸುಡಲ್ಪಟ್ಟಿತು? ಲಂಕಾ. } ಲಂಕಾ
೧ ಕಾಮುಸಂಭೋಧನಂ ಕಿಂ } ಕಾಮು=ಮಾರ ಇದರ ಸಂಭೋಧನಹೆ } ಮಾರ
೧ ವಿಷ್ಣುಪ್ರಮದಾಕಾ } ವಿಷ್ಣುಗ ಪ್ರೀತಿ ಉಳ್ಳಕಿಯಾರು? } ರಮಾ
೧ ಮಹೇಶರಪ್ರತಿಸ್ತ್ರೀಯಃ ಕಂ ಸಂತ್ಯಜಂತಿ. } ಮಾಹದೇವರ ಹತ್ತರ ಸ್ತ್ರೀಯರು ಹೋಗುವಾಗ್ಯ ಏನು ಬಿಡುತ್ತಾರೆ. } ವ್ಯಾಘ್ರ ತ್ತರ ಉಂ
ಮುಕ್ಕಮ ಹಿರೇಕೊಪ್ಪ ತಾರೀಖು ೨೦।೪।೧೯ ಇಸ್ವಿ. } ಸ್ವಾಮೀ ಕೇಪಮಾಡಲಿಲ್ಲೆಂಬು ಲಗಿ, ಸೂಲಪ್ಪ. ರೇಕೊಪ್ಪ...ರೇ ಖುದಾಯನಂ ಸರ ವಿದ್ಯ ಜೆತ್ತಕ್ಕೆ

ರಾ· ರಾ· ಕನ್ನಡ ಶಾಲಾಪತ್ರಿಕದ ಸಿಡಿಟರರಿಗೆ–

ವಿ· ವಿ· ತಮ್ಮ ಸುಂದರವಾದ ಪತ್ರಿಕೆಯಲ್ಲಿ ಕೆಳಗೆ ಬರೆದಿರ್ವ
ವ ಗಾಮ್ಮ ಪಂಗ್ತಿಗಳಿಗೆ ಸ್ಥಳದೊರೆಯುವದೆಂಬ ಕಾಂಕ್ಷೆಯಿಂ
ದ ಬರೆದು ಕಳುಹಿಸಿರುತ್ತೇನೆ·

ಈ ತಾಲೂಕಿನ ರಾವಸಾಹೇಬ ಮಾಮುಲೇದಾರ
ರಾಮಚಂದ್ರರಾವ ಕೊಂಣೂರ ಇವರು ತಾ|| ೨೫ ಮಾರ್ಚ ಸಂ
ನ ೧೮೭೬ ಇಸವಿ ದಿವಸಾ ಈ ಸಾಲಿಗೆ ಬಂದು ಹುಡುಗರ
ಪರೀಕ್ಷೆ ತಗೆದುಕೊಂಡು ನಾಸರರು ಹುಸಾರ ಹಾಗೂ ಮೇ
ಹನತಿ ಇದ್ದಾರೆಂಬ ಬಗ್ಗೆ ಶರಾಬರೆದಿರುತ್ತಾರೆ· ಮತ್ತೂ ಇವ
ರ ಊರೊಳಗಿನ ಜನರನ್ನು ಕರೆಕಳುಹಿಸಿ ಅವರಿಗೆ ತಮ್ಮ ತ
ಮ್ಮ ಹುಡುಗರನ್ನು ವೇಳೆ ವೇಳೆಕ್ಕೆ ಸಾಲಿಗೆ ಕಳುಹಿಸಬೇಕು,
ಅದರಿಂದ ನಿಮ್ಮ ಲಾಭವದೆಂಬ ಬಗ್ಗೆ ಅವರಿಗೆ ಸಮಜೂತಿ
ಕೊಟ್ಟರು· ರಾವಸಾ|| ರವರ ಲಕ್ಷ ವಿದ್ಯಾವೃದ್ಧಿಯ ಕಡಗೆ ಬಹ
ಳೇ ಇರುತ್ತದೆ· ಇವರಂತೆ ಎಲ್ಲಾ ತಾಲೂಕಿನ ಮಾಮುಲೇದಾರ
ರು ಮಾಡಿದರ ವಿದ್ಯಾವೃದ್ಧಿಗೆ ಬಹಳೇ ಉತ್ತೇಜನ ಬರುವದು·

ತಾ|| ೩೦ ಮಾಪೆ
ಮಾರ್ಚ ಸಂನ
೧೮೭೬ ಇಸ್ವಿ·

ಮು· ದೇವಲಾಪೂರ ತಾ· ಸಂಪಗಾವ ಜಿ
ಲ್ಲಾ ಬೆಳಗಾಂವ ಅನಂತ ರಾಮಚಂದ್ರ
ಕಲಘಟಿಗಿ ಬ್ರಾಂಚಸ್ಕೂಲ ಮಾಸ್ತರ·

ರಾ· ರಾ· ಕನ್ನಡ ಶಾಲಾಪತ್ರಿಕೆಯ ಎಡಿಟರರಿಗೆ–

ನಮ್ಮ ಕರಬೊಳುದ್ದವಿಸುವ ಪತ್ರಿಕೆಯಲ್ಲಿ ಕೆಳಗೆ ಬ
ರಂಗಿ ಗಳಿಗೆ ಸ್ಥಳ ಡೊರಿಯುವದೆಂದು ಆಸೆ ಗ್ಗೆ

ಲೆಖ್ಖನು·

ಐದು ಕೋಟೆಗಳಿದ್ದವು· ಬಂದೂಂದು

ಕೋಟೆಯಲ್ಲಿ ಯೆಷ್ಟೆಷ್ಟೋ ಜನರಿದ್ದರು. ಆಪಾಗ್ಗೆ ವೈರಿಗ
ಳು ಮೊದಲನೇ ಕೋಟೆಗೆ ಮುತ್ತಿಗೆ ಹಾಕಲು, ಅದರ ಯಜ
ಮಾನನು ತನ್ನಲ್ಲಿ ಇದ್ದ ದಂಡಿನಷ್ಟೇ ದಂಡನ್ನು ಸಿನ್ಮ್ಲ ನಿ
ಮ್ಮ ಸ್ನೇಹಿತನಲ್ಲಿ ನನಗೆ ಕೊಡಿರಿ. ಅಂತಾ ಬಾಕಿ ಕೋಟೆಯವ
ರಿಗೆ ಕೇಳಿದ್ದಕ್ಕೆ ಅವರು ಅದರಂತೆ ಕೊಟ್ಟರು. ಕತ್ರ್ರಿಗಳು
ಆ ಕೋಟೇ ಬಿಟ್ಟು, ಯರಡನೇ ಕೋಟೆಗೆ ಮುತ್ತಿಗೆ. ಅವರ
ಧನಿಯೂ ಬಾಕೀ ಕೋಟೆಯವರಿಗೆ ನಮ್ಮಲ್ಲಿ ಇದ್ದಷ್ಟೇ ಜನ
ರನ್ನು ನೀವ್ರ ಕೊಡಿರಿ ಅಂತಾ ಕೇಳಲು ಅವರು ಅದರಂತೆ ಕೊ
ಟ್ಟರು. ವೈರಿಗಳು ಆ ಕೋಟೆಯನ್ನೂ ಬಿಟ್ಟು ಹೋದರು.
ಇದೇ ರೀತಿಯಿಂದ ಕತ್ರ್ರಿಗಳು ಕಡೇ (ಐದನೇ) ಕೋಟೆಗೆ
ಮುತ್ತಿದರು. ಅವರ ಧನಿಯೂ ಬಾಕೀ ಕೋಟೆಯವರಿಗೆ
ತನ್ನಲ್ಲಿದ್ದಷ್ಟು ಜನರನ್ನು ಕೊಡಿರಿ ಅಂತಾ ಕೇಳಲು ಅವರು
ಹಿಂದಿನವರಂತೆಯೇ ಕೊಟ್ಟರು. ಕತ್ರ್ರಿಗಳು ಈ ಪ್ರಕಾರವಾದವ
ನ್ನು ಕಂಡು ಹಿಮ್ಮೆಟ್ಟಿದರು. ಕಡೆಗೆ ನೋಡಲಾಗಿ ಆ ಕೋ
ಟೆಗಳೊಂದೊಂದರಲ್ಲಿ ಮೊದಲಿನಷ್ಟೇ ಜನರಿದ್ದರು. ಆದರೆ
ಆ ಕೋಟೆಗಳೊಂದೊಂದರಲ್ಲಿ ಮೊದಲು ಯೆಷ್ಟೆಷ್ಟು ಜನರಿ
ದ್ದರು?

ಈ ಲೆಖ್ಖವ್ರ ನಂನ ಅಣ್ಣ ಬುದ್ಧಿಗೆ ತಿಳಿಯವ ಕಾರಣ, ನ
ಮ್ಮ ಬಂಧು ಜನರಾದವರು ಇವರ ರೀತಿವಾವ ಸಹಿತ ಮಾಡಿ,
ಇದೇ ಪತ್ರಸ್ವಾರವಿಂದಲೇ ನನಗೆ ಬಾವ ಈ ಲೆಖ್ಖದ ತೊಗ
ದರೆಯನ್ನು ದೂರ ಮಾಡಬೇಕೆಂದು ಅಪೇಕ್ಷೆಸುತ್ತೇನೆ ಇಂ

ತಾ॥ ೩೦ ನೇ ಬಸಯ್ಯ ಜೆನಬಸ್ಯವಾಡಲಿಲ್ಲಿಂಬು
ಮಾಹೆ ಸನ್ನ ಮಠ ವಿದ್ಯಾರ್ಥಿಗಳು
೧೯೬೬ ಇಶ್ಟಿ ತಾ॥ ಹಾ॥ ಜೆ॥ ರೇ ಮುದಾಯನು
ಗುರು ವಿದ್ಯ ಜೆತ್ತಕ್ಕೆ

ರಾ॰ ಕನ್ನಡ ಶಾಲಾಪತ್ರಿಕೆಯ ಪಿಡಿಟರರ ಸಂನಿಧಾನಕ್ಕೆ-
ವಿ॰ ವಿ॰ ನಾನು ತಂದು ಕಡಿಗೆ ಬಳಿಗಡೆ ಎರಡು ಪತ್ರಗಳನ್ನು
ಕಳುಹಿಸಿದ್ದೇನು॰ ಪೈಕಿ (೨) ಕ್ಕೆ ಸ್ಥಳ ಶಿಕ್ಕು ಎರಡನೇದ
ಕ್ಕೂ ಸಹ ಶಿಗುವದೆಂಬ ನಂಬಿಕೆ ಉಂಟು॰

೨ ಶಾಲಾಪತ್ರಿಕೆ ಹಾನು (೨೪೬) ನೇದರಲ್ಲಿ ಪ್ರೊನವಾಡ
ಕರರು ಕೆಲ್ಲೀಕರೂಪ ಹಾಕಿದ ಲೆಕ್ಕದ ಉತ್ತರವನ್ನು ಬಾಗೇ
ವಾಡಿಯ ಶೇಷ್ಟಕಾ. ಪುಸ್ತಕ ( ) ಹಾನು (೩೦೯) ನೇದರ
ಲ್ಲಿ ಏನೇನು ಆಧಾರವಿಲ್ಲದೆ ಕೊಟ್ಟದ್ದಕ್ಕೆ ಇಂಡಿಯ ಶೀಪ
ಲ್ ಟೀಚರರು ಗಣೀತಶ್ರೇಡಿಯ ಸಾರಣೀ ಪ್ರಕಾರ ಪ್ರು॥(೨
ಪಾ॥ (೨೦೯) ನೇಪಂಲ್ಲಿ ಭುಮಿಸಿ ಅದು॰ ಅವರೆ, ಈ ಸಾ
ರಣೀ ಸಮೀಕರ ಕಲಿತವರ ಹ್ರೊತ್ತು, ಅನ್ಯರಿಗೆ ಸಮಜೂತವಾ
ದದ್ದಂತೂ ಸಹಜವೇ; ಆದ್ದರಿಂದ ಇದನ್ನು ನಾನು ಬಪ್ಪ ಬುಲ
ಭವಾದ ಟೂಕೆಯ ರೀತಿಯಿಂದ ಕೆಳಗೆ ವಿವರಿಸಿರುತ್ತೇನೆ॰

೨ ನೇ ಕೋಷ್ಟಕ ೨ನೇ ಕೋಷ್ಟಕ

V	೨	೨೫	೨	೨೪೬	೨ ೫	೨ ೯	೨೫೯
೨೨	೨೪	೪	೫	೨೬೫	೨ ೩	೨೨೩	೨೨೯
೨	೬	೯	೨೬	೨೨೨	೨೪ ೨	೨೫೩	೨೪ ೬
೨೩	೨೨ ೬	೩	೨೬ ೬	೨೬ ೨	೨೬ ೨	೨೩ ೫	೨೨ ೬

೩೪ ೨ ೦೦

೨) ನೇ ಕೋಷ್ಟಕವ ಒಂದು ಮನೆಯ ಒಟ್ಟು
ಹಿಟ್ಟು ಕಟ್ಟಿದ ಕಾರಣ (೬) ರಿಂದೆ ಗುಣಿಸಬೇ
ಬರಾಗಬೇಕಾಪ್ಪರಿಂದ, (೨ ೦೦) ದಲ್ಲಿ ವ
ವ ಸಂಖ್ಯಾ (೪) ಮನೆಗಳಿಗೆ ಹಚ್ಚುವಕಾರ
ಬಂದ ಭಾಗಾಕಾರಕ್ಕೆ (೬) ಹಚ್ಚು ಮಾ

ಡಿ (೨) ನೇ ಕೋಷ್ಟಕದ ಅಂಕೆಗಳ ಅನುಕ್ರಮದಂತೆ (೨) ನೇ ಕೋಷ್ಟಕದಲ್ಲಿ (೬) ಪೆಟ್ಟು ಮಾಡಿ ಕಟ್ಟು, (೩೪+೬= ೨೦೪-೨೦೮=೬೯೬÷೪=೧೯೯+೬=೨೫) ೨ ನೇ ಮನಿಯ ಸಂಖ್ಯೆ ಉತ್ತರ.

೧೦ ಒಬ್ಬ ಸಾವಕಾರನಲ್ಲಿ (೧೦) ಕುದುರೆಗಳಿದ್ದವು. (೨) ನೇದ್ದು (೨೦) ವರಹ ಕಿಂಮತಿ ನದು. (೩) ನೇದ್ದು (೩) ವರಹ ಈ ಪ್ರಕಾರ (೧೦) ನೇ ಕುದುರೆ (೨೦) ವರಹದಿಪ್ಪು ಆ ಸಾವ್ಕಾರನಿಗೆ (೯) ಮಕ್ಕಳಿದ್ದರು ಆ ಸಾವ್ಕಾರನು ಪಾಲವಶ್ಯವಾದ ಬಳಿಕ ಆ ಹುಡುಗರು ಕುದುರೆಗಳನ್ನು ಸಮವಾಗಿ ಹಂಚಿಕೊಂಡರು. ಅವರಲ್ಲಿ ಒಬ್ಬೊಬ್ಬನಿಗೆ ಯಾವ ಯಾವ ಕುದುರೆಗಳು ಎಷ್ಟೆಷ್ಟು ವರಹ ಕಿಂಮತಿನವು ಬಂದವು ಹೇಳು: ರೀತಿ ಕೆಳಗೆ ಬರುವ (೨) ನೇ ಕೋಷ್ಟಕದಲ್ಲಿ ಸಂಖ್ಯಾ ಕೋಷ್ಟಕದ ಮೇಲಿಂದ ದೊಡ್ಡ ಕೋಷ್ಟಕದಲ್ಲಿ ಅಂಕೆಗಳಂತೆ ಶುಭವಾಗಿ ತುಂಬುವದಕ್ಕೆ ಬರುತ್ತದೆ. ಒಬ್ಬೊಬ್ಬನಿಗೆ (೯) ಕುದುರೆಗಳು (೩೬೯) ವರಹಗಳು ಬರುತ್ತವೆ.

೪	೨	೬	೩೫	೬೪	೬೯	೪	೨	೬	೫೩	೪೪	೬೨
೩	೫	೩	೬೬	೬೨	೩೫	೩	೫	೩	೪೪	೫೨	೫೪
೪	೯	೨	೬೩	೩೨	೨೫	೪	೯	೨	೪೯	೫೪	೪೩

೨೬	೧೯	೨೪	೪೪	೩೩	೪೩	೨೬	೨೫	೫೫	೫೨
೨೨	೨೩	೨೫	೨೯	೪೨	೪೩	೫೩	೫೯	೬೦	೬೫
೨೨	೨೩	೨೩	೪೪	೪೪	೫೪	೫೪	೬೦	೬೫	೬೨
೨೫	೨೫	೨೨	೨೯	೨೯	೩೪	೩೯	೪೨	೪೯	೫೦
೨೧	೨೨	೨೪	೨೫	೨೫	೨೯	೩೦	೩೪	೩೯	೪೨

ಗಳ ಉಂ
ಮಾಡಲಿಲ್ಲೆಂಬು

ರೀ ಮುದಾಯವು
ಳುವ ವಿದ್ಯ ಜೆತ್ತಕೆ,

ಮು. ಬಂಮನಹಳ್ಳಿ
ತಾ. ಹಾನಗಲ್ಲ, ಜಿ.
ಧಾ. ತಾ. ೩೫ ಎ
ಕ್ರೋಲ ೩. ೭೫ ಇ.

ಸಹಿ ಜಗಂನಾಥ ಶ್ರೀಧರ ಗೋ
ಕಲೆ, ಹಡ್ಡ ವಾಸ್ತರ, ಬಂಮನ
ಹಳ್ಳಿ.

N. B. ನೀವು ಒಂಮೇ ಪತ್ರದಲ್ಲಿ ಒಗಟು, ಕೂಟಪ್ರಶ್ನೆ, ಶಿರನಾಮೇ ಬರೆಯುವ ರೀತಿ, ಹೊಸ ಉದಾಹರಣೆಗಳು ಮೊದಲಾದ ವಿಷಯಗಳನ್ನು ಬರೆಯುತ್ತೀರಿ. ಇದು ಸರಿಯಲ್ಲ. ಪ್ರತಿಯೊಂದು ದೀರ್ಘ ವಿಷಯವನ್ನು ಕುರಿತು ದೀರ್ಘ ವಿಸ್ತರ ವಿಸ್ತರ ಕಾಗದಗಳನ್ನು ಬರೆಯುವವರಿಗೂ ಓದುವವರಿಗೂ ಕೇಳುವವರಿಗೂ ನೆಟ್ಟಗೆ.

ಎ. ಕ. ಸಂ. ಪತ್ರಿಕೆ.

ರಾ. ರಾ. ರಾವಸಾಹೇಬ ಕನ್ನಡ ಮತಪತ್ರಿಕೆ ಕರ್ತೃಗಳ ಸನ್ನಿಧಾನಕ್ಕೆ-

ಕೆಳಗೆ ಸಹೀ ಮಾಡುವವನು ಅತಿ ವಿನಯ ಪೂರ್ವಕ ವಿಜ್ಞಾಪನೆ ಏನಂದರೆ ಕೆಳಗೆ ಬರೆದ ನಾಲ್ಕು ಪಂಕ್ತಿಗಳು ವಿದ್ಯಾ ಸುಧಾರಣಾ ಸಂಬಂಧದವಿದ್ದರಿಂದ ಅವುಗಳನ್ನು ತಮ್ಮ ಸುಂದರವಾದ ಮತಪತ್ರಿಕೆಯಲ್ಲಿ ಮುದ್ರಿಸುವದು ತಿರಸ್ಕರಿಸಲಾಗದು.

ಈ ಇಂಗ್ರಜೀ ಧರ್ಮ ಸರಕಾರದವರು ಬುದ್ಧಿಪೂರ್ವಕವಾಗಿ ಜನರಲ್ಲಿದ್ದ ಅಜ್ಞಾನಂಧಃಕಾರವನ್ನು ದೂರ ಮಾಡುವದಕ್ಕಾಗಿ ಹಳ್ಳಿಗೆ ಮತಗಳನ್ನು ಸ್ಥಾಪನೆ ಮಾಡಲಾರಂಭಿಸಿದಂತು ಜನರ ಅಜ್ಞಾನಂಧಃಕಾರವು ಹಾಗೇ ಉಳಿದ ಹ್ಯಾಗಂದರೆ ಕೆಲ ಮೂಢ ಒಕ್ಕಲಿಗರು ತಮ್ಮ ಕೀರ ಸಾಲಿಗೆ ಕಳುಹಿಸುವದೇ ಇಲ್ಲ. ಗ್ರಾಮ ಸುಲಕರ್ಣಿಗಳು ತಮ್ಮ ಕಛೇರಿಗೆ ಸಾಲಿ ಅಗತ್ಯ ಇದೆ ಎಂದು ಕೆಲವರಿಗೆ ಹೇಳುಗರನ್ನು

ಳುಹಬೇಕೆಂದಾಗ್ಯೂ, ಇಂಯತ್ತಿಗಳ ಪ್ರಕಾರ ಪ್ರಸಕಗಳ
ಕೊಡಿಸದೆ ಕಳುಹಿದ ಕೆಲ ಹ್ರುಡುಗರನ್ನು ಮುಂದುವಾ
ದನಾ ತರಬುವದಕ್ಕೆ ಒಂದು ತಾಸ ಹಿಂಬನಿಂದ ಸಾಲಿಗೆ
ವರೆ ಎರಡುವರೆ ತಾಸಿನಲ್ಲಿ ಬುತ್ತಿಯನ್ನು ಪ್ಯೆಯ್ಯುವ
ಕರದೊಯ್ಯುತ್ತಾರೆ. ಸುಗ್ಗಿ ದಿವಸಗಳಲ್ಲಂತು ಹ್ರುಡುಗರ
ಸಾಲೀ ಕಡೆಗೆ ಹಣಿಕಿ ನೋಡಗೊಡುವದಿಲ್ಲ. (ಅಂತೂ
ಂತೂ ಕೊಂತೀ ಮಕ್ಕಳಿಗೆ ರಾಜ್ಯವಿಲ್ಲೆಂಬಂತೆ)ಸಾಲಿಗೆ ಹ್ರು
ಗರನ್ನು ಕಳಿಸುವದೇ ಇಲ್ಲ. ಇತ್ಯಾದಿ ದೋಷಗಳು ಗ್ರಾ
ನಿವಾಸಿಯವರ ಕಡೆಗೆ ಬರುವತರವಾಗಿವೆ.

ಸವರೀ ಅನ್ಯಾಯಾ ಸಾಲಿ ಅವ್ಯವಸ್ಥೆ ಆದಲ್ಲಿ, ಮಾಸ್ತರನು
ನ್ನ ಬಡತೀ ಮಾಡಿಗ ತಪ್ಪಿ ಒಂದು ನೆಲೆ ಹಿಂಬ್ರಕಿ ಬ
ತೀ ಆದೀತೆಂಬ ಮಹದ್ಭಯದಿಂದ ಊರವರಿಗೆ ಹ್ರುಡುಗರ
ನ್ನ ಸಾಲಿಗೆ ಕಳುಹ್ರುವ ಬಗ್ಗೆ ಬಹಳ ಸಮಜೂತಿ ಹೇಳಿದ್ರೂ,
ಬಾಲತ್ಯವ್ರು ಬೆಲೆಯುಳ್ಳದ್ದನ್ನು ವ್ಯೆರ್ಥ ಕಳಿಯಗೊಡಿಸಬೇ
ರೆಂಬುವದು) ನಿಷ್ಫಲವಾದಲ್ಲಿ ಸಾಲಿ ಅವ್ಯವಸ್ಥೆ ರಿಪೋಟ್ರು
ಜೂರಿಗೆ ಕಳುಹಲಾಗಿ' ಗ್ರಾಮಸರು ಮಾಸ್ತರನ ಮೇಲೆ
ೀಪಾ ರೋಪಣಾ ಮಾಡದ ವಿನ್ಹ ಸೆಲಿ ಇರಲರಿಯದೆಂ
ನೀವ್ರು (ನ್ಯೆತರು) ನಿಮ್ಮ ಹ್ರುಡುಗರನ್ನು ಹೊಲ ಮನೆ ಕೆಲ
ಕ್ಕೆ ಕರದೊಯ್ಯುದರೂ, ಅಡ್ಡಿ ಇಲ್ಲ. ಸಾಲಿ ಬೇಕೆಂದೂ ಅ
ಮೇಲೇರೆ ರುಜು ಹಾಕಿರೆಂದು ಕುಬೋಧ ಮಾಡಿ ಮಗರ
ಸ್ಕೂರಿ ಕೆಲವ್ರು ಸ್ವತಃ ರುಜು ಮಾಡಿ ಮಾಸ್ತರನ್ನೆತ್ತರ ಉಂ
ರಕಾರಕ್ಕೆ ಸಂಗಾತಲೇ ಅರ್ಜಿ ಮಾಡುವವು. ಮಾಡಲಿಲ್ಲೆಂಬು
ಹೀಗಾದಲ್ಲಿ (ಸರ್ಕಾರ ಅಂಬೋಣ ಒಂದೇ ಆ
ರ ರಿಪೋರ್ಟ ಸರಕಾರಕ್ಕೆ ಸತ್ಯವೆಂಬುವದರೇ ಖುದಾಯನ
ಅಧಾನ ತೋರದೆ ಮಾಸ್ತರನ ಬಡತ್ತಿಗಿರ ವಿಷ್ಯ ಜೆತ್ತಕ್ಕೆ

ದ ಕೊರತೆ ಮುಂತಾದ ಪ್ರಬಲ ಅಡ್ಡಿ ಸರಕಾರವು ಕೆಗೆಮುಕೊ
ಳ್ಳುತಿದ್ದ ಪ್ರಕಾರ ಮಾಸರನ ಉಕ್ಷ್ಣನಕ್ಕೆ ಕೆಗೆದುಕೊಳ್ಳದ
ರಿಂದ, ಒಂದೊಂದು ಕೈಲೇಳಿ ವಿದ್ಯಾ ಕಾರಣ ಬಡ ಮಾಸ್ತರರು
ಉಕ್ಷ್ಣನ ಹೊಂದಿ ಸರಿಯೇ ಅಪೇಕ್ಷೆಯಿಂದ ಒಂದೊಂದು
ತಪ್ಪಾದರೂ (ಅಪರಾಧವಾದರೂ) ಇದ್ದ ಸಂಬಳ ಕಾಯುಂ
ಇರುವದೇ ಪರಮ ಪ್ರಯಾಸವಾಗಿ ಹಳ್ಳೀಸಾಲಿ ಅಭ್ಯಾಸ ಪ್ರ
ಚೂರಕ್ಕೆ ಬರುವದೇ ಇಲ್ಲ.

ಮಾಸರನು ಸಗ್ರಾಮ ಬಿಟ್ಟು, ಪರಿತಾಥ್ರ ಸಾಲವಾಗಿ ನ
ವಕಾಯನ್ನು ಪತಕರಿಸಿದ್ದರ ಮೇಲೆ ದೋಷವನ್ನುಂಟು ಮಾ
ಡಿಕೊಳ್ಳುವನೋ. ಅತ್ತನಿಗೆ ಉಕ್ಷ್ಣನ ಬೇಕಾಗಿರುವದೋ? ಬೇ
ಕಾಗಿಲ್ಲದ ಕಾರಣ ತನ್ನ ಕೆಲಸವಲ್ಲಿ ನಿಃಸಂದೇಹವಾಗಿ ಬಡ
ಮಾಸರನು ದೋಷ ಹೊಂದಲರಿಯನು.

ಈ ಉಭಯರ ವಕ್ಷಕ್ಕೂ ನ್ಯಾಯ ಹೂರೆದು ಲಾಭಾ ಲಾ
ಭಗಳಾಗಬೇಕಾದರೆ ದಾನ ಊರವರಿಗೆ ಸರಕಾರದವರು ಈ
ಗೆ ಎಲೆಯನ್ನು ದಯ ಪಾಲಿಸಿರುವರೋ ಮುತು ಮುಂದೆ
ಹೊಸತಾಗಿ ದಯ ಪಾಲಿಸಿರುವರೋ ಆ ಊರವರ ಕಡಿಯಿಂ
ದ ಸಾಲಿಗೆ ದಿನಾಲು(೩)ಹುಡುಗರನ್ನು ಕನಿಷ್ಠ ಪ್ರಕಾರ
ಕಳುಹಬೇಕೆಂದೂ, ಹುಡುಗರಿಗೆ ಬೇಕಾದ ಪುಸ್ತಕಗಳನ್ನು
ಕೊಡಿಸ ಬೇಕೆಂದೂ: ಸಾಲಿಗೆ ಮುನ್ಸಪು ಮಾಡಬೇಕೆಂದೂ
ಕಾಲ ವರ್ತಿಸುದ್ದರೆ ಶಾಲೆಯನ್ನು ಬಂದು ಮಾಡುವ
ರನ ಸಂಬಳ ವೆಚ್ಚಾದದ್ದು ಕೊಡಬೇಕೆಂದೂ,
ಮೇಲೆ ಕರಾರ ನಾಮೆ ಸರಕಾರವು ಬರಸಿ
ಕಟಕದಲ್ಲಿದ್ದ ವಿದ್ಯಹೀನತ್ವವು ಬಹು ವೇಗ
ಣದ ಪಲಾಯನ ಹೊಂದಿ ಸರಕಾರಕ್ಕೆ
ರಿಗೆ ಲಾಭಾಲಾಭಗಳೂ, ನಿರಾಯದಿಂದ

ಜೋರಿಯತಕ್ಕ ಮಾರ್ಗವು ಸುಲಭವಾಗಿ ಹೊರಡಬಹುದು.

ಹೀಗೆ ಮಾಡಿದರೆ ಶಾಲೆ ಸ್ಥಿತಿ ಪರಿಣಾಮ ಹೊಂದುವದು. ಅದು ತ್ವರಿತಕ್ಕೆ ನನ್ನ ಅನುಭವಕ್ಕೆ ಬಂದ ಉದಾಹರಣೆ. ತಾಂ ಮುಂಬೈಕೆ ತಂಗಡಗಿ ಶಾಲೆ ಅವ್ಯವಸ್ಥೆಯುಂಟಾಗಿ ಗಾ, ಮಸ್ಥರು ಮೇಲಿನ ಅನೇ ಕಲ್ಪನ ಪ್ರಕಾರ ನನ್ನ ಕೂಡ ವ ಶೀಸಿವಕ್ಕೆ ಅದು ಪ್ರಸಿ ಎಂಬುವವರ ಬವಬು ಕೆಲ ವ್ಯಕ್ತಿಂಚ ರ ಆಧಾರ ಮೂತ ಕೊಟ್ಟೆ. ಇದಲಿ ಕೊನೆಗೆ ರಾವಸಾಹೇಬ ಮುದ್ದೇಬಿಹಾಳ ಇನೇ ವರ್ಗದ ಮಾಜಿಸ್ಟ್ರೇಟ ಸಾಹೇಬರವರು ಮೇಲಿನ ಕೆಲ ಸಂಸುಜಿಕ ಕರಾರ ನಾಮೆ ಬರಸಿಕೊಂಡು ಸಾ ಲಿ ಸ್ಥಿರ ಇರತಕ್ಕದ್ದೆಂದು ಅಭಿಪ್ರಾಯ ನಮ್ಮ ವರಿಷ್ಠರಿಗೆ ಬರೆ ದ ಕಾರಿಗೆ. ಹಾಗೆ ಆ ಶಾಲಿ ಕೆಲಸ ಕಟ್ಟಳೆಯಂತೆ ಸಾಗಲಾ ರಂಭಿಸಿದರ್ಂ ಯತ್ಕಾಮಾನ ಕೇಳುತ್ತೇನೆ.

ವಿದ್ಯಾಮಾನಕ್ಕೆ ಶಾಲೆ ಸಂಬಂಧ ಗ್ರಾಮನಿವಾಸಿಯವರಿಗೆ ಏ ನು ಕಟ್ಟಳೆ ಇಲ್ಲದಿಂದ ಸವರಿ (ಇನೇ ಕಲ್ಪನಾ) ಕಟ್ಟಳೆ ಮಾಡುವದುಚಿತವಾಗಲಾರದೆಂಬವಕ್ಕೆ ಸಮುಚ ಕಾರಣ ಉದ್ಭವಿಸಲಾರದು. ಒಕ್ಕಲ ಜನರುವಿದ್ಯಾ ಕಲಿಯುವದರಿಂದ ಬಹು ಲಾ ಭಗಳುಂಟೆಂಬುವದು ಅರಿಯದೆ ಮೂರ್ಖತ್ವದಿಂದ ಮೋಸಹೋಂ ಡುತ್ತಾರೆಂಬ ಕಾರಣದಿಂದಲೇ, ಅಮೇರಿಕದ ನ್ಯಾಯಾಕ್ಷ ವ ಟ್ಟಣದ ಸಂಸ್ಥಾನದವರು ಹುಡುಗರನ್ನು ವಿದ್ಯಾಭ್ಯಾಸ ಮಾಡಿ ಸುವ ಬಗ್ಗೆ ಹೊಸ ಕಾಯ್ದೆಯೂ ಜಾರಿಯಾನದವರು ಹುಡುಗರ ನ್ನು ಸರಕಾರಿ ಶಾಲೆಗೆ ಕಳುಹಬೇಕೆಂಬುವ ಬಲತ್ಕಾರ ಮಾ ಡಿದರೇ ಹೊರ್ಮ ಜನರಿಗೆ ಅನ್ಯಾಯ ಮಾಡಲಿಲ್ಲೆಂಬು ದು ತಾವು ನೆನಿಸಬಹುದೆಂದು ಆಶಿಸುತ್ತೇನೆ.

ಈ ಮಾತಿನ ವಿವರವನ್ನು ಮತಾಧೀಶರೇ ಖುದಾಯನಂ ಮಿ. ಲಿ. ಇ. ಸಾಹೇಬ ಬಾಹದ್ದೂರವರ ವಿದ್ಯಾ ಜೆತ್ತಕ್ಕೆ

ಕ್ರೈತಗೊಳಿಸಿದಲ್ಲಿ ತನ್ನು ಈ ಸತ್ಕೃತ್ಯವನ್ನು ನಮ್ಮ ಬಾಂಧವರಾದ ಹಳ್ಳಿ ಗ್ರಾಮದ ವಾಸ್ತರರು ಬಹು ಕೊಂಡಾಡಿ ಹರಿಸುವರು.

ಪತ್ರ ವಿಸ್ತಾರ ಬಹಳಾದ್ದಕ್ಕೆ ಕ್ಷಮೆ ದೊರೆದು ಪತ್ರಿಕೆಯದೆ ಇರಬಾರದೆಂದು ಅಂಗಲಾಚಿ ಬಿನ್ನಂಗ್ಯೆಯುತ್ತಿದ್ದಾ ನೆರವೇರಿಸುವದು ಚೆತ್ಯಾಧೀನವು. ಇಂತಿದೀಕ್ಷೆ ವಿಜ್ಞಾಪನ

ತಾ. ೨೮-೩-೧೮೭೬ನು. ಕೊ } ಸಹಿ ಭೀಮಾಜಿ ಗಣೇಶ ಕು
ಳೂರ ತಾ. ಮು. ಜಿ. ಕ. } ಕರ್ಣಿ, ಸ್ಕೂ. ವಾ. ಕೋಳೂ

ಸೂಚನೆ.

ಕನ್ನಡ ಶಾಲಾ ಪತ್ರಿಕದಲ್ಲಿ ಛಾಪಿಸುವದಕ್ಕಾಗಿ ಬರು ಪತ್ರಗಳಲ್ಲಿ ಕೆಟ್ಟ ಮಸಿಯಿಂದ ತೆಳ್ಳಾನ ಕಾಗದದ ಮೇಲೆ ಮೈಲ್ಮೈ ತುಂಬಾ ಬರೆದಿರುವವ್ವೂ, ವಿರಾಮ ಜೆನ್ನಗಳ ಕಡಿಲಕ್ಷೆ ಕೊಡದೇ ಬರೆದಿರುವವ್ವೂ, ಶಬ್ದ ಬಿಡಿಸದೆ ಬರೆದಿರುವ್ವೂ, ಶಬ್ದರೂಪಗಳ ಶುದ್ಧರೂಪಗಳ ಕಡಿಗೆ ಲಕ್ಷೆ ಕೊಡದೆ ಬರೆದಿರುವವ್ವೂ, ಇಂಥವೇ ಬಹಳ. ಆದದರಿಂದ ನಾವು ಸೂಚನೆ ಮಾಡುವದೇನಂದರೆ ನಮ್ಮ ಕಡೆ ಪತ್ರ ಕಳುಹಿಸತಕ್ಕವರೆಲ್ಲರು ಕಾಗದ ತೆಳ್ಳಗಿದ್ದರೆ ಅದರ ಒಂದೇ ಮೈ ಮೇಲೆ, ಚಲೋ ಮಸಿಯಿಂದ, ಶಬ್ದಗಳನ್ನು ಪ್ರತ್ಯೇಕವಾಗಿ ಬಿಡಿಸಿ, ಶುದ್ಧವಾಗಿ ಬರೆದು ಕಳಿಸಬೇಕು. ಅಂದರೆ ಓದಿಕೊಂಡು ಛಾಪಿಸುವದಕ್ಕೂ ಸುಲಭವಾಗುವದು. ಪತ್ರ ಕಳುಹಿಸಿದವರಿಗೆ ತಾವು ಪತ್ರ ಛಾಪಿಸಿ ಪ್ರಸಿದ್ಧಿಗೆ ಬಂದದರಿಂದ ಮಾಡಿದ ಶ್ರಮವು ಸಾರ್ಥಕವಾಗಿ ಮುಂದೆ ಎರಡನೇ ಪತ್ರಗಳನ್ನು ಕಳುಹಿಸುವದಕ್ಕೆ ಉತ್ತೇಜನವೂ ಹುಟ್ಟುವದು.

ಧಾ. ತಾ. ೨೦ ಏಪ್ರಿಲ ೧೮೭೬ ಎ. ಕನ್ನಡ ಬಾ.

REGISTERED NO. 61
1878

—ಪ್ರಕಟನೆಯು—

—ಪಟಕೀ ಮೇಲೆ ಉತ್ತಮ ಔಷಧವು—

ಪಟಕೀ ಉಪದ್ರವದ ಮೇಲೆ ಉತ್ತಮ ಔಷಧವನ್ನು ಬ
ಡೋದೆಯ ವೈದ್ಯರಾದ ಬಾಳಕೃಷ್ಣರಾವ ಯೆಂಬವರು ತಯಾ
ರ ಮಾಡಿ ಬಡೋದಾ ಮುಂಬಯಿ ಮತು ಮದ್ರಾಸ ಮುಂತಾ
ದ ಇಲಾಖೆಗಳಲ್ಲಿ ಈ ಔಷಧವು ಅನುಭವಕ್ಕೆ ಬಂದಿರುತದೆ.
ಮುಂಬಯಿಯಲ್ಲಿ ಇಂದುಪ ಕಾಶ ಛಾಪಖಾನೆಯಲ್ಲಿಯೂ, ಧಾ
ರವಾಡ ಜಿಲ್ಲೆ ಪ್ಯಕೆಗರಗ ಸ್ಕೂಲಮಾಸ್ತರರ ಮನೆಯಲ್ಲಿಯೂ,
ಯೂ ವೈದ್ಯ ಬಾವಾ ಇವರ ಕಡೆಗೂ ರೋಖ ಹಣಾ ಕಳುಹಿ
ಕೊಟ್ಟರೆ ಔಷಧವು ದೊರಕುವದು— ಗರಗದಲ್ಲಿ ನಾಲ್ಕು ಜನರಿ
ಗೆ ಸಾಕಾಗುವಷ್ಟು ಔಷಧಕ್ಕೆ ೧ ರೂ. ೬ ಅ. ಕೆಮ್ಮಿತ್ತು ಬೀ
ಳುವದು.

ತಾ|| ೧೯ ಫೆಬ್ರುವಾರಿ ಸನ್ ೧೮೭೬ ಇಸ್ವಿ.

ಪ್ರೈವಾಸ್ಯಗೊಳಿಸಲಾಗಿದೆ
ಕರ್ನಾಟಕ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ
ಶ್ರೀ ಗಣಪತಿ ತಂ॥ ಗಣಪತಿ ಭಟ್ಟ ಭಾಗವತರು

ಕನ್ನಡ ಶಾಲಾಪತ್ರಿಕೆ

CANARESE SCHOOL PAPER.

ಪುಸ್ತಕ ೧೨] [ಸಂಚಿಕೆ ೨

ತಾರೀಖು ೨೫ ಮೂಹೆ ಮೇ, ೧೮೭೬.

ಅನುಕ್ರಮಣಿಕೆಯು.

ವಿಷಯಗಳು..... ಪುಟ.

ವಿದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು.....೩೧೩
ನೋಟೀಸಗಳೂ, ಸರಕ್ಯೂಲರಗಳೂ. ೩೧೭
ಪತ್ರವ್ಯವಹಾರವು.....೩೨೦

CONTENTS..... Page
Educational Intelligence.....313
Notices.....317
Correspondence,.....320

BELGAUM.

Printed at the "Belgaum Samachar" Press.

ಶಾಲಾಪತ್ರಕವ್ಯ.

ಪುಸ್ತಕ ೩೨] [ಸಂಚಿಕೆ ೯.

ತಾರೀಖು, ೨೫ನೇ ಮಾಹೆ ಮೇ, ೧೮೬೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮೆಹರಬಾನ ಎಜ್ಯುಕೇಶನಲ್ ಇನಸ್ಪೇಕ್ಟರ ದೊರೆಗಳು ನಡೆದ ತಿಂಗಳ ೧೫ನೇ ತಾರೀಖಿಗೆ ವಾರ್ಷಿಕ ಸವ್ವಾರಿ ತಿರುಗುವದನ್ನು ತೀರಿಸಿ ಬೆಳಗಾವಿಗೆ ತಿರಿಗಿ ಬಂದರು.

ಬರುವ ತಿಂಗಳಲ್ಲಿ ಮೆಂ ಎಜ್ಯುಕೇಶನಲ್ ಇನಸ್ಪೇಕ್ಟರ ದೊರೆಗಳ ಅಪ್ಪಣೆಯಿಂದ ಧಾರವಾಡ, ಕಾರವಾಡ, ಕಲಾದಗಿ, ಬೆಳಗಾವ, ಈ ನಾಲ್ಕ ಜಿಲ್ಲೆಗಳ ಡಿ. ಎಜ್ಯುಕೇಶನಲ್ಲ ಇನಸ್ಪೇಕ್ಟರರು ಬೆಳಗಾವಿಯಲ್ಲಿ ಒತ್ತಟ್ಟು ಕೂಡಿ ದಕ್ಷಿಣ ಭಾಗ ದೊಳಗಣ ಸ್ಕೂಲ ಮಾಸ್ತರರ ಸಂಬಳದ ಸಂಬಂಧದಿಂದ ಎಷ್ಟೋ ಹೆಚ್ಚು ಕಡಿಮೆ ಮಾಡತಕ್ಕವರಿರುತ್ತಾರೆಂದು ಕೇಳುತ್ತೇವೆ.

ಮಿಸ್ತರ ಶೈತಸ ಕಾಸ್ಟ್ಲ ಇವರಿಗೆ ಕಾರವಾದವಲ್ಲಿ ಹೊಸ

ಡಾಗಿ ಆಗತಕ್ಕ ಹೈಸ್ಕೂಲಿನ ಹ. ಮಾ. ಕೆಲಸಕ್ಕೆ ನೇಮಿಸ
ಕ್ಕವರಿರುತ್ತಾರೆಂದು ಕೇಳುತ್ತೇವೆ.

ಉತ್ತರ ಕಾನಡಾ ಜಿಲ್ಲೆಯ ಡಿಪ್ಯೂಟಿ ಎ. ಇನಸ್ಪೇಕ್ಟರ
ರಾದ ರಾ. ಸಾ. ರಾಮಚಂದ್ರ ವಿನಾಯಕ ಭಾನಪ ಇವರ
ಮೂರು ತಿಂಗಳ ಹಕ್ಕಿನ ರಜೆ ತಕ್ಕೊಂಡಿರುವ ಕಾರಣ. ಕ
ಮಠಾ ಇಂಗ್ರಜೀ ಸಾಲೇ ಹೆಡ ಮಾಸ್ತರರಾದ ರಾ. ರಾ. ಶ್ರೀ
ಪತರಾವ ಭಾತಖಂಡೆ ಇವರು ಆ ಕೆಸವನ್ನು ಅಕ್ಟಿಂಗ ತರೀಕ
ನೋಡುತ್ತಾರೆ.

ಧಾರವಾಡ ಜಿಲ್ಲೆಯ ಡಿ. ಎಜ್ಯುಕೇಶನಲ್ ಇನಸ್ಪೇಕ್ಟರ
ರಾದ ರಾ. ಸಾ. ಚನ್ನಬಸಪ್ಪಾ ಬಸಲಿಂಗಪ್ಪಾ ಇವರು ಮೂ
ರು ತಿಂಗಳ ಹಕ್ಕಿನ ರಜೆ ತಕ್ಕೊಂಡಿರುವ ಕಾರಣ ಅವರ ಆ
ಫೀಸಿನ ಕೆಲಸದ ಚಾರ್ಜು ರಾ. ಸಾ. ಪಾಂಡುರಂಗ ವೆಂಕ
ಟೇಶ ಚೆಂತಾಮಣಿಪೇತಕರ ಇವರ ಕಡಿಗೆ ಇರುತ್ತದೆ.

ಧಾರವಾಡ ಹಾಯಿಸ್ಕೂಲಿನ ಇ ನೇ ಮದ್ದ ತನೀಸರಾದ
ರಾ. ರಾ. ವಿಠ್ಠಲ ರಾಮಕೃಷ್ಣ ಮಹಿಸಾಳಕರ ಬಿ. ಎ. ಇವ
ರು ತ್ರಿದೋಷ ಜ್ವರದಿಂದ ನಡೆದ ತಿಂಗಳ ೪ ನೇ ತಾರೀಖಿನ
ತಮ್ಮ ಊರಲ್ಲಿ ತೀರಿಕೊಂಡರು. ಇವರು ಚೆಕ್ಕ ಪ್ರಾಯದ
ವರಾದಾಗ್ಯೂ ಬಹಳ ಸುಜನರೂ ಸೂಸ್ವಭಾವಿಗಳೂ,
ದ್ಯಾಂಸರೂ ಇದ್ದರು.

ವಿಲಾಯತಿಯಲ್ಲಿ ಪ್ರಸಿದ್ಧ ಸಂಸ್ಕೃತಜ್ಞರಾದ ಮೋಕ್ಷ
ಲ್ಲರ ಸಾಹೇಬರು ಪೃಥ್ವಿಯ ಮೇಲೆ ನಡೆಯುತ್ತಿರುವ ಬಾ

ಬೌದ್ಧ, ಜೈನ, ಮುಸಲ್ಮಾನ, ಕನಫ್ಯೂಸಿ, ಲಾವೋಸಿ ಎಂ
ಆರು ಮುಖ್ಯ ಧರ್ಮಗಳ ಮೂಲ ಪುಸ್ತಕಗಳನ್ನು ಛಾಪಿ
ಪ್ರಸಿದ್ಧ ಮಾಡತಕ್ಕವರಿದ್ದಾರೆ. ಯೂರೋಪಖಂಡದೊಳಗ
ಹೆಸರಾದ ಎಷ್ಟೋ ಪಂಡಿತಜನರು ಈ ಕೆಲಸದಲ್ಲಿ ಅವ
ಸಹಾಯ ಮಾಡುವರಿದ್ದಾರೆ.

ವಿಲಾಯತಿಯಲ್ಲಿ ಹ್ರೋದ ಹತ್ತು ವರುಷದಲ್ಲಿ ಪಾರ್ಲಿಮೆಂ
ಸಭೆಯವರ ಮಂಜೂರಿಯಿಂದ ಮೂಲ ಶಿಕ್ಷಣಕ್ಕಾಗಿ
,೧೪೨,೭೭೦ ರೂಪಾಯಿ ಪೆಚ್ಚಾಗಿರುತ್ತವೆ.

ಇಂಗ್ಲಂಡದಲ್ಲಿಯೂ ವೇಲ್ಸದಲ್ಲಿಯೂ ಕೂಡಿ ಸಾಲಿಗೆ
ೀಗತಕ್ಕಂಥ ಅಂದರೆ, ಮೂರರಿಂದ ಹದಿಮೂರು ವರ್ಷ ವ
ಸ್ಸಿನ ಹುಡುಗರ ಸಂಖ್ಯೆ ೫,೩೭೪,೭೦೧ ಅದೆ.

ಬಂಗಾಲ ಸಿವಿಲ ಸರವಿಸದೊಳಗಿನ ಜೊರೂವ ಎಂಬುವ
ಒಂದು ಹೊಸ ಇಂಗ್ಲೀಸಂಸ್ಕೃತ ಕೋಶವನ್ನು ಮಾಡಹ
ತ್ತಾರೆ. ಮುಂಗಡ ಕಾಯ ೨೦ ರೂಪಾಯಿ ಇಟ್ಟಿರು
ತೆ.

ಗೋವಾಂತಕದಿಂದ ಹೆಚ್ಚು ಕಡಿವೆ ೧೪ ಮೈಲುಗಳ ಮೇ
ಸಾತೆಂದವು ಎಂಬ ಊರ ಹತ್ತರ ಒಂದು ದೊಡ್ಡ ಘನ
ಶೈವಿದ್ಯಾ ಅದರಲ್ಲಿ ಗಿಡಗಂಟಿಗಳಿಲ್ಲ ಕಲ್ಲಿನವಾಗಿವೆ
ರು, ಡಾಕ್ಟರ ಮಾರಜೆಸ್ಸಿ ಎಂಬ ವಿದ್ವಾಂಸನು ಗೊತ್ತು
ರುತಾನೆ. ಜ್ವಾಲಾಮುಖಿಯಿಂದ ನೆಲವದರಿ ಬಿರಕುಬಿ
ಬಿಡಗಳು ಕಿತ್ತು ಬಿದ್ದು, ಮುಂದೆ ಎಷ್ಟೋದಿವಸ ಒಳಗೆ

ಹೊಳಿದ್ದದರಿಂದ ಈ ಪ್ರಕಾರವಾಗಿರಬಹುದೆಂದು ಆತನ ಸ
ರ್ವವ್ಯಂಟು.

ನಮ್ಮ ಇಲಾಖೆಯಲ್ಲಿಗಾಂತ ಬಂಗಾಲದಲ್ಲಿ ಸ್ತ್ರೀ ಶಿಕ್ಷಣದ
ಪ್ರಸಾರವು ವಿಶೇಷನಾಗಿದೆ. ಆದದರಿಂದ ಸ್ವಲ್ಪ ದಿವಸದ ಕ
ಳಗೆ ಡಾಕ್ಟರ ಬಾನರಜೆ ಎಂಬ ಬಂಗಾಲೀ ಪಂಡಿತನ ಮಗ
ಳಾದ ಮಿಸ್ ಬಾನರಜೆ ಇವಳಿಗೆ ಚೊವಿಸ ಪರಗಣೇ ಜಿಲ್ಲೆ
ಯಲ್ಲಿರುವ ಹೆಣ್ಣುಹ್ರುಡುಗೆಯರ ಸಾಲೆಗಳ ಇನಸ್ಪೇಕ್ಟರ
ಕೆಲಸಕ್ಕೆ ನೇಮಿಸಿದರು. ಹೆಣ್ಣುಮಕ್ಕಳ ಸಾಲೆಗಳಲ್ಲಿ ಕಲಿ
ಸುವವರೂ, ಅವರ ಪರೀಕ್ಷಕರೂ ಆದವುಟ್ಟಿಗೆ ಹೆಂಗಸರೇ
ಇದ್ದರೆ ಸ್ತ್ರೀ ಶಿಕ್ಷಣಕ್ಕೆ ದೊಡ್ಡ ಸಾಹ್ಯವಾಗುವದು.

ಹ್ರುಡುಗರು ಉಡಾಳರಾಗಬೇಕಾಗಿದ್ದರೆ ಮುಂದೆ ಹೇಳಿರು
ವ ಉಪಾಯ ಮಾಡಬೇಕು:-ಒಳ್ಳೆ ಧಪ್ಪವುಪ್ಪ ಕಸವುಳ್ಳ ಹ್ರು
ಡುಗನನ್ನು ಒಯ್ದು ಹ್ರುಡುಗರು ದಟ್ಟಣೆಯಾಗಿ ಕೂಡಿ
ರುವಂಥ ಒಂದು ಕೋಣೆಯಲ್ಲಿ ಕುಳ್ಳಿಸಬೇಕು. ಅಲ್ಲಿ
ಅವನು ತಲೆಯತ್ತಿ ಅತ್ತಿತ್ತ ನೋಡಿದ ಕೂಡ್ಲೆ, ಒಳ್ಳೇ ಹ್ರೊ
ಡೆಯಬೇಕು, ಕೂತಲ್ಲಿ ಅತ್ತಿತ್ತ ತುಸು ಸರಿದಾಡಿದ ಕೂಡ್ಲೆ
ಹ್ರೊಡೆಯಬೇಕು. ಸಾಲಿಗೆ ಬರಲಿಕ್ಕೆ ತುಸು ತಡವಾಡಿದ
ಕೂಡ್ಲೆ ಹೊಡೆಯಬೇಕು. ಕೇಳಿದ ಪ್ರಶ್ನೆಕ್ಕೆ ಅವನು ಉತ್ತ
ರ ಕೊಡದೇಹೋದರೆ "ನೀನು ತೀರ ಮೂರ್ಖನಿದ್ದೀ ತಿಳಿಗೇ
ಡಿ ಇದ್ದಿ" ಎಂದು ಅನ್ನಬೇಕು; ಅವನು ಮಾಡಿದ್ದಕ್ಕೆಲ್ಲ ತ
ಪ್ಪು ಹಚ್ಚುಬೇಕು. ಅವನು ಏನಾದರು ಒಳ್ಳೇ ಕೆಲಸಮಾಡಿದ
ರೆ ಆಶ್ಚರ್ಯಪಟ್ಟಂತೆ ತೋರಿಸಬೇಕು; ಹೀಗೆ ಮಾಡುತ್ತಾ
ಹೋದರೆ ಅವನು ನಿಶ್ಚಯವಾಗಿ ಉಡಾಳನಾಗುವನು.

ಕಳೇದ ಎಪ್ರೀಲ ತಿಂಗಳ "ಎಜ್ಯುಕೇಶನಲ್ ರೆಕಾರ್ಡ್" ಪತ್ರಿಕದೊಡನೆ, ಹೋದ ನೋವೆಂಬರ ಒನೇ ತಾರೀಖಿನ ದಿವಸ ಮುಂಬಯಿ ಇಲಾಖೆಯೊಳಗಣ ವಿದ್ಯಾಖಾತೆಯಲ್ಲಿದ್ದ ೩೦ ರೂಪಾಯಿಗಿಂತ ಹೆಚ್ಚಿನ ಸಂಬಳುಳ್ಳ ಯಾವತ್ತು ಕಾಮದಾರರ "ಡೈರೇಕ್ಟರಿ" ಛಾಪಿಸಿರುತ್ತಾರೆ. ಅದರ ಮೇಲಿಂದ ತಿಳಿಯುವದೇನಂದರೆ, ಆ ತಾರೀಖಿಗೆ ವಿದ್ಯಾಖಾತೆಯಲ್ಲಿ ಒಟ್ಟಿಗೆ ೭೪೩ ಕಾಮದಾರರು ೩೦ ರೂಪಾಯಿಗಿಂತ ಹೆಚ್ಚಿಗೆ ಸಂಬಳ ತಕ್ಕೊಳ್ಳುವರಿದ್ದರು, ಇವರಲ್ಲಿ ೬೫ ಜನರು ವರಿಷ್ಟಪ್ರತೀ ಕಾಮದಾರರೆಂತಲೂ ಉಳಿದ ೭೦೬ ಜನರು ಕನಿಷ್ಟಪ್ರತೀ ಕಾಮದಾರರೆಂತಲೂ, ಭೇದ ಉಂಟು. ಡೈರೆಕ್ಟರ, ಇನಸ್ಪೇಕ್ಟರರೂ, ಪ್ರೋಫೆಸರರೂ, ಒನೇ ಒನೇ ಪ್ರತಿ ಹಾಯಸ್ಕೂಲಗಳ ಹೆಡ್ಡಮಾಸ್ತರರೂ, ಕೆಲವು ಟ್ರೇನಿಂಗಕಾಲೇಜಗಳ ಪ್ರಿನಸಿಪಾಲರೂ ವರಿಷ್ಟಪ್ರತಿ ಕಾಮುಕಾರರೆನಿಸುವರು. ಈ ಪ್ರತಿಯಲ್ಲಿ ತಿಂಗಳೊಂದಕ್ಕೆ ೨೦೦೦ ರೂಪಾಯಿಂದ ೨೦೦ ರೂಪಾಯಿ ತನಕ ಸಂಬಳುಳ್ಳ ಕಾಮದಾರರಿರುವರು. ಉಳಿದವರೆಲ್ಲ ಕನಿಷ್ಟಪ್ರತಿ ಕಾಮದಾರರು. ಕನಿಷ್ಟಪ್ರತಿಯಲ್ಲಿ ೩೦೦ ರೂಪಾಯಿಯಿಂದ ೩೦ ರೂಪಾಯಿತನಕ ಸಂಬಳದವರು ಇರುವರು.

NOTICES AND CIRCULARS.
ನೋಟಿಸಗಳೂ, ಸರಕ್ಯೂಲರಗಳೂ.

ಚೆಂನಮುಳಗುಂದ ಶಾಲೆಯ ಮಾಸ್ತರರಾದ ರಾಮಚಂದ್ರ ಗುಂಡೋ ಮುಂಡಗದ್ದಿ ಇವರು, ತಮ್ಮ ಕೆಲಸವನ್ನು ಚಂನಾಗಿ ಮಾಡದೆ ಸೀಕ ಸಬಬಿನಿಂದ ರಜಾ ತೆಗೆದುಕ್ಕೊಂಡು, ಪ್ರೋದರು ಮತ್ತು ಆ ಸಾಲೀ ಪರೀಕ್ಷೆಗೆ ನಾವು ಹೋದಸಮಯದ

ಲ್ಲಿ, ಆ ಊರ ಜನರನ್ನೂ, ವಿದ್ಯಾರ್ಥಿಗಳನ್ನೂ, ಈ ಮಾಸ್ತರರು ಸೀಕ ಇರುವದು ನಿಜವೆಂಬ ಬಗ್ಗೆ ವಿಚಾರಿಸಲಾಗಿ, ನಮಗೆ ಖಾತ್ರಿಯಾಗಲಿಲ್ಲ. ಶೀಕರಜಾ ತೆಗೆದುಕೊಂಡು, ತಮಗೆ ಹೆಂನವುಳಗುಂದದ ಹವಾ ತಡಿಯುವದಿಲ್ಲ. ಆದಕಾರಣ ಈ ಮ್ಮ ಬೆಳಗಾಂವಿ ಜಿಲ್ಲೀಗಾಗಲೀ. ಕಲಾದಗಿ ಜಿಲ್ಲೀಗಾಗಲೀ, ವರ್ಗಮಾಡಬೇಕೆಂದು ಮೇಹರ್ಬಾನ ಎ. ಇವಸ್ಪೇಕ್ಟರ ಸಾಹೇಬರವರ ಕಡಿಗೆ ಅರ್ಜಿಯನ್ನು ಮಾಡಿಕೊಂಡರು. ಆ ಅರ್ಜಿಯ ವಿಷಯದಲ್ಲಿ ನಾವು ರಿಪ್ರೋಟು ಮಾಡುವಾಗ್ಯೆ ಸದರ ಮಾಸ್ತರರು, ಚೆಂನಾಗಿ ಕೆಲಸ ಮಾಡದಕಾರಣ ಅವರ ಸಂಬಳವನ್ನು ೫ ರೂಪಾಯಿ ಕಡಿಮೆ ಮಾಡಬೇಕೆಂದು; ಮೇಹರ್ಬಾನರವರಿಗೆ ಶಿಫಾರಸ ಮಾಡಲಾಗಿ, ಅವರು ನಮ್ಮ ಬರಹವನ್ನು ಮಂಜೂರಮಾಡಿ ನಡೆದ ಸಂಗತಿಯಂನೆಲ್ಲ, ಶಾಲಾಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲ ಮಾಸ್ತರರು ತಮ್ಮ ಕೆಲಸವನ್ನು ಲಕ್ಷವಿಟ್ಟು ಮಾಡತಕ್ಕದ್ದು.

ಶಾರೀಖು ೫
ನೇಮೇ ಸಂನ
೧೮೭೬ ಇಸ್ವಿ.

Shriniwas K Savadi

ಡಿ. ಎ. ಇನಸ್ಪೇಕ್ಟರ ಜಿಲ್ಲಾ ಧಾರವಾಡ.

ಕಲಾದಗಿ ಜಿಲ್ಲೆಯೊಳಗಿನ ವರ್ಗಾವರ್ಗಿಗಳು.

ಮಾಹೆ ಎಪ್ರೇಲ ೧ ೭೬ ಇಸ್ವಿ ತಿಂಗಳಲ್ಲಿ ಆದದ್ದು.

ರಾಮಚಂದ ಶೀನಿವಾಸ ವಾಡೆ ಅಶಿಷ್ಟಣ ಮಾಸರ ಗುಳೇದಗುಡ್ಡ ನಂಬರ ೧ ಇವರಿಗೆ ಅವ ಸಂಬಳದ ಮೇಲೆ ಇಂಡಿ ತಾಲೂಕ ಪ್ಕಿ ಅಗರಖೇಡ ಹ್ರೊಸಾ ಸಾಲಿಯ

ಮಾಸರ ಕೆಲಸಕ್ಕೆ ನೇಮಿಸಿದೆ. ಸಂಬಳ ೩೨ ರೂ.
ಗೋವಿಂದ ಕೇಶವ ಟ್ರಿಂಡಮಾಸರ ಇವರನ್ನು ಬಾದಾ
ಮಿ ತಾಲೂಕ ಪೈಕಿ ಮುದಕವಿ ಸಾಲಿಯ ಹೆಡ್ಡಮಾಸ್ತರ
ಕೆಲಸಕ್ಕೆ ನೇಮಿಸಿದೆ. ಸಂಬಳ ರೂ. ೩೪.
ಗೋಪಾಳ ವೆಂಕಟೇಶ ಸ್ಕೂಲಮಾಸ್ತರ ಮುದಕವಿ ಇವ
ರು ಸಾಲಿಯ ಕೆಲಸ ಚಂನಾಗಿ ಮಾಡದೆ ಇರುವಕಾರಣ ಇವರಿಗೆ ೩೪ ರೂ. ಸಂಬಳದಿಂದ ೩೨ ರೂ. ಸಂಬಳ ಮಾಡಿ, ಗುಳೇದಗುಡ್ಡ ನಂಬರ ೩ ನೇ ಸಾಲಿಯಲ್ಲಿ ಅಶಿ ಷ್ಟಣ ಮಾಸರ ನೇಮಿಸಿದೆ.

ತಾ|| ೨೭ ಮಾಹೆ } P. A - Savnur
ಮೇ ೧೯೨೭ ಇ. } ಡಿ. ಎ. ಇ. ಜಿಲ್ಲಾ ಕಲಾದಗಿ.

ನಂಬರ ೩೪೩.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತೂ ಸ್ಕೂಲಮಾಸ್ತರರಿ
ಗೆ ತಿಳಿಪಡಿಸುವದೇನಂದರೆ. ಮುದ್ದೇಬಿಹಾಳ ತಾಲೂಕ ಪೈಕಿ
ಬಸರಕೋಡ ಸಾಲಿಯ ತಪಾಸಣೆಗೆ ತಾ. ೧೦ ಮೇ ೧೯೨೭
ದಿವಸಾ ನಾವು ಹೋಗಿದ್ದಿವಿ ಆಗ್ಯೆ ಅಲ್ಲಿಯ ಅಂಣಾಜಿ ಬಾಳ
ಕೃಷ್ಣ ಮಾಸರನು ಪರವ್ಯೂರಿಗೆ ಹೋಗಿದ್ದನು. ತಾನು ತಾರೀ
ಖ ೫ನೇ ಮೇ ದಿವಸಾ ಹೋಗಿದ್ದು ಆ ತಾರೀಖು ಹಾಕದೆ
ಮುಂದಿನ ತಾರೀಖು ಹಾಕಿ ಕೊಡುವ ಇರಾದೆಯಿಂದ ಬಿನ್ನ
ತಾರೀಖಿನ ರಿಪೋರ್ಟ ಒಬ್ಬ ವಿದ್ಯಾರ್ಥಿಯ ಕೈಯಲ್ಲಿ ಕೊ
ಟ್ಟು ಹೋಗಿದ್ದನು. ಇಹೇ ಪ್ರಕಾರ ಬಾರನೀಸಿಯಲ್ಲಿ ಸಹ
ತಾರೀಖು ಹಾಕಿದ್ದಿಲ್ಲ. ಇದು ಮೆ. ಎ. ಇನಸ್ಪೇಕ್ಟರ ಸಾಹೇಬ

ಬಹಾದ್ದೂರವರ ನಜರಿಗೆ ತಂದು ಅವರು ಗೈರಹಾಜರಾದ ದಿವಸದ ಸಂಬಳಾ ಕೊಯಿದದ್ದಲ್ಲದೆ ಅವನಿಗೆ ಒಂದು ತಿಂಗಳ ಸಂಬಳಾ ದಂಡಮಾಡಿರುತ್ತದೆ.

ಮೇಲಿನ ಮಜಕೂರ ಯಾವತ್ತೂ ಮಾಸ್ತರರು ನೋಡಿ ಜಾಗ್ರತೆಯಿಂದ ವಹಿವಾಟ ಇಡಬೇಕು.

ತಿಳಿಯುವದು ತಾ. ೨೪ ಮೇ ೧೮೭೬ ಇಸ್ವಿ. } R. A. Savnur
ಬಿ. ಎ. ಇ. ಜೆಲ್ಲಾ ಕಲಾದಗಿ.

CORRESPONDENCE.

ಪತ್ರವ್ಯವಹಾರವು.

ವಸಂತಋತುವರ್ಣನಂ

ಆರ್ಯಾವೃತ್ತಂ

आर्यावृत्तम.

श्रीरामानंदरसा—लारामवराभिरामसुवसंतः
गोराजावनशीलोमारमणो ऽवतुनुवंतियंसंतः ॥१॥

॥ಶಾರ್ದೂಲ॥ ಪ್ರಾಗೋಲ್ ವಿಲ್ಲದಸ್ಮೈದೆ ದಿಗ್ವಿಜಯಯಾತ್ರಾರಂಭಮಂ ಮಾಡವೇ।
ಳ್ಕೀಗಳ್ ನುಂತ್ರಿ ವಸಂತನಂ ಕರೆದುಕೊಂಡ್ಕೆ ತಪ್ಪ್ ದೊಡೆಂದೆನಲ್॥

ಕಾಗುಬ್ಬಿಂ ಮಲಯಾದ್ರಿಯಂನೆಡವಿ ಬರ್ಪಪ್ರೇಶನೋ
ಲ್ ಬಂದುವ್ಯೆ।
ದಾಗಲ್ ಮಂದಸುಗಂಧವಾಯು ವಡನ್ಯೆತಂತಾವಸಂತ
ಗಮಂ ॥೧॥

ಇದ್ದಿದ್ದಾ ಮಲಯಾದ್ರಿಯಲ್ಲಿ ಪವನಂ ಬೀಸತ್ತು ತೀರ್ಥಾ
ಟನ।
ಕ್ಕೆದ್ದಲ್ಲಲ್ಲಿಹ ಪುಣ್ಯತೀರ್ಥಗಳೊಳುವಿಯುತ್ತೆಂತದ್ಯೋ
ಗದಿಂ॥
ಶುದ್ಧಂ ವೀತರಜಸ್ಕನಾಗಿ ನಡೆಯುತ್ತೊಯ್ಯೊಯ್ಯನಧ್ಯ
ಶ್ರಮಂ
ಬೊದ್ದಾವೋದಸುಶೈತ್ಯನಿರ್ಮಲತೆಯಂ ತಾಳ್ದತ್ತಣೊಂದೈ
ದಿದಂ॥೨॥

॥ಕಂದಂ॥ ಜ್ವಲನಸ್ನೀಹದೆ ತಾಪಂಗೊಳಲಾರದೆ ತೆಂಕಗ
ಡಲ ಸಾರ್ದವನಸಖಂ॥
ಮುಳುಗಿ ಮಲಯಾದ್ರಿವಾಸಂ ದಳಿದಾಂತಂ ಶೀತಸುರಭಿ
ಯಂ ಬಹನಲ್ಲಿಂ॥೩॥

॥ಮತ್ತೇಭ॥ ಮೊದಲಂಗ್ಗಾಂಗಳ ಸೊಂಕಿ ಶೀಳಿರುವದೀಗಾ
ಹ್ಲಾದವಂನೀವ್ರುದಾ।
ಗೆ ಧರಿತ್ರೀಜದಳ್ಳಾಳಿಯಂನುದರಿಸಿತ್ತೀಗಂಕುರಂ ದೋ
ರಿಸು।
ತ್ತದೆ; ಪುಷ್ಪಾಂತಕವೂಾದುದಾಗೆ ಕುಸುಮಾಮೋದಂಗಳಂ
ನೀವ್ರುದೀ।
ಗಿದಪೂರ್ವಸ್ಥಿತಿಯೂಯ್ತು ವಾಯು· ಬಗೆಯಲ್ಕೀವಾತೆ
ಜ್ಞೈತ್ರಾಸ್ಪದಂ॥೪॥

॥ಮಾಲಿನೀ॥ ಸೆಳೆಯೆ ಮಲಯವಾತಂ ಸೌರಭಶ್ರೀಸಮೇತಂ।

ಪ್ರೂಳಯ ರಸರಸಾಲಾ ಪಲ್ಲವಾಂಕೂರಜಾಲಂ॥
ಮೊಳೆಯೆ ಕಳಿಯಲಾಗಲ್ ಮಾಗಿಪ್ರಪ್ಪಂಗಳಾಗಲ್।
ಸುಳಿಯಲಳಿ ಲಸಂತಂ ಸಾರಿದಂಶಿವಸಂತಂ॥೫॥

॥ಮತ್ತೇ ॥ ಸುವನಕ್ಷ್ಮಾಜಲತಾಳಿ ಭೋಗಿಚಯಕೆತ್ತು,
ಸ್ಪರ್ಶನಾಮೋದಮಂ।
ಭುವನಾಹ್ಲಾದಕನಾದೊಡೇಂ ತೆಗೆ! ವಿಯೋಗಿವ್ರಾತದೋ
ಳ್ ವೈರಿವಾ॥
ಧವಜಾತಾಶುಗಭಾವವಂ ಪ್ರಕಟಿಸಲ್; ನೊಂದಾಜನಂ ಬೈ
ದರೀ-
ಪವಮಾನಂ ಗತಿಗೆಟ್ಟು ತಾಳ್ದನದರಿಂ ಮಂದಾನಿಲಾಹ್ವಾ
ಗಮಂ॥೬॥

॥ವಾಕ್ಯ೦॥ ಹಾಗಲ್ಲೆಂದೊಡೆ।

॥ಮತ್ತೇಭ॥ ಗೆಳೆಯಂ ತಾಪವನೀವನಲ್ಲಿರದೆ ಪೋಗಲ್ಕೆಲ್ಲಿ
ಯುಂ ಪಂನಗಂ।
ಗಳು ನಂನಂಗಡನುಂಗಿಬಿಟ್ಟಪವ್ರ; ಭುಕ್ತೋಚ್ಛಿಷ್ಟನಾಗಿ
ರ್ಪೆನಾ॥
ಗಳುಮಯ್ಯೋ! ಬರಿದೇ ವಿಯೋಗಿ ನಿಕರಂ ಬೈದಪ್ಪು
ದೇನೇವೆನೆಂ।
ಬಳಲಿಂ ಕೇಮರಗಲ್ಲಳಂ ಬರುತೆ ಪಾಯ್ವಾಸತ್ತು ವಾಂ
ದ್ಯಾಸ್ಪಿತಂ ॥ ೭ ॥

॥ಗದ್ಯ೦॥ ಇಂತು ಮಲ್ಲೆಂದೊಡೆ:

॥ಶಿವರಣೇ॥ ವಸಂತಂ ನಿಂನೋಪಂ ಸ್ತ್ರೀರಸಜ್ಞತುವಕ್ಕುದಿ
ವಿಯೋ।
ಗಿಸಂದೋಹಕ್ಕಾದಂ ಪಗೆ ಮದನ ತುಷ್ಟ್ಯರ್ಥಮಿನನಿಂ॥
ಗೆ ಸಾಹಿತ್ಯಂ ಗೈಯಿಂದರುಪ್ಪುವ ರಹಃಕಾಮುಚರನಂ।

ತಿಸಲ್ಗಂ ಮಾಂದ್ಯಂದಾಳ್ದು ಸುಳಿವೆಲರುದ್ಯಾನರಮೆಯೋ
ಲ್ ॥ ೪ ॥

।ವಚನ೦॥ ಇದೆನಲ್ಲೆನೆ:

ಮತ್ತೇಭ॥ ಮದನೋರ್ವೀಶ್ವರ ದರ್ಶನಾರ್ಥಕೆ ವಸಂತಾ
ಮೃತ್ಯನ್ನೆತರ್ಪಮಾ;
ಗ್ರದಿ ತಂಡಾ ಮಲಯಾದ್ರಿಯೋಳ್ ಬಹುಸುಗಂಧದ್ರವ್ಯ
ಮುಂ ಕೊಂಡು ಪೇ;
ದನಾವಾತಚರೋತ್ತಮಾಂಗದೊಳನಂಗೋಪಾಯನಕ್ಕೊ
ಯ್ಯಲೆಂ;
ದರಿಂ ಗಂಧವಹಾಖ್ಯವಾಂತನವನಾದಂ ಮುಂದನುಭೂರ
ದಿಂ ॥ ೯ ॥

॥ನುಡಿ॥ ಇಂತು ನಿಷ್ಕಾರಣದೋಷಾವಿಷ್ಕರಣಂ ಯೋ
ಗ್ಯಮತ್ತೀಕೆನೆ:

।ದೂರ್ಲ೦॥ ಕಾಣ್ಮೆ ತಾನೆ ಜಗದ್ಧಿತಾರ್ಥಯೊಲಿದಿತ್ತುಂ
ಪ್ರಾಣಸಂದಾನವಂ।
ನೇಣಾಶ್ವಂ ತ್ರಿಜಗಚ್ಚರಾಚರಕೆ ತನ್ನಂ ಪ್ರಜ್ಞೆರಿಂದಂ ಜ
ಗತ್॥
ಪ್ರಾಣಂ. ಸ್ವರ್ಕನನೆಂಬ ನಾಮುಗಳ ನಾಂತಿರ್ಗತ ಸ್ವಾ
ರ್ಥಗಂ।
ಜಾಣರ್ಮಂದ ಸವಿರನೆಂಬರದಸೂಯಾರೋಪಮೇನಲ್ಲ
ವೇ? ॥ ೧೦ ॥

॥ವಾಕ್ಯ೦॥ ಅಲ್ತು ಅದೆಂತೆಂದೊಡೆ:

॥ಮತ್ತೇಭ ॥ ಅತಿಸರ್ವತ್ರ ವಿವರ್ಜಯೇತ್ಕ್ರಿಯನನೀತ್ಯಾ
ದ್ಯತ್ಯದಿಂ ವಿರಿದಾ।
ದಿತಿಪುತ್ರಂ ಬಲಿಯುಂಡು ದಿಲ್ಲವೆ ಫಲಂ? ಪ್ರಾಣಪ್ರದಾ

ನಂ ಗುಡಲ್ ||

ಸ್ಥಿತಿಗಾಘಾತಮದಾಗದೇ? ಸಕಲಭೂತಾಭುಕ್ತ್ಯಶೇಷಂಸುಮಂ
ದತೆಯಂ ತಾಳನೆ ಮಂದನೆನ್ನರೆ ಬುಧರ್ ? ಸ್ವಾತ್ಮಘ್ನ
ಗಂ ವಾಯುಗಂ ||೩೩||

||ವಿಬುಧಪ್ರೀ|| ಛೇ ಕುಯುಕ್ತಿ ವಿಯುಕ್ತನಿಂದೆಯಿದುಕ್ತ
ಮಲ್ತುಸವಿೂರಣಂ
ಗೀಕುಕಲ್ಮಷನಾಶಕಂ ಗಖಿಳಾಸು ಧಾರಣಾ ಕಾರಣಂ
ಗೇಕೆ ? ವಿಷ್ಣುವರಾತ್ಮಜಂ ; ಜಗದೇಕಜೀವನದಾನಿ.ಯ
ಸ್ತೋಕೆಸದ್ಗತಿಯುಕ್ತನಿಂಗೆನೆ ಮಂದನೆಂದದ ಸೂಯೆಯೈ
||೩೪||

||ಮಹಾಸೈಗ್ಧರಾ|| ಮಲಯಪ್ರಾಲೇಯಶೈಲಾಗ್ರದೊಳುದಿ
ಸಿ, ನಭಃಪಾತ್ರಮಂತೀವಿ, ಮಿಕ್ಕ್ಯು-
ದಿ, ಲಸತ್ಕಾಷ್ಠಾಪ್ರತೀರಂಗಳೊಡೆಯೆ; ತಳಿದಾವೋದ ಡಿಂ
ಡೀರಮುಂ; ಬಂ-
ದೊಲವಿಂ ದಾರಾಮುಕಾಶೀಸ್ಥಲದೊಳೆ; ಮಧುವಿಶ್ವೇಶ್ವರಸ್ನೇ
ಪನಂ ಗೈ-
ಸಿಲಿಯೊಳ್ ಶೀತಾನಿಲಸ್ಪರ್ಶದಿ ಪರಿದುದು ಸೊಂಕಲ್ ಜ
ನಂ ಸೌಖ್ಯವಿೂವಾ||೩೫||

||ವಸಂತತಿಲಕ|| ತಂಗಾಳಿ ಸೊಂಕಿ ಮೃದುಶೀತಲತೆಯಿಂದೆಮ್ಮೈಗೆ।
ತಂಗೆಳೆಯುಂ, ನವಸುಗಂಧದಿನಾಸೆಗಂ, ಕ||
ರ್ಣಂಗಳ್ಗವಾಸಹಚರಾಳಿಸುಗಾನದಿಂಸೌ।
ಖ್ಯಂಗೊಟ್ಟು ಮೂಜಗವವೋಹಿಸಿಪರ್ವಿತಾಗಳ್ ||೩೬||

||ಮತ್ತೇಭ|| ವನಶೋಭಾರಮೆಯೆನ್ನ ಗಲ್ಕೆ ಗೊಣಗಿಪ್ಪಳ್;
ಪೋಗವಳ್ಗೀಗೆ ಬ-
ವೆ ನುನಾನೆಂಬಸುವಾರ್ತೆಯನ್ನರುವೆನಲ್ ಶ್ರೀಮಾಧವಂ

ಬಿಂದುಪೇ।

ಳ್ವನಮಾಶಿತಸುಗಂಧವಾಯು ಸುಳಿಯಲ್ ರೋಮಾಂಚ
ನಂ ಹೂಳ್ದಳೆಂ-
ದೆನಲೊಪ್ಪಾಳ್ದುದು. ಪಲ್ಲವಾಂಕುರಚಯಂ ತದ್ಯಾತದಾ
ಮೋದದಿಂ॥ ೫೫॥

ವಾರ್ಧಿಕಪದಿ ॥ ಜಡರಾಜನಾಜ್ಞೆಯಿಂಪಿಂತೆಗಂಧವಹನಂ ।
ನೊಡನೆನಿಷ್ಕಾರಣಂ ಪ್ರೊಯ್ದಾಡಿಪಾಳ್ಕಾಡಿ।
ಕೆಡಿಸಿದಂ ವಿದ್ರುಮಸುಮಾಪತ್ರಾಗಳಂನಕಟ ನಂನೈಸಿ
ರಿಯನು।।

ತೊಡಿಸಿದು ಮಧುಮಹಿಷಂಗೆ ವನಾಂತ್ಯನಿವೊರೆ।
ಯಿಡೆ ಬಿಕಾರ್ತಸ್ವರದಿಬೆಚ್ಚು ಶೆಜವಂಗುಂದಿ।
ಕೊಡಲೊಡಬಿರ್ದನೆನಲ್ಯಾಡಿದವು ತಂಗಾಳಿಯಿಂ ಪ್ರಾಣಾ
ಳ್ಗಾಂತುರಗಳು॥ ೫೬॥

(ಮುಂದೆ ಸಾಗುವದು.)

ರಾ. ರಾ. ಕನ್ನಡ ಶಾಲಾಪತ್ರಿಕ ಕರ್ತರಿಗೆ-

ವಿ. ವಿ. ಸನ್ನ ೧೮೬೬ನೇ ಇಸವಿ ಮಾರ್ಚಿ ತಿಂಗಳದ ಕನ್ನಡ ಶಾಲಾ ಪತ್ರಿಕೆಯ ಪಾನು ೩೧೪ ರಲ್ಲಿ, ಸಂಪೋ ಷುಬಿನಾಬಲಾಯಾ, ಪಂತೋಜಿ ಧನ್ಯಳಾಗಿ ಇವರು ಕೊಟ್ಟ ಶ್ಲೋಕದ ಅರ್ಥವನ್ನು ಕೆಳಗೆ ಬರೆದಿದ್ದೇನೆ. ಅದನ್ನು ಶೋ ಧಿಸಿ ಪ್ರಸಿದ್ಧ ಮಾಡುವಿರೆಂದು ಬಯಸುತ್ತೇನೆ.

ಶ್ಲೋಕವು.

ಚಕ್ರೇ ತಚ್ಛತ್ರು ವಿತ್ರೇ ಪ್ರರಜಯಸನುರೇ ಸ್ಯಂದನಂ
ಲ್ವದಾಂಕದ್ವೇತೇ ಯೀಕಾಂಬುಜಾಕ್ಷೇ ಶರಧಿ ರಖಿಚ ಗಾಸ್ತ
ಪ್ರಜಾತಾಧಿನಾಥಃ ॥ ಕಾಂಡಾಸ್ಯಜ್ಞಾತಜಾತಾನನಕುಹರಚರಾ

ಜ್ಯಾ ಚ ತನ್ಯಸ್ಯಚಕ್ರಿ ಯಸ್ಯಾಭೂನ್ನೀಲಕಂಠಸ್ತದಧಿವಜಕ ಸ್ವ್ಯಾವ ಪಾಯಾತ್ ಸಪಾಯಾತ್ ॥ ೧ ॥ ಅವರು ಬರೆದ ಶ್ಲೋಕದಲ್ಲಿ "ಸಮುಕಿ" "ತದ್ಧಿ" ಇವೆರಡು ಕಬ್ದಗಳು ಅಶುದ ವಿದ್ದ ಕಾರಣ "ಸಮುರೆ" "ತತ್ರ" ಇವೆರಡು ಕಬ್ದಗಳ ಪ್ರ ಯೋಗವ್ಯವಮಾಡಲ್ಪಟ್ಟದೆ.

ಶಬ್ದಾರ್ಥವು,

ಚಕ್ರೇ=ಚಕ್ರವಾಕ ಪಕ್ಷಿಗಳು(ಗಾಲಿಗಳು) ತಚ್ಚತ್ರು ಮಿ ತ್ರೇ= ಆ ಚಕ್ರವಾಕ ಪಕ್ಷಿಗಳಿಗೆ ಕತ್ರುಮಿತ್ರರಾದಂಥ ಸೂ ರ್ಯಚಂದ್ರರು। ಪುರಜಯಸಮರೇ=ತ್ರಿ ಪುರಾಸುರನನ್ನು ಜ ಯಿಸುವಂಥ ಯುದ್ಧದಲ್ಲಿ । ಸ್ಯಂದನಂ=ರಥವ್ಯ । ತತ್ಪದಾಂಕ ದ್ಯೈತೇಯಿಕಾ=ಆ ರಥದ ಗಾಲಿಯೇ ಹೆಣ್ಣಾಗಿಯುಳ್ಳ ವಿ ಷ್ಣುವಿನ ಎರಡನೇ ಹೆಂಡತಿಯಾದ । ಅಂಬುಜಾಕ್ಷೀ=ಸ್ರೀಯು (ಪೃಥ್ವಿಯು)ಶರಧಿಃ=ಸಮುದ್ರವ್ರ (ಬತ್ತಳಿಕೆಯು) ಗರ್ಭಃ=ಬಾಣ ವ್ರ। ತತ್ರ=ಆ ಸಮುದ್ರದಲ್ಲಿ ಜಾತಾ=ಪುಟ್ಟಿದ ಲಕ್ಷ್ಮ್ಯಾಯ।ಅಧಿ ನಾಥಃ=ಗಂಡನಾದಂಥ ವಿಷ್ಣುವ್ರ । ಕಾಂಡಾಃ=ಅಶ್ವಗಳು (ನೀ ರು)ತಜ್ಞಾತಜಾತಾನನಕುಹರಚರಾಃ।।ತಜ್ಞಾತ=ಕಮಲದಲ್ಲಿ । ಜಾ ತಾ=ಪುಟ್ಟಿದಂಥ ಬ್ರಹ್ಮನ। ಆನನ=ಮುಖದ। ಕುಹರಹೋದ ರು। ಚರಾಃ=ಸಂಚರಿಸುವಂಥ ವೇದಗಳು ।ಜ್ಯಾ=ಹಗ್ಗವ್ರ(ಪೃ ಥ್ವಿ ತಸ್ಯಾಸ್ಯಚಕ್ರಿ=ಆ ಪೃಥ್ವಿಯೇ ಮುಸ್ಯಕ ಪ್ರದೇಶದಲ್ಲಿ ಉ ಳ್ಳಂಥ ಶೇಷನು। ಯಸ್ಯ=ಯಾವಾತನಿಗೆ। ಅಭೂತ್=ಆಯಿತು ನೀಲಕಂಠಃ=ಮಹಾದೇವನು(ಮಯೂರವ್ರ) ತತಧಿವಜನಕಃ=ಆ ಮಯೂರಕ್ಕೆ ಸ್ವಾಮಿಯಾದ ಷಣ್ಮುಖನ ತಂದೆಯಾದಂಥ ಮ ಹಾದೇವನು। ತ್ವಾಂ=ನಿನ್ನನ್ನು । ಅಪಾಯಾತ್=ಕೇಡಿನದಸಿಂ ಹ। ಸಃ=ಅವನು ಪಾಯಾತ್=ಸಂರಕ್ಷಣೆ ಮಾಡಲಿ।। ೧।।

ಭಾವಾರ್ಥವು.

ತ್ರಿಪುರಾಸುರನನ್ನು ಜಯಿಸುವ ಯುದ್ಧದಲ್ಲಿ ಸೂರ್ಯ ಚಂದ್ರರು ಯಾವಾತನ ರಥದ ಗಾಲಿಗಳಾಗಿದ್ದರೋ, ಆ ಚಕ್ರವೇ ಜೆಪ್ಪುವಾಗಿ ಉಳ್ಳ ವಿಷ್ಣುವಿನ ಎರಡನೇ ಹೆಂಡತಿಯಾದ ಪೃಥ್ವಿಯು ಯಾವಾತನಿಗೆ ರಥವಾಗಿದ್ದಳೋ, ಸಮುದ್ರವು ಯಾವನಿಗೆ ಬತ್ತಳಿಕೆಯಾಗಿತ್ತೋ, ಆ ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯ ಗಂಡನಾದ ನಾರಾಯಣನು ಯಾವನಿಗೆ ಬಾಣವಾಗಿದ್ದನೋ, ಕಮಲದಲ್ಲಿ ಹುಟ್ಟಿದ ಬ್ರಹ್ಮನ ಮುಖ ಕುಹರದಲ್ಲಿ ಸಂಚರಿಸುವ ವೇದಗಳು ಯಾವನಿಗೆ ಕುದುರೆಗಳಾಗಿದ್ದವೋ, ಶೇಷನು ಯಾವನಿಗೆ ಸಿಂಜಿನಿಯಾಗಿದ್ದನೋ? ಮಯೂರ ಸ್ವಾಮಿಯಾದ ಷಣ್ಮುಖನಿಗೆ ಯಾವನು ತಂದೆಯೋ, ಆ ಮಹಾದೇವನು ನಿನ್ನನ್ನು ಕೇಡಿನಿಂದ ದೂರ ಮಾಡಲಿ.

ತಾ. ೨೫।೫ } ತಿಮ್ಮಣ್ಣಾಚಾರ್ಯ ಅವಧಾನಿ ಅ. ಮಾಸ್ತರ,
೫।೭೬ } ಧಾ. ಎನ್ನೇ ಕ. ಸಾಲಿ.

ಮಹಾರಾಜ ರಾ. ರಾ. ಕನ್ನಡ ಶಾಲಾ ಪತ್ರಕರ್ತರಿಗೆ-

ಸೇವಕನ ವಿನಂತಿಗೆ ಹೆತ್ತ ಕೊಟ್ಟು, ಈ ಕೆಳಗೆ ಬರೆದಿರುವ ಲೆಕ್ಕವನ್ನು ತಮ್ಮಲ್ಲಿ ಹುಟ್ಟುವ ಶಾಲಾಪತ್ರಿಕೆಯಲ್ಲಿ ಅಚ್ಚು ಹಾಕಿ ಪ್ರಸಿದ್ಧಿ ಪಡಿಸುವಿರೆಂದು ನಂಬಿಕೊಂಡು ಬರೆದು ಕಳುಹಿಸಿರುತ್ತೇನೆ. ನಾನೆಂದೂ ತಮಗೆ ಪತ್ರ ಬರೆದವನಲ್ಲ ಇದೇ ನೂತನವಾಗಿರುವದರಿಂದ ಏನಾದರೂ ನ್ಯೂನತೆ ಇದ್ದಾಗ್ಯೂ ಕ್ಷಮಿಸುವಿರೆಂದು ನಂಬಿದ್ದೇನೆ.

ಲೆಕ್ಕವು.

ಒಬ್ಬ ಸಾವುಕಾರನಿಗೆ ೩ ಮಕ್ಕಳಿದ್ದರು. ಆ ಸಾವುಕಾರನ ಅವಸಾನ ಕಾಲ ಬಂದದ್ದರಿಂದ ತನ್ನ ಹೆತ್ತರಿರುವ ೩ ವರಾ ಜೇಲಗಳು ೩, ೬ವರಾದ ಜೇಲಗಳು ೩ ೯ಬಂಭತ್ತು ವರಾ

ದ ಜೇಲಗಳು ೩ ೫೫ ಹದಿನೈದು ವರಾದ ಜೇಲಗಳು ೩, ೦೦
ದು ವರಾದ ಜೇಲ ೧ ಅಂತೂ ಜೇಲಗಳು ೨೩ ವರಗಳು ೫೦೦
ಈ ಪ್ರಕಾರಿರುವ ಜೇಲಗಳನ್ನು ನೀವಿಬ್ಬರು ಈ ಜೇಲಗಳ
ನ್ನು ಒಡಿಯದಲೇ ಒಬ್ಬೊಬ್ಬರು ೫೦ ಐವತ್ತು ಐವತ್ತು
ವರಾ ಹಂಚಿಕೊಳ್ಳಿರೆಂದು ಹೇಳಿ ಮೃತನಾದನು. ಆದರೆ ಸದ
ರ ಜೇಲಗಳನ್ನು ಒಡಿಯದೆ ಅವರು ೫೫ | ೫೦ ವರಾ ಬರುವ
ಹಾಗೆ ದಾವ ಪ್ರಕಾರವಾಗಿ ಹಂಚಿಕೋಬೇಕು. ಇದನ್ನು
ನಂವು ಗುರುಗಳಾದ ಹೆಡ್ ಮಾಸ್ತರರು ದಾರಾದರೂ ರೀತಿ
ವಾರ ಮಾಡಿ ನನ್ನ ಸಂಶಯವನ್ನು ದೂರ ಮಾಡಬೇಕು. ಇಂ.
ತಿ ವಿನಂತ್ರಿ.

ಮು. ಕ್ಯಾಮ ರಾಣೇಬಿನ್ನೂರ } ಹನುಮಂತ ವೆಂಕಟೇಶ ಖಾಸ
ತಾ. ೨೪ ಮೇ ಸ. ೧೯೨೬ } ನೀಸ್ಸವಿ. ಶಾ. ರಾಣೇಬಿನ್ನೂರ,

ಮಹಾರಾಜ ರಾ. ರಾ. ದಕ್ಷಿಣಭಾಗದ ಕನ್ನಡ ಮಠ
ಪತ್ರಿಕದ ಎಡಿಟರರಿಗೆ–

ಸೇವಕನು ವಿನಂತಿ ಮಾಡಿಕೊಳ್ಳುವದೇನಂದರೆ ಕೆಳಗೆ
ಬರೆದ ನಾಲ್ಕು ಪಂಗಿಗಳನ್ನು ತಂವು ಸುಂದರವಾದ ಮಠ ಪ
ತ್ರಿಕೆಯಲ್ಲಿ ಸ್ಥಳ ಕೊಟ್ಟು ಛಾಪಿಸಿ ಪ್ರಸಿದ್ಧ ಮಾಡುವಿರೆಂಬ
ಕಾಂಕ್ಷೆಯುಳ್ಳವನಾಗಿದ್ದೇನೆ.

೧ ಒಬ್ಬ ಅರಸನ ಅರಮನೆಗೆ ಐದು ಅಗಸಿಗಳಿದ್ದು, ಐ
ದು ಅಗಸಿಗಳಲ್ಲಿ ದ್ವಾರಪಾಲಕರಿದ್ದರು. ಆಗ್ಗೆ ಒಬ್ಬ ಸರದಾ
ರನು ತನ್ನ ಸೈನ್ಯ ಸಹವಾಗಿ ಅರಸನ ಭೆಟ್ಟಿಗೋಸ್ಕರ ಬಂ
ದನು. ಆ ದ್ವಾರಪಾಲಕರು ಈ ವೃತ್ತಾಂತವನ್ನು ತಮ್ಮ ಅರ
ಸನ ಬದಿಲೆ ಹೋಗಿ ಅರಿಕೆ ಮಾಡಿದರು. ಅದನ್ನು ಕೇಳಿ ಅ
ರಸನು ದ್ವಾರಪಾಲಕರಿಗೆ ಹೇಳಿದ್ದೇನಂದರೆ, ಸರದಾರನು ತಂ

ನ ಸಂಗಡ ಎಷ್ಟು ದಂಡ ತಂದಿರುತ್ತಾನೋ ಅದನ್ನು ಒಂ
ದೊಂದು ಅಗಸಿಯಲ್ಲಿ ಅರ್ಧಾ ಅರ್ಧಾ ದಂಡು ಇರಿಸಿಕೊಂಡು
ಬಾಕಿ ಸೈನ್ಯ ಅರಮನೆಯೊಳಗೆ ಬಿಡಬೇಕೆಂದು ಅಪ್ಪಣೆ ಮಾ
ಡಿದನು. ಅದೇ ಪ್ರಕಾರ ಆ ದ್ವಾರ ಪಾಲಕರು ಐದು ಅಗಸಿ
ಗಳಲ್ಲಿ ಅರ್ಧಾ ಅರ್ಧಾ ದಂಡು, ಇರಿಸಿಕೊಂಡು ಬಾಕಿ ಸೈ
ನ್ಯ ಒಳಗೆ ಬಿಟ್ಟರು. ಅರಮನೆಯೊಳಗೆ ಅರಸ ಸರದಾರರ
ಭೇಟ್ಟಿಯಾಗಿ ಮರಳಿ ಬರುವಾಗ್ಯೆ ಅರಸನು ಸರದಾರನ ಸಂಗ
ಡ ಅರಮನೆಯೊಳಗೆ ಬಂದಂಥಾ ದಂಡಿಗೆ ಇನಾಮು ಕೊಟ್ಟ
ನು. ಅದು ಹ್ಯಾಗಂದರೆ ಮೊದಲನೇಯವನಿಗೆ ಒಂದು ರುಪಾ
ಯಿ, ಎರಡನೇದವನಿಗೆ ಎರಡು ರುಪಾಯಿ ಮೂರನೇದವನಿಗೆ
ನಾಲ್ಕು ರುಪಾಯಿ ನಾಲ್ಕನೇಯವನಿಗೆ ಎಂಟು ರುಪಾಯಿ ಐದ
ನೇದವನಿಗೆ ಹದಿನಾರು ರುಪಾಯಿ, ಇದೇ ಪ್ರಕಾರ ಸರ್ವರಿಗೆ
ಕೊಟ್ಟನಂತರಾ ಅರಸನ ಬಳಿಲೆ ಒಂದು ರುಪಾಯಿ ಶಿಲ್ಕು ಉ
ಳಿಯಿತು. ಅದನ್ನು ಸರದಾರನ ಕೈಯೊಳಗೆ ಕೊಟ್ಟು ಕಳಸಿ
ದನು. ತಿರುವ್ಯಾಗ ಸರದಾರನು ತಾನು ಬಿಟ್ಟು ಹೋದಂಥಾ ಐ
ದು ಅಗಸಿಗಳಲ್ಲಿರುವ ದಂಡು ಕರಕೊಂಡು ತನ್ನ ಊರಿಗೆ
ಹೋಗಿ ಅರಸನು ಇನಾಮು ಕೊಟ್ಟ ಏಕಂದರ ರುಪಾಯಿಗಳ
ನ್ನು ಕೂಡಿಸಿ ಪಂಚಲ್ಲು, ತನ್ನ ಸರ್ವ ಸೈನ್ಯಕ್ಕೆ ದರ ಒಬ್ಬೊ
ಬ್ಬನಿಗೆ ಒಂದೊಂದು ರುಪಾಯಿದಂತೆ ಸರ್ವ ದಂಡಿಗೆ ಸರಿಯಾ
ಯಿತು. ಆದರೆ ಮೊದಲು ಸರದಾರನ ಕೂಡ ಎಷ್ಟು ದಂಡು
ಇದ್ದಿತ್ತು?

ಈ ಲೆಕ್ಕವನ್ನು ನಮ್ಮ ಬಾಂಧವರಾದ ಯಾವತ್ತು ಮಾ
ರರಾಗಲಿ ಮತ್ತೆ ವಿದ್ವಜ್ಜನರಾಗಲಿ ರೀತಿವಾರ ಮಾಡಿ ತಿಳು
ಹುವಿರೆಂದು ಅಪೇಕ್ಷಿಸುತ್ತೇನೆ ಪತ್ರವಿಸ್ತಾರಕ್ಕೆ ಕ್ಷಮೆ ಇ
ಬೇಕು

ತಾ॰ ೩೫ ನೇ ಮಾಹೆ ಮೇ ಸನ್ನ ೧೮೭೬ ಇ॰ ಮು॰ ಸಂಗ್ರಾಸಿಕೊಪ್ಪ ತಾ॰ ಪರ ಸಗಡ, ಜಿಲ್ಲಾ ಬೆಳಗಾಪ } ಸ್ಕೈಯ್ಯದಶಾ ಬುಡೆಶಾ ಧಾರ ವಾಡಕರ ಬ್ಯಾಂಚಿ ಸ್ಕೂಲ ಮಾಸ್ತರ ಸಂಗ್ರಾಸಿಕೊಪ್ಪ

ಮಹಾರಾಜ ರಾಜಶ್ರೀ ದಕ್ಷಿಣ ಪ್ರಾಂತದೊಳಗಿನ ಶಾಳಾ ಪತ್ರಿಕೆಯ ಎಡಿಟರರಿಗೆ-

ಸೇವಕನು ಬಿನ್ನೈಸುವದೇನಂದರೆ ಕೆಳಗೆ ಲೇಖಿಸಿದ ಎಂಟನಾಲ್ಕು ಪಂಗ್ತಿಗಳಿಗೆ ತಮ್ಮ ಸುಂದರ ಮಹಪತ್ರಿಕೆಯೊಳಗೆ ಸ್ಥಳ ಕೊಟ್ಟೀರಿ ಎಂಬ ಮಹತ್ಕಾಂಕ್ಷೆಯನ್ನು ತಾಳಿ ಈ ಪತ್ರವನ್ನು ಬರದಿದ್ದೇನೆ. ಬಡವನ ಅಪೇಕ್ಷೆಯನ್ನು ಕೊನೆಗಾಣಿಸುವವರು ಸಮರ್ಥರಿದ್ದೀರಿ

ಶ್ಲೋಕವು.

ಅನುಷ್ಟುಭ್ವನಿವೃತ್ತ ಅಶ್ವಧಾಟಿ

ಜಂಭಾರಿಮುಖ್ಯ ಸುರದಂಭಾವಹಾರ್ಯ ಸುರಕುಂಭೀನಸಾಂ
ಡಜಗುರೋ
ಸಂಭಾವಯಾನ್ಯ ಸುರಡಿಂಭಾಸುಖೇಭವತಿಕುಂಭ ದ್ವಯಾ
ರ್ದನ ಕೃತೇ॥
ಸ್ತಂಭೋದ್ಭವೇತಿ ದಿವಿರಂಭಾದಿಭಿಸ್ತುತನುಹಂಭಾವತಃ ವ
ರತರಂ ಕುಂಭ್ವಾ
ದಿದೇವನುತಮಂ ಭೋದಿಶಾಯಿನಮುರಂಭಾಸನಾನ ನ್ಮ
ಹರಿಂ॥೧।

ಇದನ್ನು ಅವತ್ರೋಕಿಸುವ ವಿದಗ್ಧ ಜನರಿಗೆ ಪ್ರಾರ್ಥನೆ ಏನಂದರೆ ಊರ್ವ್ಯಸ್ಥಾನವಲ್ಲಿ ಇರುವಂಥಾ ಶ್ಲೋಕದ ಅರ್ಥ ಎನಗೆ ಗ್ರಹಿಕ ಆಗದೆ ಇದ್ದದರಿಂದ ಎನ್ನ ಇಚ್ಛೆ ಪೂರ್ಣ

ಮಾಡಿ ಬರುವ ಮು೦ದಿನ ಮತ ಪತ್ರಿಕೆಯಲ್ಲಿ ಮುದ್ರಿಸಿ ಕಳು
ಹಿಸರಿ ಎ೦ದ ಪೂರ್ಣ ವಿಜ್ಞಾಪನೆ ಇರುತ್ತದೆ.
ತಾ: ೨೫ ಜೂನ ೧೯೨೬ } ಭೀಮಾಜಿ ನಾರಾಯಣ ಯಾದಿ
ಇ. ಮುಖ್ಯಾಮ ಹುಕ್ಕೇರಿ } ಗೋಕಾವಿ ಇ. ಸ್ಕೂ. ಮಾ.

ರಾವಸಾಹೇಬ ಕನ್ನಡಶಾಲಾಪತ್ರಕದ ಎಡಿಟರರ ಇವರ ಸಂನಿಧಾನಕ್ಕೆ-

ವಿಜಾಪೂರ ತಾಲೂಕ ಕಂನೂರ ಸಾಲಿಯ ಆರನೇ ಎತ್ತೆಯ ವಿದ್ಯಾರ್ಥಿಗಳು ಬೇಡಿಕೊಳ್ಳುವದೇನಂದರೆ, ಮಾಪೆ ನೊವೆಂಬರ ಸನ್ನ ೧೯೨೫ ಇಸವಿ ತಿಂಗಳ ಮತಪತ್ರಿಕೆಯ ೯೯೯೯೯ನಿನಲ್ಲಿ ಛಾಪಿಸಿರುವ ಯುಳಗುಂದ ಸಾಲಿಯ ಆರನೇ ಎತ್ತೆಯ ವಿದ್ಯಾರ್ಥಿಗಳ ಲೆಕ್ಕಗಳನ್ನು ಕ್ಕೆಲಾದ ಮುಸ್ಸಗೆ ರೀತಿ ಬಿಡಿಸಿ ಕಳಿಸಿರುತ್ತೇವೆ. ಯೋಗ್ಯ ಕಂಡಲ್ಲಿ ಮತ ಪತ್ರಿಕೆಯಲ್ಲಿ ಸ್ಥಳ ದೊರಿಯಬೇಕು.

ರೀತಿ.

೧ ನೇ ಲೆಕ್ಕವ್ರ- ಒಂಭತ್ತು ತಿಂಗಳ ಸಂಬಳದ ಹೋಫಿಯನ್ನು ಕೊಂಡು ಹದಿನಾರು ಮಣದ ಹಗೆಯೊಳಗೆ ಸಕಲಾಗಿ ೫ ಮಣ ಕಡಿಮೆಯಾಯಿತು ಅಂದರೆ ೯ ತಿಂಗಳ ಸಂಬಳಕ್ಕೆ ೧೧ ಮಣ ಗೋಫಿ ದೊರೆದವ್ರ.

ಮಣ ರು. ಮಣ ರು. ಇವ್ರ ತಿಂಗಳ ಸಂಬಳದ
೨ ೧೧ = ೨೨ ರುಪಾಯಿಗಳು.
ಂಗಳಿಗೆ ರು. ತಿಂಗಳಿಗೆ ರುಪಾಯಿ
೯ ೨೨ ೧ = ೨೨
೨. ಮಣ ರೂ. ಮಣ ಗೋಫಿ ೧ ತಿಂಗಳ ಸಂ
೦ ೯ ೨೨ = ೨೨ ಬಳಕ್ಕೆ ದೊರಿದವ್ರ. ಇ

ವನ್ನು ಹದಿನಾರು ಮಣಿಯ ಹಗೆಯೊಳಗೆ ಹಾಕಲಾಗಿ—
ಮ. ಮ. ಮ. ಮ. ಕಾರಣ $V_{೬೦}^{೪}$ ಮಣಿ
ಇ $_{೬೦}^{೬೪}$ $_{೬೦}^{೬೪}$ = $V_{೬೦}^{೪}$ ಕಡಿಮೆ ಯಾಗುವದು.
ಇದೇ ಉತ್ತರವು.

ರೀತಿ.

೨ ನೇ ಲೆಕ್ಕವು.



ಇದರ ಸುತ್ತ ೭ ಘೂಟ ರುಂದಿಯ ಭರಸಬಂದಿ ಮಾಡತಕ್ಕದ್ದು.
ಘೂ.
ಕಾರಣ ೬೦+ ೭ = ೬೭ ಘೂಟ
ಯೆಂಲಾ.
ಲಾಂಬ ೬೭+೬೭=೧೨೬+ V೦
ಯೆಂದು. ವಟ್ಟು ಲಾಂ.
= ೨೦೬

ಘೂ. ಲಾ. ಘೂ. ರು. ಘೂ. ಕಲ್ಲಿನ ಜಾಡಿ. ಘನಘೂಟ
೨೦೬ × ೭ × $\frac{೨}{೩}$ = ೯೦೯
ಪರಶಿಂದು ಮತ್ತು



ಇದರ ಸುತ್ತ ೪ ಘೂಟ ರುಂದಿ ಪರಸಬಂದಿ ಮಾಡತಕ್ಕದ್ದು ಕಾರಣ.
ಘೂ. ಘೂ. ಘೂ. ಎ. ಕ.
V೦+೪=V೪+V೪= ೧೬V
ಘೂ. ಘೂ. ಘೂಟ ಎರಡು ಕಡಿಯ ರುಂದಿ ಕಾರಣ
೬೦ + ೬೦ = ೧೨೦

೭೬V + ೧೭೦ = ೭VV ವಟ್ಟ ಘರಸಿನ ಲಾಂಬಿ
ಘೂ. ಲಾ. ಘೂ. ರು. ಘೂಟ ಕಲ್ಲಿನ ಜಾಡಿ ವಟ್ಟ
೭VV × ೪ × ೨ = ೪V೪
ರಶಿನ ಘನ ಘೂಟು ಆದ ಕಾರಣ ಪ್ರ. ಪ್ರಕಾರ.
೪. ಘೂ. ರೂ. ಘನಘೂಟ ರೂ.
೪೦೯ ೫೪೦ ೪V೪ = ೬೫V೩೬೦೯
ಆರಣ ರೂ. ಅ. ೨೬. ಉತ್ತರವು.
೬೫V ೧೦ ೪೯

ಪತ್ರ ಕರ್ತರೆ ತಮ್ಮ ಪತ್ರಕೆಯ ದರ್ಶನವು ಇದೇ ಮೊ
ಲಿನದು ಕಾರಣ ಏನಾದರು ಹಸ್ತ ದೋಷಗಳಿದ್ದರೆ ಕ್ಷಮಿ
ಬೇಕು. ಇಂತಿ ವಿನ್ನಹ

ಸಂ. ಕನ್ನಡ ರಾಘವೇಂದ್ರ ಕೂನಾರ್ಯಾಚಾರ್ಯ ವಿ. ಶಾ
ಳಾ ಕನ್ನಡ ಸಿದ್ದಪ್ಪ ಮುತ್ಯಪ್ಪ ವಿ.
ಸಂ. ೩೨೩೬೬ ಸಿದಲಿಂಗಪ್ಪ ಮುತ್ಯಪ್ಪ ವಿದ್ಯಾರ್ಥಿ

ರಾ. ಕನ್ನಡ ಶಾಲಾಪತ್ರಕದ ವಿಚೀಟರರ ಸನ್ನಿಧಾನಕ್ಕೆ—
ವಿ. ಅಯ್ಯಾ; ತಂಮ ಕರದಲ್ಲಿ ಹ್ಯುಟ್ಟುವ ಕನ್ನಡ ಶಾ
ಪತ್ರ ಕಗಳನ್ನು ಮೂಲಾರದಭದಿಂದ ಓದುವ ಅಭಿಲಾಷೆ
ನಗುಂಟು. ಆ ಪ್ರಕಾರ್ಯ ತವಿಂದ ರಚಿಸಲ್ಪಟ್ಟ, ವಾಹ
ಬ್ಬುವರಿ ಸನ್ನ ೧೮೬೬ ಇಸವಿ ತಿಂಗಳ ಸಂಚಿಕೆ (೧೭)
ದ್ದು. ಬಂದಕೂಡ್ಲೆ: ಅದನ್ನು ನೋಡಲಾಗಿ, (೨೬೨೩೬೩)
ಪ್ರಟದಲ್ಲಿ ಹಂಚೆನಾಳ ಸಾಲಿಯ ಅಸಿಸ್ಟೆಂಟರು ಕೊಟ್ಟ
ವನ್ನು ನೋಡಿ, ಆನಂದವಾಯಿತು. ಅದರಲ್ಲಿ ಮನಸ್ಸು
ಕಿ; ಕೋಫಿಸಿ, ಕ್ಷೆಲಾದಮಟ್ಟಿಗೆ ಬಿಡಿಸಿರುತ್ತೇನೆ. ಇದ

ನ್ನು ಸದರೀಯವರಿಗೂ, ಉಳಿದ ಬಾಂಧವರಿಗೂ, ದೃಷ್ಟಿಗೋಚರ ಮಾಡುವ ಭಾರ ತಮ್ಮನ್ನೇ ಕೂಡಿದೆ. ಆಸ್ಪದಾನುಸಾರ ಸ್ಥಳವಿದ್ದರೆ, ನಂನ ಶ್ರಮ ಸಾಫಲ್ಯವಾಗುತ್ತದೆ.

॥ಲೆಖ್ಖ॥

ಒಂದು ಗ್ರಾಮದಲ್ಲಿ ಮೂರು ದೇವಾಲಯಗಳಿದ್ದವು. ಒಬ್ಬನು ಪೂಜೆಸುವ ನಿಮಿತ್ತ ಕೆಲವು ಪುಷ್ಪಗಳಂನು ತಂದು, ಈ ನೇ ಒವಾಲಯದಲ್ಲಿ (೧)ಕ್ಕೆ (೨)ಆಗಲೆಂದನು ಆಗಲು ಅಲ್ಲಿ ಏನಿಕೆ ಪುಷ್ಪಗಳನ್ನು ಏರಿಸಿ; (೨)ನೇದಕ್ಕೆ ಹೋಗಿ.ಲಬ್ಧ ಆಗಲೆಂದನು. ಆಗಲು ಒಂದನೇ ದೇವಾಲಯದಲ್ಲಿ ಏರಿಸಿದಷ್ಟೇ, ಏರಿಸಿ (೩)ನೇದಕ್ಕೆ ಸಾಗಿ, ಅಲ್ಲಿ ಏಕೋತ್ತ್ರಿ ಆಗಲೆಂದು ಆಗಲು, ಅಲ್ಲಿಸಹ ಮೊದಲಿನ ಸಂಕೇತದಂತೆ ಏರಿಸಲು, ಬಾಕಿ ಏನು ಉಳಿಯಲಿಲ್ಲ. ಆದರೆ, ತಂದ ಪುಷ್ಪ ಎಷ್ಟು?

॥ರೀತಿಯು॥

(೩) ದೇವಾಲಯಗಳಲ್ಲಿಯೂ, ಕಡೀ ದೇವಾಲಯಕ್ಕೆ ತಂದ ಸಂಖ್ಯೆಯು ವರ್ಗವೇರಿಸಿದಂತಾಯಿತು. ಕಾರಣ (೩) ನೇ ದೇವಾಲಯಕ್ಕೆ ತಂದ ಯಾವದಾದರೊಂದು ಸಂಖ್ಯೆ ಹಿಡಿಯುವಾ? ಪುಷ್ಪಗಳು ಅರ್ಧ ವಿರುವದಿಲ್ಲ. ಆದಕಾರಣ, ವರ್ಗಕ್ಕೂ, ಲಬ್ಧಕ್ಕೂ, ಸಾಮ್ಯವಿರುವ (೨।೩೪।೪) ಇವ್ವಗಳಲ್ಲಿದೇ * (೩೪) ಈ ಸಂಖ್ಯೆ ತೆಗೆದುಕೊಂಡು ಅದರ ವರ್ಗ (೧೯೬) ಇವ್ವ ಪ್ರತಿ ಒಂದು ಗುಡಿಯ ಏರಿಸಿದ ಪುಷ್ಪಗಳು ವಾಮ ಭಾಗಕ್ಕಿರುವ (೨) ನೇ ದೇವಾಲಯಕ್ಕೆ ಏರಿಸಿದ ಪುಷ್ಪ (೧೯೬) ಮತ್ತು ಕಡಿ ಗುಡಿಗೆ ವೈದ ಪುಷ್ಪಗಳು (೩೪)

* ಬೇಕಾದ್ದೊಂದು ಸಂಖ್ಯೆ ಹಿಡಿದರೂ ಚಿಂತೆಯಿಲ್ಲ. ಆದರೆ ಅ ಪ್ಪಣ್ಣ ಪುಷ್ಪಗಳು ಒಂದ ವರ್ಗಮೂಳ ಪ್ರೊರಡದೆ ತೋಂದರೆಯಾಗಿ ಬೀಜಗಣಿತ ಪ್ರಕಾರ ಬಿಡಿಸುವದಕ್ಕೆ ಬರುತ್ತದೆ. ಅದು ಕೆಲವರಿಗೆ ತಿಳಿಯುವದಿಲ್ಲವೆಂದ ಕಾರಣ ನಾನು ಅಂಥ ಸಂಖ್ಯೆ ಹಿಡಿಯಲಿಲ್ಲ.

ರಡೂ ಕೂಡಿ (೨೧೦) ಇದೇ ಲಬ್ಧ ಸಂಖ್ಯೆ ವಿದ್ದ ಕಾರಣ, ದು ಯಾವ ಸಂಖೆಯ ಲಬ್ಧವಿದೆಂಬುವದು ಗಣೀತ, ಶ್ರೇಢಿ ಸಾರಣಿ ಪ್ರಕಾರ, ಆದಿ, (೧) ಉತ್ತರ, (೨) ಸರ್ವಧನ ೨೧೦) ಇವುಗಳಿಂದ ಗಚ್ಛೆ ಪದವನ್ನು ತೆಗಿದುಕೊಂಡರೆ, ದೇ ಅಂತೆ ಪದವಾಗುವದು. ಅದರಲ್ಲಿ ಒಂದನೇ ದೇವಾ ಯದಲ್ಲಿ ಏರಿಸಿದ ಹೂವ್ವಗಳನ್ನು ಕೂಡಿಸಿ, ಅವ್ವಗಳ ಆ ಹೂವ್ವಗಳೇ; ಮನೆಯಿಂದ ತಂದ ಹೂವ್ವಗಳು.

॥ಪ್ರಸ್ತಾರ॥

	ಏ. ಹೂ. ೧೯	ಏ. ಹೂ. ೧೯	ಏ. ಹೂ. ೧೯
(೧)	△	(೨) △	(೩) △
ಒ. ತ. ಹೂ.	೨೧೬	೨೦	೧೪
	೧೦೪		

ಲಬ್ಧಸಂಖೆಯಿಂದ ಗಚ್ಛೆ (ಅಂತ್ಯಪದ) ತೆಗಿ.

ಪ. ಉ.ಪ. ಸ. ಪ.
೨ ೧ ೨೧೦

ಪ.ಉ.ಪ.ಅರ್ಧದವರ್ಗ
$-\frac{೧}{೨} = \frac{೧}{೨} \times \frac{೧}{೨} = \frac{೧}{*೪}$

ಸ.ಪ.
೨೧೦ × ೨ = ೪೨೦ + $\frac{೧}{*೪}$ =
ದಶಾಂಶವಲ್ಲಿ.
೪೨೦.೨೫ ಇದರವರ್ಗಮೂಲ

ಆ. ಪ.
ದ ಬರೋಬು ೨೦. ೫ − ೧ =
ಉ. ಪ. ಅರ್ಧ
ಇ. ೫ + . = ೨೦ ಇದೇ ಗ
ಚ್ಛೆ (ಅಂತೆಪದ).

ಪಾರ್ಶ್ವ ೧ ನೇ ಮೇ
ಸನ್ನ ೧೪೬೬ ಇ.
ಮುಕ್ಕಾಮ ಬಾಮನಹ
ಳ್ಳಿ ತಾ ಹಾ ಜಿ ಧಾ

ಸಹಿ ಜಗನ್ನಾಥ ಶ್ರೀಧ
ಗೋಖಲೆ ಪೆಡ್ಡ ವಾಸ್ತ
ಬಾಮನಹಳ್ಳಿ.

REGISTERED NO. 61
1876

-ಪ್ರಕಟನೆಯು-

ಬ

-ವಟಕೀ ಮೀಲ ಉತ್ತಮ ಔಷಧವು-

ವಟಕೀ ಉಪದ್ರವದ ಮೇಲೆ ಉತ್ತಮ ಔಷಧವನ್ನು ಬಡೋದೆಯ ವೈದ್ಯರಾದ ಬಾಳಕೃಷ್ಣರಾವ ಯೆಂಬವರು ತಯಾರ ಮಾಡಿ, ಬಡೋದಾ, ಮುಂಬಯಿ, ಮತ್ತು ಮದ್ರಾಸ ಮುಂತಾದ ಇಲಾಖೆಗಳಲ್ಲಿ, ಈ ಔಷಧವು ಅನುಭವಕ್ಕೆ ಬಂದಿರುತ್ತದೆ. ಮುಂಬಯಿಯಲ್ಲಿ, ಇಂದುಪ್ರಕಾಶ ಛಾಪಖಾನೆಯಲ್ಲಿಯೂ, ಧಾರವಾಡ ಜಿಲ್ಲೆ ಮೈಕಿಗರಗ ಸ್ಕೂಲಮಾಸ್ತರರ ಮನೆಯಲ್ಲಿಯೂ, ಯಾ ವೈದ್ಯ ಬಾವಾ ಇವರ ಕಡೆಗೂ ರೋಖ ಹಣಾ ಕಳುಹಿಸಿ ಕೊಟ್ಟರೆ ಔಷಧವು ದೊರಕುವದು- ಗರಗದಲ್ಲಿ ನಾಲ್ಕು ಜನರಿಗೆ ಸಾಕಾಗುವಷ್ಟು ಔಷಧಕ್ಕೆ ೩ ರೂ. ೬ ಅ. ಕೆಮ್ಮುತ್ತು ಬೀಳುವದು.

ತಾ|| ೨೯ ಫೆಬ್ರುವಾರಿ ಸನ್ ೧೮೭೬ ಇಸ್ವಿ.

ಕನ್ನಡ ಶಾಲಾಪತ್ರಿಕೆ

CANARESE

SCHOOL PAPER.

ಪುಸ್ತಕ ೧೭] [ಸಂಚಿಕೆ ೬

ತಾರೀಖು ೨೫ ನೆಯ ಮಾಹೆ ಜೂನ, ೧೮೭೬.

ಅನುಕ್ರಮಣಿಕೆಯು.

ವಿಷಯಗಳು..... ಪುಟ.

ವಿದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು.....೩೩೭
ನೋಟೀಸಗಳೂ, ಸರಕಸ್ಯೂಲರಗಳೂ. ೩೪೨
ಪತ್ರವ್ಯವಹಾರವು..... ೩೪೪

——oo——

CONTENTS..... Page
Educational Intelligence.....337
Notices.....342
Correspondence,.....344

BELGAUM.

Printed at the "Belgaum Samachar" Press.

ಶಾಲಾಪತ್ರಿಕವು.

ಪುಸ್ತಕ ೧೨] [ಸಂಚಿಕೆ ೭

ತಾರೀಖು, ೨೫ನೇ ಮಹಾಹೆ ಜೂನ, ೧೮೬೯.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮೆ. ಎಜ್ಯುಕೇಶನಲ್ ಇನಸ್ಪೇಕ್ಟರ ದೊರೆಗಳು ಬೆಳಗಾವಿಯಲ್ಲಿಯೇ ಇದ್ದಾರೆ.

ರಾ. ಸಾ. ಕಾಶೀನಾಥ ನಾಂ. ಭಾವಗಾವಕರ ಇವರು ಹೋದತಿಂಗಳ ೨೫ನೇ ತಾರೀಖಿಗೆ ಬೆಳಗಾವಿ ಜಿಲ್ಲೆಯ ಸ್ಕೂಲ್ಸಂಗ ಡಿಪುಟಿ ಎ. ಇನಸ್ಪೇಕ್ಟರ ಕೆಲಸದ ಚಾರ್ಜ ತೆಗೊಂಡವರಿಂದ, ರಾ. ರಾ. ಅಪ್ಪಾಜಿ ಬಾಬುರಾವ ದಿವೇಕರ ಇವರನ್ನು ಹೊಸದಾಗಿ ನಿರ್ಮಿಸಿದ ಬೆಳಗಾವ ಮತ್ತು ಧಾರವಾಡಗೀ ಜಿಲ್ಲೆಗಳ ಅಸಿಸ್ಟಾಂಟ ಡಿಪುಟಿ ಕೆಲಸಕ್ಕೆ ಅ ಸ್ಕೂಲ್ಸಂಗ ನೇಮಿಸಿರುತ್ತಾರೆ.

ಹೋದ ತಿಂಗಳ ೨೫ನೇ ತಾರೀಖಿಗೆ ಧಾರವಾಡ ಟ್ರೇ ನಿಂಗಕಾಲೇಜದಲ್ಲಿ 'ವರ್ನಾ' ಸ್ಕಾಲರಶಿಪ ಪರೀಕ್ಷೆ ಆಗತಕ್ಕ

ದ್ದಿತ್ತು. ಆದರೆ ಉಮೇದ್ವಾರರು ಯಾರೂ ಬಾರದ್ದರಿಂದ ಪರೀಕ್ಷೆಯು ಆಗಲಿಲ್ಲ.

ದಕ್ಷಿಣಭಾಗದೊಳಗಣ ನಾಲ್ಕು ಜಿಲ್ಲೆಗಳ ಡಿ. ಇನ ಸ್ಪೇಕ್ಟರರು ಮೇ. ಎ. ಇ. ಸಾಹೇಬರವರ ಪ್ರಕಾರವಿನ ಮೇಲಿಂದ ಬೆಳಗಾವಿಗೆ ಬಂದಿರುತ್ತಾರೆ. ಇನ್ನು ಮಾಸ್ತರ ಜನರ ಸಂಬಳದಬಗ್ಗೆ ತಸ್ತೀಕು ತೀರ್ಪು ಆ ದೀತೆಂದು ತೋರುತ್ತದೆ.

ಕೌಂಟ ಮೋಲ್ತಕೆ ಎಂಬ ಪ್ರಖ್ಯಾತರಾದ ಜರ್ಮನ ಸೇನಾಪತಿಗಳು ತಮ್ಮ ಜೀವಿತಾವಧಿಯಲ್ಲಿ ಬಂದು ಹೊಸ ಶಾಲಾಗ್ರಹ ಕಟ್ಟುವದಕ್ಕಾಗಿ ಎಂದು, ಅಜಮಾಸು ೪೦,೦೦೦ ರೂಪಾಯಿ ಕೊಟ್ಟಿರುತ್ತಾರೆ. ಶಾಲಾಗೃಹ ಸಿದ್ಧವಾದನಂತರ ಅದರಲ್ಲಿ ಸಾಮಾನಕ್ಕಾಗಿ ಇನ್ನೂ ೪೦,೦೦೦ ರೂಪಾಯಿ ಕೊಡತಕ್ಕವರಿದ್ದಾರೆ. ಇದರ ಹೆಸರು ವಿದ್ಯಾಪಕ್ಷಪಾತ!

ಲಂಡನ ಪಟ್ಟಣದಲ್ಲಿ ಸ್ಕೂಲಬೋರ್ಡದವರಿಗೆ, ೧೮೭೪ನೆ ಇಸವಿಯಲ್ಲಿ, ವಿದ್ಯಾವೃದ್ಧಿಗಾಗಿ ಕೂಡಿಸಿದ ಕರದಿಂದ ೧೦,೫೯,೫೧೦ ರೂಪಾಯಿ ಉತ್ಪನ್ನವಾದವೆಂದು ತಿಳಿದು ಬರುತ್ತದೆ.

ಬರುವ ನೋವೆಂಬರ ತಿಂಗಳಲ್ಲಿ ಮದ್ರಾಸದಲ್ಲಿ ಕಲಾ ಕೌಶಲ್ಯದಿಂದ ಹುಟ್ಟುವ ಪದಾರ್ಥಗಳ ಪ್ರದರ್ಶನವಾಗತ

ಕ್ಕದ್ದದೆ.

ವಹ್ಮಾಡ ಪ್ರಾಂತದಲ್ಲೀ ಖಾಲೀ ಇರುವ ಶಾಲಾಖಾತೆ
ಯ ಇನಸ್ಪೇಕ್ಟರ ಕೆಲಸಕ್ಕೆ, ಹೈದರಾಬಾದದ ರಸಿಡೆಂಟ
ಸಾಹೇಬರು ರಾ. ರಾ. ಶ್ರೀರಾಮು ಭಿಕ್ಕಾಜಿ ಜಠಾರ ಇವರ
ನ್ನು ನೇಮಿಸಬೇಕೆಂದು ಹಿಂದುಸ್ಥಾನ ಸರಕಾರದವರಿಗ
ಸಿಫಾರಸು ಮಾಡಿರುತ್ತಾರೆಂದು ತಿಳಿದುಬರುತ್ತದೆ.

ಇಂಗ್ಲಂಡದಲ್ಲಿ ಯುನಿವರ್ಸಿಟಿಗಳನ್ನು ಕಾಲೇಜಗಳ
ನ್ನು ಬಿಟ್ಟು ಉಳಿದ ಸಾಲೆಗಳ ಬಗ್ಗೆ ಹೋದವರ್ಷ
೫೫,೪೮೫,೬೭೦ ರೂಪಾಯಿ ವೆಚ್ಚವಾಗಿರುತ್ತವೆ. ಅ
ದೇ ಕೆಲಸದ ಬಗ್ಗೆ ನಡೇದ ವರ್ಷದಲ್ಲಿ೫೭,೦೭೦೫೫೦
ರೂಪಾಯಿ ವೆಚ್ಚವಾದಾವು ಎಂದು ಅಜಮಾಸು ಮಾಡಿರು
ತ್ತಾರೆ.

ವಿಲಾಯತಿಯಲ್ಲಿ ಡಾಕ್ಟರ ಹಾಲೋವೆ ಎಂಬರೊಬ್ಬ
ಬಹಳ ಪ್ರಸಿದ್ಧ ವೈದ್ಯರಿದ್ದಾರೆ. ಅವರು ಮಾಡಿದ ಗುಳಿ
ಗೆಗಳೂ ಮಲಮೂ ಸರ್ವತ್ರ ಜನರಿಗೆ ಗೊತ್ತಿರುತ್ತವೆ. ಈ
ಡಾಕ್ಟರರಿಗೆ ತಮ್ಮ ಔಷಧಗಳ ಬಗ್ಗೆ ಜಾಹಿರಾತುಗಳನ್ನು
ಕೊಡುವದಕ್ಕೆ ವರ್ಷವೊಂದಕ್ಕೆ ಮೂರಲಕ್ಷ ರೂಪಾಯಿ
ಕರ್ತುತ್ತವೆ.

ಹಿಂದುಸ್ಥಾನದೊಳಗಿನ ವಿದ್ಯಾಖಾತೆಯಲ್ಲಿ ೫ ಮಂದಿ
ಡೈರೆಕ್ಟರರಿರುವರು. ಅವರಲ್ಲಿ ಬಂಗಾಲ, ಮದ್ರಾಸ,

ಮುಬಯಿ ಈ ಮೂರು ಇಲಾಖೆಗಳ ಡೈರೆಕ್ಟರರ ಸಂಬಳ ಪ್ರಾರಂಭಕ್ಕೆ ೨೦೦೦ ರೂಪಾಯಿ ಇದ್ದು ೧೦ ವರ್ಷಗಳಲ್ಲಿ ೩೫೦೦ ರೂಪಾಯಿತನಕ ಏರುತ್ತದೆ. ವಾಯವ್ಯಪ್ರಾಂತದ ಡೈರೆಕ್ಟರನ ಸಂಬಳ ೨೦೦೦ ರೂಪಾಯಿಯಿಂದ ೩೩೫೦ ರೂಪಾಯಿತನಕ, ಮತ್ತು ಪಂಜಾಬದ ಡೈರೆಕ್ಟರನ ಸಂಬಳ ೧೫೦೦ ರೂಪಾಯಿಯಿಂದ ೨೦೦೦ ರೂಪಾಯಿತನಕ ಏರುತ್ತಾ ಹೋಗಬೇಕೆಂದು ಸರಕಾರದ ಠರಾವು ಇರುತ್ತದೆ. ಈ ಡೈರೆಕ್ಟರರ ಯೋಗ್ಯತೆ ೨೦ ವರ್ಷ ನೌಕರಿ ಮಾಡಿದ ಸಿವಿಲಿಯನ ಅಥವಾ ದಂಡಿನೊಳಗಿನ ಕರ್ನಲ ಜನರ ಯೊಗ್ಯತ್ಯೆಗೆ ಸರಿಯಿರುವದು. ಮೊದಲನೇ ಗ್ರೇಡಿನ ಪ್ರೋಪೆಸರರೂ ಇನಸ್ಪೆಕ್ಟರರೂ ಕೂಡಿ ೯ ಮಂದಿ ಇರುವರು. ಅವರ ಸಂಬಳ ೧೭೫೦ ರೂಪಾಯಿಯಿಂದ ೧೫೦೦ ರೂಪಾಯಿತನಕ ಏರುತ್ತದೆ. ಅವರೂ, ೧೭ ವರ್ಷ ನೌಕರಿಮಾಡಿದ ಸಿವಿಲಿಯನರೂ, ಇಲ್ಲವೆ ಲೆಫಟಿನೆಂಟ ಕರ್ನಲ್ಲರೂ ಯೋಗ್ಯತೆಯಲ್ಲಿ ಸರಿಯಾಗಿರುವರು. ಎರಡನೇ ಗ್ರೇಡಿನ ಕಾವುದಾರರು ೧೯ ಮಂದಿ ಇರುವರು. ಅವರ ಸಂಬಳ ೧೦೦೦ ರೂಪಾಯಿಂದ ೧೭೫೦ ರೂಪಾಯಿತನಕ ಏರುತ್ತದೆ. ಮೊದಲನೇ ಗ್ರೇಡಿನವರಂತೆ ಇವರ ಯೋಗ್ಯತೆ ಇರುವದು. ಮೂರನೇ ಗ್ರೇಡಿನಲ್ಲಿ ೪೧ ಕಾವುದಾರರು ಇರುವರು. ಸಂಬಳ ೭೫೦ ರೂಪಾಯಿಯಿಂದ ೧೦೦೦ ರೂಪಾಯಿತನಕ ಏರುತ್ತಾ ಹೋಗುತ್ತದೆ. ಇವರ ಯೋಗ್ಯತೆ ೪ ವರ್ಷ ನೌಕರಿ ಮಾಡಿದ ಸಿವಿಲಿಯ ಇಲ್ಲವೆ ಮೇಜರ ಜನರ ಯೋಗ್ಯತೆಯಷ್ಟು. ನಾಲ್ಕನೇ ಗ್ರೇಡಿನಲ್ಲಿ ೪೭ ಕಾವು

ದಾರರು ಇರುತ್ತಾರೆ. ಸಂಬಳ ೫೦೦ ರೂಪಾಯಿಯಿಂದ ೭೫೦ ರೂಪಾಯಿತನಕ ಏರುತ್ತದೆ. ಇವರ ಯೋಗ್ಯತೆ ೪ ವರ್ಷ ನೌಕರಿ ಮಾಡಿದ ಸಿವಿಲಿಯನ ಇಲ್ಲವೆ ಲಪ್ಕರದೊಳಗಿನ ಕ್ಯಾಪ್ಟನ ಇವರ ಯೋಗ್ಯತೆಯುಪ್ಪ. ಈ ಮೇಲೆ ಹೇಳಿದ ೧೦೧ ಕಾಮುದಾರರಲ್ಲಿ ೬ ಮಂದಿ ಮಟ್ಟಿಗೆ ನಮ್ಮ ದೇಶದವರು ಇರುವರು. ಅವರಲ್ಲಿ ಒಬ್ಬನು ಎರಡನೇ ಗ್ರೇಡಿನಲ್ಲಿ ಡೈರೆಕ್ಟರ ಇರುವನು. ಒಬ್ಬನು ಮೂರನೆ ಗ್ರೇಡಿನಲ್ಲಿ ಮತ್ತೊಬ್ಬನು ನಾಲ್ಕನೇ ಗ್ರೇಡಿವಲ್ಲಿ ಈ ಮೇರಿಗೆ ಇಬ್ಬರು ಇನಸ್ಪೇಕ್ಟರರಿರುವರು, ಉಳಿದ ಮೂವರಲ್ಲಿ ಒಬ್ಬನು ಮೂರನೇ ಗ್ರೇಡಿನಲ್ಲಿ ಇಬ್ಬರು ನಾಲ್ಕನೇ ಗ್ರೇಡಿನಲ್ಲಿ ಪ್ರೋಫೇಸರರಿರುವರು.

ಸರಕಾರೀತರಾನುಗಳು.

ಸರಕಾರಿ ಪತ್ರವ್ಯವಹಾರದಲ್ಲಿ ಪತ್ರದ ತಾರೀಖೂ ಮುಕ್ಕಾಮೂ ಪತ್ರದ ಕಡೆಗೆ ಜಾಕದೆ ಮೇಲೆ ನಂಬರದ ಹತ್ತರ ಹಾಕಬೇಕೆಂದು ಹಿಂದುಸ್ಥಾನ ಸರಕಾರದವರು ತರಾವು ಮಾಡಿರುತ್ತಾರೆ.

ಸರಕಾರಿ ಕಚೇರಿಗಳಲ್ಲಿ ಹವಾಲದಾರ ಜಮಾದಾರ ಮೊದಲಾದ ವರಿಷ್ಟ ಪ್ರತಿಯು ಸಿಪಾಹಿ ಜನರಿಗೆ ಬೆಳ್ಳೀ ಬಕ್ಕಲಗಳನ್ನು ಕೊಡಲಾಗದೆಂಬ ಬಗ್ಗೆ ನಾಮದಾರ ಗವರ್ನರಜನರಲ್ ಇನ್ ಕೌಸಿಲ ಇವರು ತರಾವು ಮಾಡಿರುತ್ತಾರೆ.

ಯಾವತ್ತು ಸಿವಿಲ ಕಾಮುದಾರರು (ತಮ್ಮ ಕಚೇರಿ

ಯೆಲ್ಲಿ ಸಾದಾರಣವಾಗಿ ಉತ್ಪತ್ತಿಯಾಗದ ಸಣ್ಣ ಬೆಳೆಯು ಸಾಮಾನುಗಳನ್ನು ಬಿಟ್ಟು ಕಮ್ಮ ವಕಾಶದಲ್ಲಿದ್ದ ಬೆಲೆಯುಳ್ಳ ಯಾವತ್ತು ಹಂಗಮ ಪದಾರ್ಥಗಳ ರಜಿಸ್ತರವನ್ನು ಇಡಬೇಕು, ಎಂದು ಸರಕಾರೀ ಠಾವು ಆಗಿರುತ್ತದೆ.

ನೋಟೀಸುಗಳು.
NOTICES

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಕಡೆಯಿಂದ ಮುಚ್ಚಳಿಕೆಗಳನ್ನು ತಕ್ಕೊಳ್ಳ ಬಾರದೆಂಬ ಬಗ್ಗೆ ಹುಕುಮು ಮುಂದೆ ಬರುವವರಿಗೇ ಹೊರ್ತು ಹಿಂದಿನ ಜನರಿಗೆ ಲಾಗೂ ಇಲ್ಲ. ಅಂದರೇನು, ಈಗ ತಾವು ಬರೆದು ಕೊಟ್ಟ ಮುಚ್ಚಳಿಕೆಗಳ ಪ್ರಕಾರ ನೌಕರಿ ಮಾಡುತ್ತಿರುವ ಮಾಸ್ತರರು ವಿದ್ಯಾಖಾತೆಯ ಹಿತಕ್ಕೆ ಅವಶ್ಯವೆಂದು ಕಂಡು ಬಂದಲ್ಲಿ ಮುಂದಾದರೂ ಅದೇ ಮೇರಿಗೆ ಮಾಡಲಿಕ್ಕೆ ಬೇಕು. ಆದರೆ ಹಿಪ್ಪುಟಿ ಇನಸ್ಪೆಕ್ಟರರು ತೋರಿಸಿ ಕೊಟ್ಟ ಕಾರಣಗಳ ಮೇಲಿಂದ ಎಜ್ಯುಕೇಶನಲ್ ಇನಸ್ಪೆಕ್ಟರ ದೊರೆಗಳಿಗೆ ಈ ಹುಕುಮು ಹಿಂದಿನವರಲ್ಲಿ ಸಹ ಕೆಲವರಿಗೆ ಲಾಗು ಮಾಡತಕ್ಕದ್ದು ಯೋಗ್ಯವೆಂದು ತಿಳಿದು ಬಂದಲ್ಲಿ ಹಾಗೆ ಮಾಡಲಿಕ್ಕೆ ಅಡ್ಡಿಯಿರುವದಿಲ್ಲ.

W A. Russell.

ಎ. ಇನಸ್ಪೆಕ್ಟರ, ದಕ್ಷಿಣ ಭಾಗ.

ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಸೂಲ ಮಾ

ಸ್ತರಿಗೆ— ಈ ಸರಕ್ಯೂಲರಿನಿಂದ ತಿಳಿಸುವದೇನಂದರೆ,— ಧಾರವಾಡ ಟ್ರೇನಿಂಗಕಾಲೇಜದ ಮೆ. ಪ್ರಿನ್ಸಿಪಾಲರಿಂದ ಯಾವದಾದರೊಂದು ಮಾಸ್ತರ ಅಥವಾ ಅಸಿಸ್ಟೆಂಟ ಮಾಸ್ತರನ ಕೆಲಸದ ಮೇಲೆ, ಮೆಹಬೂಬನ ಎ. ಇ. ರವರ ಮುಂಜೂರಿಯಿಂದ ನೇಮಿಸಲ್ಪಟ್ಟ ಇಸಮು ಬಂದು ಡಾಸರಾದ ಕೂಡ್ಲೆ ಆಯಾ ಕೆಲಸದ ಮೇಲಿರುವವರು ಇತ್ಯಾಕಡಿಯ ಹುಕುಮಿನ ಮಾರ್ಗಪ್ರತಿಹ್ಲೆ ಮಾಡದೆ ಅವನಿಗೆ ಲಿಕದಂ ಬಾಜರ್ ಕೊಟ್ಟು ಟ್ರೇನಿಂಗ ಕಾಲೇಜಕ್ಕೆ ಹೊರಡು ಹೋಗಬೇಕು. ಇದಕ್ಕೆ ವಿರೋಧವಾಗಿ ನಡಿಯು ಬಾರದು.

ಹಿಂದೆ ಇದೇ ಪ್ರಕಾರದ ಒಂದು ಸರಕ್ಯೂಲರ ಕೊಟ್ಟಿ ತ್ತು. ಆದರೆ ಅದನ್ನು ಕೆಲವು ಮಾಸ್ತರರು ಲಕ್ಷಿಸದೆ ಹೋ ನ ಕಾರಣ ಹೊಸತಾಗಿ ನೇಮಿಸಲ್ಪಟ್ಟ ಮನುಷ್ಯನು ಒಂ ನೆತಡಾವಕ್ಕೆ ಬಾಜರ್ ತೀರದು ಕೊಳ್ಳಲಿಕ್ಕೆ ಹೋದರೂ ಸೆಪ್ಟಿಯುವನ ಹುಕುಮಿನ ಹೊರತು ಬಾಜರ್ ಕೊಡುವ ಲ್ಲವೆಂದು ಮಾಸ್ತರನು ಅಡ್ಡಿ ತೋರಿಸಿದ್ದರಿಂದ ಬಹಳ ತೊಂದರೆಯುಂಟಾಗಿ ಸರಕಾರೀ ಕೆಲಸ ಸು ಯಂತ್ರ ನ ಆಯುವಲ್ಲ. ಆದದರಿಂದ ಆ ಪ್ರಕಾರ ತೊಂದರೆಗಳುಂ ಬಾಗಬಾರದೆಂಬುವದೇ ಈಗ ಕೊಟ್ಟಿರುವ ಸರಕ್ಯೂಲರ ನ ಉದ್ದೇಶವು ತಿಳಿಯುವದು. ತಾರೀಖು ಇಂತೀ ಮಾ ಕೆ ಮೇ ಸನ್ನ ೧೮೭೬ ಇಸವಿ.

Shrinivas R. Savadi.

ಇಂಚಾರ್ಜ ಡಿ. ಎ. ಇ. ಧಾರವಾಡ.

ಪತ್ರವ್ಯವಹಾರವು.
CORRESPONDENCE.

ರಾವಸಾಹೇಬ ಕನ್ನಡ ಶಾಲಾಪತ್ರ ಕರ್ತೃಗಳಿಗೆ,
ಬೇಡಿಕೊಳ್ಳುವಬಿನಃ ಏನಂದರೆ ಕೆಳಗ ಬರೆದ ನಾಲ್ಕು
ಪಂಕ್ತಿಗಳಿಗೆ ಮತಪತ್ರಕದಲ್ಲಿ ಆಶ್ರಯ ದೊರಿದೀತೆಂದು
ಆಶೆತಾಳುತ್ತೀನೆ.

ಈ ಊರಸುತ್ತಲು ಅಷ್ಟೋತ್ತರತೀರ್ಥಗಳೂ, ಅ
ಷ್ಟೋತ್ತರಲಿಂಗಗಳೂ ಉಂಟೆಂದು, ಇಲ್ಲಿ ಜನರು ಹೇ
ಳುವರು. ಅವುಗಳಲ್ಲಿ ಮೂಹಿತಿ ದೊರೆದಪ್ರಾರ್ತ್ರ ೇ
ತೀರ್ಥ ಲಿಂಗಗಳವಿಷಯ ಪ್ರತ್ಯೇಕ ಪ್ರತ್ಯೇಕವಾಗಿ ಸ
ರ್ಜಿಸುವೆ.

ಪಕ್ವಕ್ಕೆ ಬಂದ ಕಾಯಿಗಳುಳ್ಳ ಗೊಂಚಲುಗಳಿಂದ ತು
ಬಿದಾಗ್ಯೆ ಈ ಗಿಡವು ನೋಟಕ್ಕೆ ಬಹು ಅಂದವಾಗಿ ತೋ
ರುತ್ತದೆ. ಚಂದ್ರೋದಯವಾದಾಗ್ಯೆ ಚಂದ್ರನನ್ನು ನೋಡ
ಲಾಗಿ ಮನಿಸ್ಸಿಗೆ ಎಷ್ಟು ಉಲ್ಲಾಸವಾಗುತ್ತದೆಯೋ ಅಷ್ಟೇ
ಹರ್ಷವು ಈ ಗಿಡವನ್ನು ನೋಡೋದರಿಂದ ಆಗುತ್ತ
ದೆ. ಆದಕಾರಣ ಈ ಗಿಡಕ್ಕೆ ಚಂದ್ರ ಗಿಡವೆಂಬ ಹೆಸರು ಇ
ಕ್ಕಾದ್ದಾಗಿದೆ ಎಂದು ಯೋಚಿಸುವದಕ್ಕೆ ಆಸ್ಪದವಾಗುತ್ತದೆ.

ETYMOLOGY.

ಶಬ್ದವ್ಯುತ್ಪತ್ತಿ.

———000———

ವೇದ— ಈ ಶಬ್ದವು ,ವಿದ್,' ಎಂದರೆ ತಿಳಿ, ಎಂ
ಸಂಸ್ಕೃತ ಧಾತುವಿನಿಂದ ಹುಟ್ಟಿಯದೆ. ಆದದರಿಂದ ವೇ
ಶಬ್ದದ ಮೂಲಾರ್ಥವು, ತಿಳುವಳಿಕೆ ಇಲ್ಲವೆ ಜ್ಞಾನ ಮಾ
ಕೊಡುವದು. ಹಿಂದು ಜನರಲ್ಲಿ ಯಾವತ್ತು ತರದ ಐಹಿ
ಮತ್ತು ಪಾರಮಾರ್ಥಿಕ ಜ್ಞಾನವು ಋಕ್, ಯಜು, ಸಾ

ಗಳಲ್ಲಿ ಅಂತರ್ಹಿತವಾಗಿರುವದರಿಂದ ವೇದಶಬ್ದವು ಅವುಗಳ ದ್ಯೋತಕವಾಯಿತು.

ಶ್ರುತಿ— ಈ ಶಬ್ದವು ಸಂಸ್ಕೃತ 'ಶ್ರು' ಅಂದರೆ ಕೇಳು, ಎಂಬ ಧಾತುವಿನಿಂದ ಹೊರಟಿದೆ. ಶ್ರುತಿ ಶಬ್ದದ ಮೂಲಾರ್ಥವು ಕೇಳಿದ್ದೇನು. ಬಹಳ ಪ್ರಾಚೀನ ಕಾಲದಲ್ಲಿ ಲೇಖನ ಕಲೆಯು ಗೊತ್ತಿರಲಿಲ್ಲ. ಆಗ ವೇದವನ್ನು ಎರಡನೆಯವರ ಬಾಯಿಂದ ಕೇಳಿ ಪಾಠ ಮಾಡಬೇಕಾಗುತ್ತಿತ್ತು; ಎರಡನೆ ಮಾರ್ಗವಿರಲಿಲ್ಲ. ಅದದರಿಂದ ಗುರು ಪರಂಪರೆಯಿಂದ ವೇದವನ್ನು ಒಬ್ಬರ ಬಾಯಿಂದ ಕೇಳಿ ಮತ್ತೊಬ್ಬನು ಪಾಠ ಮಾಡಬೇಕಾಗೋಣದರಿಂದ, ಅದಕ್ಕೆ ಶ್ರುತಿ ಎಂಬ ಶಬ್ದವು ರೂಢವಾಯಿತು. ವೇದಕ್ಕೆ ಒಮ್ಮೊಮ್ಮೆ ಶ್ರವಣ ಎಂದು ಸಹ ಅನ್ನುತ್ತಾರೆ. ಅದರ ವ್ಯುತ್ಪತ್ತಿಯೂ ಹೀಗೆ ಮೇಲಿನದರಂತೆಯೇ.

ಸ್ಮೃತಿ— ಈ ಶಬ್ದವು 'ಸ್ಮೃ,' ಅಂದರೆ 'ನೆನಪಿಡು,' ಎಂಬ ಸಂಸ್ಕೃತ ಧಾತುವಿನಿಂದ ಹೊರಟಿದೆ. ಅದದರಿಂದ ಸ್ಮೃತಿ ಎಂದರೆ ನೆನಪು ಎಂಬದು ಮೂಲಾರ್ಥವು. ಬಹಳ ಪ್ರಾಚೀನ ಕಾಲದಲ್ಲಿ ಈಗಿನಂತೆ ಬರಹದ ಯುಕ್ತಿಗಳು ಗೊತ್ತಿದ್ದಿಲ್ಲ. ಆಗಿನ ಜನರಿಗೆ ತಮ್ಮ ಹಿಂದಿನವರು ಪಾಲಿಸಿಕೊಟ್ಟಂಥ ಧರ್ಮ, ಕರ್ಮ ವ್ಯವಹಾರ ಮುಂತಾದವುಗಳ ವಿಷಯಗಳನ್ನು ನೆನಪಿಡ ಬೇಕಾಗುತ್ತಿತ್ತು. ಮುಂದೆ ಹರುಬರುತ್ತ ಸುಧಾರಣೆಯಾಗಿ ಲೇಖನ ಕಲೆಯು ಗೊತ್ತಾಯಿತು. ಆಗ ಕೆಲವು ಲೋಕ ಮಾನ್ಯರಾದ ಪುರುಷರು ಮುಂದಿನವರಿಗೂ ತಮಗೂ ನೆನಪಿದ್ದ ತಮ್ಮ ಪೂರ್ವಜರ ಆಚಾರ ವಿಚಾರಗಳನ್ನು ಒತ್ತಟ್ಟಿಗೆ ಕೂಡಿಸಿ ಬರೆದಿಟ್ಟು,

ಆ ಗ್ರಂಥಗಳಿಗೆ ಸ್ಮೃತಿ ಎಂಬ ಹೆಸರು ಇಟ್ಟರು. ಹಿಂದು ಜ
ನರ ಧರ್ಮ ವಿಚಾರದಲ್ಲಿ ವೇದಗಳ ತರುವಾಯ ಸ್ಮೃತಿ
ಗಳಿಗೆ ಬಹಳ ಮಾನ್ಯತೆ ಉಂಟು.

ಧರ್ಮ— ಈ ಶಬ್ದವು ‘ಧೃ’ ಅಂದರೆ ‘ಹಿಡಿ,’ ಎಂ
ಬ ಸಂಸ್ಕೃತ ಧಾತುವಿನಿಂದ ಸೃಷ್ಟಿಯಾಯಿತು. ಆದುದರಿಂದ ಧ
ರ್ಮ ಅಂದರೆ ಹಿಡಿತ. ಮನುಷ್ಯಮಾತ್ರರ ಮನಸ್ಸಿನಲ್ಲಿ
ಈ ಜಗತ್ತಿನಲ್ಲಿ ತಮಗೆ ಬೇಕಾದಹಾಗೆ ಸೌಖ್ಯ ವಾಗಬೇ
ಕೆಂಬ ಅಪೇಕ್ಷೆಯು ಜನ್ಮ ಸಿದ್ಧವಾಗಿ ಇದ್ದೇ ಇರುತ್ತದೆ
ಆದರೆ ತಮಗೆ ಸೌಖ್ಯ ವಾಗಬೇಕೆಂಬದಾಗಿ ಪ್ರಬಲರ
ತನ್ನಪೇಕ್ಷೆಯಲ್ಲಿಳಿಗೆ ಇಲ್ಲವೆ ದುರ್ಬಲರಿಗೆ ಬೇಡಿಸಹಸ್ತಿದರೆ
ಜನಸ್ಥಿತಿಯು ಸುಸೂತ್ರ ಸಾಗಲರಿಯದು; ಇಷ್ಟೇ ಅಲ್ಲ
ದೊಡ್ಡ ಅನರ್ಥಗಳು ಉಂಟಾಗುವವು. ಆದರೆ ಈ ಪ್ರಕೃ
ತಿಯ ಆಗ ಬಾರದು; ಪ್ರತಿಯೊಬ್ಬನು ಎರಡನೆಯವರ ಕರ್ತ
ವ್ಯಕ್ಕೂ, ಸ್ವಾಸ್ಥ್ಯಕ್ಕೂ ಹಾನಿ ಇಲ್ಲವೆ ಪೀಡೆಯಾಗದಂತೆ
ನಗೆ ಆದಷ್ಟು ಸೌಖ್ಯ ಪಡೆದುಕೊಳ್ಳಬೇಕು; ಎಂಬ ಸಲ
ವಾಗಿ ಪೂರ್ವಿಕರು ತಮ್ಮ ಬುದ್ಧಿಯಿಂದ ಹಲವು ಕಟ್ಟ
ಳೆಗಳನ್ನು ಮಾಡಿದರು. ಈ ಕಟ್ಟಳೆಗಳಂತೆ ನಡೆಯುವ
ರಿಗೆ ಇಹದಲ್ಲಿಯೂ ಪರದಲ್ಲಿಯೂ ಸುಖ ವಾಗುವಹಾಂತೆ
ಅವುಗಳನ್ನು ವಿಧಿ ನಡೆಯುವವರಿಗೆ ಇಹಪರಗಳಲ್ಲಿ
ದುಃಖವೂ ದಂಡವೂ ಆಗುವವೆಂತ ಫಲಶ್ರುತಿ ಮಾಡಿಟ್ಟರು
ಈ ಕಟ್ಟಳೆಗಳೇ ಧರ್ಮವು. ಪ್ರತಿ ಒಬ್ಬ ಮನುಷ್ಯನೂ
ಈ ಕಟ್ಟಳೆಗಳ ಹಿಡಿತದಲ್ಲಿ ಶಿಕ್ಷಿರುತ್ತಾನೆ. ಆದದರಿಂ
ತನಗೆ ಬೇಕಾದಹಾಗೆ ಸ್ವೇಚ್ಛಾಚಾರ ನಡೆದು, ಎರಡನೆಯ
ವರಿಗೆ ಉಪದ್ರವ ಕೊಟ್ಟೇನಂದರೆ, ಬರುವಹಾಗಿಲ್ಲ

ಗಿನ ಸರಕಾರದವರು ಮಾಡಿರುವ ಕಾಯಿದೆಗಳೂ ಒಂದು ಪ್ರಕಾರದ ಧರ್ಮವೇ ಅನ್ನಬಹುದು.

ಪುರಾಣ— ಈ ಶಬ್ದವು ‘ಪೃ,’ ಅಂದರೆ ‘ತುಂಬಿಬಿಡು, ಮುಗಿಸು’ ಎಂಬ ಸಂಸ್ಕೃತ ಧಾತುವಿನಿಂದ ಬಂದಿದೆ. ಆದದರಿಂದ ಪುರಾಣ ಎಂದರೆ ತುಂಬಿದ್ದು; ಮುಗಿದದ್ದು, ಆಗಿಹೋದ್ದು ಎಂಬ ಅರ್ಥವು. ಮುಂಬೆ ಪ್ರಾಚೀನ ಕಾಲದಲ್ಲಿ ಆಗಿಹೋದ ಕಥೆಗಳಿಗೆ ಇಲ್ಲವೆ ಅಂಥ ಕಥೆಗಳ ಪುಸ್ತಕಕ್ಕೆ ಈ ಶಬ್ದವು ರೂಢವಾಯಿತು. ಈಗ ನಾವು ಪುರಾಣ ಬೆಂದರೆ ಪ್ರಾಚೀನ ಕಾಲದಲ್ಲಿ ದೇವತ್ರೆಗಳೂ, ದೈತ್ಯರೂ, ಮುನಿಗಳೂ, ರಾಜರೂ ಮಾಡಿದ ಕೃತ್ಯಗಳ ಕಥಾನಕವೆಂದು ತಿಳಿಯುತ್ತೇವೆ. ಪುರಾಣಕ್ಕೂ ಇತಿಹಾಸಕ್ಕೂ ಮುಖ್ಯ ವೈಲಕ್ಷಣ್ಯವೇನೆಂದರೆ ಇತಿಹಾಸದಲ್ಲಿ ನಿಜವಾಗಿ ಆಗಿಹೋದ ಮಾನುಷಿಕ ಸಂಗತ್ರಗಳು ಮಾತ್ರ ಬರುತ್ತವೆ. ಪುರಾಣದಲ್ಲಿ ಹಾಗಿಲ್ಲ; ದೈವಿಕ ಕೃತ್ಯಗಳೂ ದಂತ ಕಥೆಗಳೂ ಬರುತ್ತವೆ.

ಇತಿಹಾಸ— ಈ ಶಬ್ದವು ಇತಿ+ಹ+ಆಸ ಎಂಬ ಸಂಸ್ಕೃತ ಶಬ್ದಗಳು ಕೂಡಿ ಆಗಿವೆ. ಈ ಮೂರಕ್ಕೆ+ನಿಜವಾ + ಆಯಿತು, ಎಂಬದು ಈ ಶಬ್ದಗಳ ಅರ್ಥವು. ಹೊದ ಯಾವದಾದರೊಂದು ಕಥೆ ಹೇಳಿ ಕಡೆಗೆ ಅದು ಬರೀ ಳಿಕೇ ಮಾತಲ್ಲ; ಇತಿಹಾಸ, (ಈ ಮೂರಕ್ಕೆ ನಿಜವಾಗಿ ಯಿತು) ಎಂದು ಅನುವದರಪೂರ್ವಕವಾಗಿ, ಇತಿಹಾಸವೆಂದ ನಿಜವಾಗಿ ಆದಂಥ ಸಂಗತಿ, ಎಂಬ ಅರ್ಥವು ಬಂದಿರುವದು.

ನೀತಿ— ಈ ಶಬ್ದವು ಸಂಸ್ಕೃತ ‘ನೀ’ ಅಂದರೆ ‘ಒ

ಯ್ಯು ' ಎಂಬ ಧಾತುವಿನಿಂದ ಬಂದಪೆ. ಆದದರಿಂದ ನೀತಿ
ಅಂದರೆ, ಒಯ್ಯೋಣ. ಮನುಷ್ಯನು ತನ್ನ ಮನಸ್ಸಿನಲ್ಲಿ
ಯಾವದಾದರೊಂದು ಉದ್ದೇಶವನ್ನು ಹಿಡಿದು ತನ್ನೆನ್ನು
ಆ ಉದ್ದೇಶದ ಫಲಕ್ಕೆ ಒಯ್ಯಲಿಕ್ಕೆ, ಅಂದರೇನು, ಆ ಉ
ದ್ದೇಶದ ಫಲವನ್ನು ತನ್ನ ಕೈವಶ ಮಾಡಿ ಕೊಳ್ಳಲಿಕ್ಕೆ,
ಅರ್ಥಾತ್, ಸಂಪಾದಿಸಲಿಕ್ಕೆ ಮಾಡುವ ಹಂಚಿಕೆ ನೀತಿ ಎನಿ
ಸುವದು. ಅರಸನು ತನ್ನ ರಾಜ್ಯದಲ್ಲಿ ಜನರು ಸುಖದಿಂದಿ
ರಬೇಕು, ಸ್ವಚಕ್ರದಿಂದಾಗಲಿ, ಪರಚಕ್ರದಿಂದಾಗಲ್ಲಿ ಯಾ
ವ ಪ್ರಕಾರದ್ದು ಪೀಡೆಯಾಗಬಾರದು, ಮುತ್ತಾಂವ ಉದ್ದೇ
ಶಗಳನ್ನು ಮನಸ್ಸಿನಲ್ಲಿ ಹಿಡಿದು; ಜನರಿಗೆ ಹಿತಕರವಾದ
ಕಾಯಿದೆಗಳನ್ನು ಮಾಡಿ, ಕುಶಲ ಪ್ರಧಾನಿಗಳ ಸಾಹ್ಯದಿಂ
ದ ಸುಜನರನ್ನು ಮನ್ನಿಸುತ್ತಾ, ಕುಜನರನ್ನು ಆಗಿಂದಾಗ್ಯೆ
ದಂಡಿಸುತ್ತಾ, ಶತ್ರುಗಳನ್ನು ಜಯಿಸುತ್ತಾ, ಉತ್ಕೃಷ್ಟ ರೀ
ತಿಯಾಗಿ ರಾಜ್ಯವನ್ನು ಆಳುವ ಹಂಚಿಕೆಗೆ ರಾಜನೀತಿ ಎ
ನ್ನುತ್ತಾರೆ.

ಶಾಸ್ತ್ರ — ಈ ಶಬ್ದವು ,,ಶಾಸ್,, ಅಂದರೆ ಆಜ್ಞಾ
ನಡಿಸು, ಆಳು, ವ್ಯವಸ್ಥೆಮಾಡು, ಎಂಬ ಸಂಸ್ಕೃತ ಧಾತು
ನಿಂದ ಬಂದಪೆ. ಶಾಸ್ತ್ರವೆಂದರೆ ಯಾವದಾದರೊಂದು ವಿ
ಷಯದ ವ್ಯವಸ್ಥೆ ಮಾಡುವ ಕಟ್ಟಳೆಗಳ ಸಂಗ್ರಹವು. ವ್ಯಾ
ಕರಣದ ಸಂಬಂಧ ವ್ಯವಸ್ಥೆ ಮಾಡುವ ಕಟ್ಟಳೆಗಳಿಗೆ ವ್ಯಾ
ಕರಣ ಶಾಸ್ತ್ರವೆನ್ನುತ್ತಾರೆ; ಧರ್ಮ ಸಂಬಂಧದ ವ್ಯವಸ್ಥೆ ಮಾ
ಡುವ ಕಟ್ಟಳೆಗಳ ಸಂಗ್ರಹಕ್ಕೆ ಧರ್ಮ ಶಾಸ್ತ್ರವೆನ್ನುತ್ತಾರೆ

ಮಂತ್ರ—ಈ ಶಬ್ದವು ಮಂತ್ರ ಅಂದರೆ ಅಲೋಚನೆಮಾ
ಡು ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿಯದೆ. ಮಂತ್ರ

ವೆಂದರೆ ಅಲೋಚನೆ; ವಿಶೇಷತಃ ಗುಪ್ತ ಆಲೋಚನೆ, ಆ
ಲೋಚನೆ ಮಾಡಿ ತೆಗೆದ ಹಂಚಿಕೆ. ಅರಸನ ಕೂಡ ರಾ
ಜ್ಯಕಾರ್ಯದ ಸಂಬಂಧದಿಂದ ಗುಪ್ತ ಆಲೋಚನೇ ಮಾ
ಡುವ ಪುರುಷರಿಗೆ ಮಂತ್ರಿಗಳು ಅನ್ನುತ್ತಾರೆ. ಇದೇ
ವೇರೆಗೆ ಹಾವು ಚೇಳು ಮುಂತಾದವುಗಳು ದಂಶದಿಂದ
ಇಲ್ಲವೆ ಪಿಶಾಚ ಮುಂತಾದವುಗಳು ಬಡಿದು, ಉಂಟಾಗು
ವ ವ್ಯಥೆಯನ್ನು ಇಲ್ಲವೆ ಮರಣವನ್ನು ದೂರ ಮಾಡುವ
ದಕ್ಕಾಗಿ ಪ್ರಯೋಗಿಸಿ ತೆಗೆದ ಗುಪ್ತ ಆಲೋಚನೆಗಳಿಗೆ (ಅಂ
ದರೆ, ಹಂಚಿಕೆಗಳಿಗೆ), ಸಹ ಮಂತ್ರ ಎನ್ನುತ್ತಾರೆ. ಈ
ಪ್ರಕಾರದ ಮಂತ್ರಗಳನ್ನು ಬಲ್ಲವರಿಗೆ ಮಾಂತ್ರಿಕರೆನ್ನು
ತ್ತಾರೆ.

ವರ್ಷ— ಈ ಶಬ್ದವು, "ವೃಷ್," ಅಂದರೆ "ಮಳೆ
ಗರೆ," ಎಂಬ ಸಂಸ್ಕೃತ ಧಾತುವಿನಿಂದ ಪ್ರಾರಂಭವಾಗಿದೆ. ವರ್ಷ
ವೆಂದರೆ ಮಳೆ ಕರೆಯುವುದು. ವರ್ಷಾ ಎಂದರೆ ಮಳೆ
ಗಾಲವು. ಈಗಿನ ಹಿಂದು ಜನರ ಪೂರ್ವಜರಾದ ಆರ್ಯ
ರು ಹಿಂದುಸ್ಥಾನದೊಳಗೆ ಬರುವದಕ್ಕಿಂತ ಮೊದಲು ಹಿಂ
ದು ಕುಶದ ಉತ್ತರಕ್ಕೆ ಆರ್ಯಾನ (ಈಗಿನ ಇರಾಣ)
ಎಂಬ ದೇಶದಲ್ಲಿಯೂ, ಕಾಕೇಶಸ ಪರ್ವತದ ಬುಡಕ್ಕೆ
ಹಾಂದಿರುವ ಸೀಮೆಯಲ್ಲಿಯೂ ಇರುತ್ತಿದ್ದರು. ಅಲ್ಲಿ
ಂದುಸ್ಥಾನದಲ್ಲಿಯಂತೆ ಮಳೆಗಾಲವು ನಿಯಮಿತ ಕಾಲ
. ಬರುವದರಿಂದ ಈ ಮಳೆಗಾಲದಿಂದ ಮುಂದಿನ ಮಳೆ
ಾಲದ ತನಕ ಹೋಗುವ ಕಾಲವೆಂಬ ಅರ್ಥದಲ್ಲಿ ವರ್ಷ
ಎಂಬ ಶಬ್ದವು ರೂಢವಾಗಿರಬಹುದು. ವರ್ಷಕ್ಕೊಮ್ಮೆ
ಆಡತಕ್ಕದ್ದಕ್ಕೆ ವಾರ್ಷಿಕ ಅನ್ನುತ್ತಾರೆ. ಉದಾಹರಣೆ:

ವಾರ್ಷಿಕ ಉತ್ಸಾಹ; ವಾರ್ಷಿಕ ಉತ್ಪನ್ನ, ಇತ್ಯಾದಿ. ವೃಷ್ಟಿ, ಅಂದರೆ ಮಳೆ, ಎಂಬ ಶಬ್ದವೂ ವೃಷ್ ಧಾತು ವಿನಿಂದ ಹುಟ್ಟಿದೆ.

ಯಜಮಾನ— ಈ ಶಬ್ದವು ‘ಯಜ್’ ಅಂದರೆ ಯಜ್ಞವಾಡು, ಎಂಬ ಸಂಸ್ಕೃತ ಧಾತುವಿನಿಂದ ಹೊರಟಿದೆ. ಆದಕರಿಂದ ಯಜಮಾನ ಎಂದರೆ ಯಜ್ಞವಾಡುವನು ಎಂಬದು ಮೂಲ (ಯೌಗಿಕ) ಅರ್ಥವು. ಯಜ್ಞಕರ್ಮದಲ್ಲಿ ಯಜಮಾನನು ಖರ್ಚ ವೆಚ್ಚ ಮಾಡುವವನು, ಮುಖ್ಯನಾಗಿರುತ್ತಾನೆ. ಅದರಿಂದ ಯಜಮಾನ ಅಂದರೆ ಮುಖ್ಯನು ಎಂಬ ಅರ್ಥವು ಬರುಬರುತ್ತ ರೂಢವಾಯಿತು. ಈ ಮೇರೆಗೆ ಶಬ್ದದ ಯೌಗಿಕ ಅರ್ಥಕ್ಕೂ ರೂಢ ಅರ್ಥಕ್ಕೂ ಒಮ್ಮೊಮ್ಮೆ ಬಹಳ ಅಂತರ ಬೀಳುತ್ತದೆ.

CORRESPONDENCE.

ಪತ್ರವ್ಯವಹಾರವು.

ಎರಡನೇ ನಿಬಂಧವು.

ಹಿಂದಿನ (೩) ನೇ ಸಂಚಿಕೆಯಿಂದ ಸಾಗಿದ್ದು.

(ವ್ಯಾ. ಕ. ಸ.)

ರಾವಸಾಹೇಬ ಕನಂಡ ಶಾಲಾಪತ್ರಕದ ಏಡೀಟರರಿಗೆ.

ವಿ. ವಿ. ಈ ವಿಷಯವನ್ನು, ಇದೇ ರೀತಿಯಿಂದ, ಕಲಿಸಬೇಕೆಂಬದು. ಇದುವರಿಗೂ ಯಾವ ಗ್ರಂಥದಲ್ಲಿಯೂ, ನಾನು ನೋಡಿಲ್ಲ. ಪರಂತು, ಟ್ರೇನಿಂಗ ಕಾಲೇಜದಲ್ಲಿ ನಾನು ಇದ್ದಾಗ, ಅಲ್ಲಿಯವರು ಗ್ರಂಥದ ಮೇಲಿಂದ ವ್ಯಾಕರಣ ಮಾ

ಡುವ ಪದ್ಧತಿ ಹೇಳಲಿಲ್ಲ. ಆದಾಗ್ಯೂ, ಕಲಿಸುವ ಪದ್ಧತಿಯಲ್ಲಿ ಪದಾರ್ಥಗಳ ಮೇಲಿಂದ ವ್ಯಾಕರಣವನ್ನು ತಿಳಿಸ ಬೇಕೆಂಬದಾಗಿ, ಇಪ್ಪೀ ಹೇಳಿದೆ. ಅಪ್ಪನಿಂದ ಏನೇನು ಉಪಯೋಗವಾಗಲಾರದೆಂದು, ಕಾಲೇಜದಲ್ಲಿ ಕಲಿತಂಥ ವರಿಗೆ ಗ್ರಹಿಕೆಯಾಗಿರ ಬಹ್ಯದು.

ನಾನು ಇದರಲ್ಲಿ ಪಂಡಿತನು; ಎಲ್ಲರಿಗೆ ಸಮ್ಮತಿ ಪಡಿಸುವೆನೆಂದು ಹೇಳುವದಿಲ್ಲ. ಆದರೂ ನಂನ ಅಲ್ಪ ಬುದ್ಧಿಗೆ ತಿಳಿದ ಮಟ್ಟಿಗೆ ಬರೆದಿದ್ದೇನೆ. ಬಂಧುವರ್ಗದವರು, ಇದರಲ್ಲಿದ್ದ ದೋಷ ರಹಿತವಾದ ಅಲ್ಪ ಲಾಭವನ್ನು ಸ್ವೀಕರಿಸುವರೆಂದು, ಅವರಿಗೆ ವಿನಯದಿಂದ ಬೇಡಿಕೊಳ್ಳುತ್ತೇನೆ.

೩. ವ್ಯಾಕರಣವನ್ನು ಕಲಿಸ ಬೇಕಾದರೆ, ಕೆಲವು ಸಾಲಿಗಳಲ್ಲಿ ಬಾಲ ವ್ಯಾಕರಣವಾಗಲೀ, ಶಾಲಾವ್ಯಾಕರಣವಾಗಲೀ, ಮೊದಲಿನಿಂದಾ ಹುಡುಗರ ಕಡೆಯಿಂದ ಪಾಠ ಮಾಡಿಸುತ್ತಾರೆ. ಇದು ನೆಟ್ಟಗಲ್ಲ. ಯಾಕಂದರೆ, ಅದರಲ್ಲಿ ಸಂಸ್ಕೃತ ಶಬ್ದಗಳೇ ಬಹಳಿದ್ದು, ಅವುಗಳ ಅರ್ಥವನ್ನು ವಿದ್ಯಾರ್ಥಿಗಳ ಲಕ್ಷದಲ್ಲಿ ಕುಲಭವಾಗಿ ಬರದೆ ಅವರು ಪಾಠ ಮಾಡಿದ್ದು, ಅವರಿಗೇ ತಿಳಿಯುವದಿಲ್ಲ. ಆವ ಪ್ರಯುಕ್ತ ಮಾಸ್ತರನು, ಅವುಗಳಲ್ಲಿಯ ಮುಖ್ಯ ಭಾಗಗಳು ಅಂದರೆ, ನಾಮ, ಸರ್ವನಾಮ, ವಿಶೇಷಣ, ಅವ್ಯಯ, ಕ್ರಿಯಾಪದ ಮೊದಲಾದವುಗಳ ವಿವರಗಳನ್ನು, (ಮೂಲತತ್ವಗಳನ್ನು) ಕಪ್ಪು ಹಲಿಗೆಯ ಮೇಲೆ ಪದಾರ್ಥಗಳ ಮೇಲಿಂದ ಸ್ಪಷ್ಟವಾಗಿ ತಿಳಿಯುವ ಹಾಗೆ ಬರೆಯಿಸಿ, ಆದ ಬಳಿಕ ಅವುಗಳಲ್ಲಿಯ ಪ್ರೋಟ ಭಾಗಗಳನ್ನು ವಾಹಿತಿ ಮಾಡಿಕೊಡಬೇಕು.

೩. ಮುಖ್ಯ ಭಾಗಗಳಿಗೂ, ಪ್ರೋಟ ಭಾಗಗಳಿಗೂ, ಯಾವ ಸಂಬಂಧವಿರುವದೋ ಅವನ್ನು ತಿಳಿಸತಕ್ಕದ್ದು. ಹ್ಯಾಗೆ

ಗಂದರೆ, ನಾನು ಎಂಬ ಮುಖ್ಯ ಭಾಗಕ್ಕೆ ಸರ್ವನಾಮ, ವಿಶೇಷಣನಾಮ, ಅಂಕಿತನಾಮ, ಕ್ರಿಯಾನಾಮ, ಕೃದಂತ್ಯ, ಮೊದಲಾದ ಸ್ವೋಟ ಭಾಗಗಳ ಹೆಸರುಗಳು, ಯಾವ ಸಂಬಂಧದಿಂದ ಬಂದವೆಂಬ ಸ್ಪಷ್ಟವಾಗಿ ಹೇಳತಕ್ಕದ್ದು, ಅವಶ್ಯವು.

೩. ಈ ಪ್ರಕಾರ ಎಲ್ಲ ಭಾಗಗಳ ವಿವರವನ್ನೂ, ಸಂಧಿಸಮಾಸಗಳ ಮೂಲ ತತ್ವಗಳನ್ನೂ, ಶಬ್ದಗಳ ಉತ್ಪತಿ ವಾಕ್ಯರಚನೆ ಮುಂತಾದ ಮುಖ್ಯ ವರ್ಗಗಳಲ್ಲಿಯ. ಇಂಗಿತವನ್ನು ಸುಲಭವಾಗಿ ವಿದ್ಯಾರ್ಥಿಗಳು ಗ್ರಹಿಸುವಂತೆ ಹೇಳತಕ್ಕದ್ದು. ಈ ಪ್ರಕಾರ ತಿಳಿಸದ ಹೊತ್ತು, ಬರೆ ಪಾಠ ಮಾಡುವದಕ್ಕೆ ಹೇಳ ಕೂಡದು. ಮೇಲೆ ಹೇಳಿದ ಎಲ್ಲ ಭಾಗಗಳು ವಿದ್ಯಾರ್ಥಿಗಳಿಗೆ ಗ್ರಹಿಕೆ ಆದ ನಂತರ, ಕೆಳಗೆ ವಿವರಿಸಿದ ಪ್ರಕಾರ ಗ್ರಂಥದ ಮೇಲಿಂದ ವ್ಯಾಕರಣ ಮಾಡುವದಕ್ಕೆ ಕಲಿಸಬೇಕು. ಇದು ಇಂತೆನೆ.

೧. ಶಬ್ದ ಬಂದಲ್ಲಿ=ಪ್ರಕೃತಿ, ಹಾಗೂ, ಆಗಮ, ಮತ್ತು, ಪ್ರತ್ಯಯಗಳನ್ನು ತಿಳಿಸತಕ್ಕದ್ದು. ಉದಾಹರಣೆ. (ಮುರವ್ಯ) ಇದರಲ್ಲಿ ಮುರ+ವ್+ಉ=ಮುರವ್ಯ.

೨. ನಾಮ ಬಂದಲ್ಲಿ=ನಾಮ, ಅಂತ, ಲಿಂಗ, ವಿಭಕ್ತಿ, ವಚನ, ಈ ಪ್ರಕಾರ ಹಚ್ಚಬೇಕು. ಉಂ. (ಗಿಡಗಳು) ಗಿಡ ರೂಢನಾಮ, ಅಕಾರಾಂತ, ನಂಪುಸಕಲಿಂಗ, ಪ್ರಥಮದ ಬಹುವಚನವು.

೩. ಪ್ರಥಮ ವಿಭಕ್ತಿ ಬಂದಲ್ಲಿ=ಕರ್ತೃ ಯಾವ ಕ್ರಿಯಾಪದವನ್ನು ಮಾಡುತ್ತಾನೆಂಬುವದನ್ನು, ಹೇಳಬೇಕು. ಉಂ. (ರಾಮನು ಹ್ರೋದನು.) ರಾಮನು ಕರ್ತೃ; ಹ್ರೋದನು ಈ ಕ್ರಿಯಾಪದದ ಕರ್ಮ.

೪. ದ್ವಿತೀಯಾ ವಿಭಕ್ತಿ ಬಂದಲ್ಲಿ=ಕರ್ಮವದವು ಯಾವ

ಕ್ರಿಯಾಪದದ ಕಡಿಗೆ ಇರುವದೆಂಬದನ್ನು ಹೇಳಬೇಕು. ಉ (ಗಿಡವನ್ನು ಕಡಿದನು.) ಗಿಡವನ್ನು ಕರ್ಮ, ಕಡಿದನು ಕ್ರಿಯಾಪದದ ಕಡಿಗೆ.

೫. ಷಷ್ಠಿ ವಿಭಕ್ತಿ ಬಂದಲ್ಲಿ=ಅವರ ಸಂಬಂಧವಾತರ ಡಿಗಿರುವದೋ, ಅದನ್ನು ಹೇಳ ಬೇಕು. ಉ. (ಮನುಷ್ಯನ ಆತ್ಮ) ಮನುಷ್ಯನ ಷಷ್ಠಿ, ಏಕ ವಚನ, ಇದರ ಸಂಬಂಧ ಆತ್ಮ ಈ ನಾಮಪದದ ಕಡಿಗೆ.

೬. ವಿಶೇಷಣ ಬಂದಲ್ಲಿ=ಅದು ಯಾವ ಪದವನ್ನು ವರ್ಣಿಸುತ್ತದೋ, ಅದನ್ನು ಹೇಳಬೇಕು. ಉ. (ಹತ್ತು ಕುದುರೆಗಳು) ಹತ್ತು ಸಂಖ್ಯಾವಾಚಕ ವಿಶೇಷಣ, ಇದರ ವಿಶೇಷ್ಯ ಕುದುರೆ ಈ ನಾಮ ಪದದ ಕಡಿಗೆ.

೭. ಸರ್ವನಾಮ ಬಂದಲ್ಲಿ=ಅರ್ಥ, ಪುರುಷ ಲಿಂಗ, ವಿಭಕ್ತಿ, ವಚನ, ಇವು, ಹಚ್ಚಬೇಕು. ಉ. (ಅವನು) ಅವ ಈ ಪುರುಷಾರ್ಥಕ ಸರ್ವನಾಮ, ಪ್ರಥಮ ಪುರುಷ, ಪುಲಿಂಗ, ಪ್ರಥಮದ ಏಕವಚನ.

೮. ಕ್ರಿಯಾಪದ ಬಂದಲ್ಲಿ=ಧಾತುತ್ರಯ ಅರ್ಥತ್ರಯ, ರೂಪತ್ರಯ ಕಾಲತ್ರಯ, ಪುರುಷತ್ರಯ ಲಿಂಗತ್ರಯ, ವಚನತ್ರಯ ಈ ಪ್ರಕಾರ ಹಚ್ಚಬೇಕು. ಉ. (ಮಾಡುತ್ತಾನೆ.) ಮಾಡು ಈ ಸಕರ್ಮಕ ಧಾತುವಿನ, ಸಂಭವಾರ್ಥ, ಪುರುಷಾರ್ಥಕ ರೂಪ, ವರ್ತಮಾನಕಾಲ, ಪ್ರಥಮ ಪುರುಷ, ಪುಲ್ಲಿಂಗ, ಏಕವಚನ.

೯. ನ್ಯೂನ ಬಂದಲ್ಲಿ=ಧಾತುತ್ರಯ. ಕಾಲತ್ರಯ, ಹಾಗೂ, ನ್ಯೂನಗಳ ಪ್ರಕಾರವನ್ನು ಹೇಳಬೇಕು; ಉ. (ಮಾಡುತ್ತಾ) ಮಾಡು ಈ ಸಕರ್ಮಕ ಧಾತುವಿನ ವರ್ತಮಾನ ಕಾಲಾರ್ಥಕ ಕ್ರಿಯಾನ್ಯೂನ.

೩೦. ಕೃದ್ವಾಚಕ ಬಂದಲ್ಲಿ=ಧಾತುತ್ರಯ, ಕಾಲತ್ರಯಗಳಿಷ್ಟೆ ಹಚ್ಚಬೇಕು. ಉ. (ಪ್ರೋಗದ) ಪ್ರೋಗು ಈ ಅಕರ್ಮಕ ಧಾತುವಿನ, ನಿಷೇಧಾರ್ಥಕ ಕೃದ್ವಾಚಕ.

೩೧. ಭಾವರೂಪ ಬಂದಲ್ಲಿ=ಧಾತುತಿಯ, ಒಂದೇ ಹತ್ತುತ್ತದೆ. ಉ. (ನಡಿಯಲು) ಈ ಅಕರ್ಮಕ ಧಾತುವಿನ ತಿನೇ ಭಾವರೂಪ.

೩೨. ಕೃದ್ವಾನು ಬಂದಲ್ಲಿ=ಪುರುಷ, ಲಿಂಗ, ವಚನಗಳು ಹತ್ತುತ್ತವೆ. ಉ. (ಮಾಡುವವನು) ಕೃದ್ವಾನು, ಪ್ರಥಮ ಪುರುಷ ಪುಲ್ಲಿಂಗ ಏಕ ವಚನ.

೩೩. ಕ್ರಿಯಾನಾಮ ಬಂದಲ್ಲಿ=ಪುರುಷ ಲಿಂಗ, ವಚನಗಳಿಷ್ಟೇ ಹತ್ತುತವೆ. ಉ. (ನುಡಿದದ್ದು) ಕ್ರಿಯಾನಾಮ ಪ್ರಥನು ಪುರುಷ ನಪುಂಸಕಲಿಂಗ ಏಕ ವಚನ.

೩೪. ಅವ್ಯಯ ಬಂದಲ್ಲಿ=ಅವ್ಯಗಳ ಸ್ಥಳ, ಕಾಲ, ರೀತಿ ಮೊದಲಾದವುಗಳಲ್ಲದೆ ಮತೇನು ಹತುವದಿಲ್ಲ. ಉ. (ಯಾವಾಗ) ಕಾಲವಾಚಕ ಕ್ರಿಯಾವಿಶೇಷಣಾವ್ಯಯ.

೩೫. ವಿಶೇಷಣಾರ್ಥಕ ನಾಮಪದ ಬಂದಲ್ಲಿ=ಲಿಂಗ, ವಿಭಕ್ತಿ, ವಚನಗಳು ಹತ್ತುತವೆ. ಉ. (ದೊಡ್ಡವನು) ಈ ವಿಶೇಷಣಾರ್ಥಕ ನಾಮಪದದ ಪುಲಿಂಗ ಪ್ರಥನುದ ಏಕವಚನ.

೩೬. ಊನ ಕ್ರಿಯಾಪದ ಬಂದಲ್ಲಿ=ಧಾತು ಹಾಗೂ, ಸಂಪೂರ್ಣವಾದ ಕ್ರಿಯಾಮಾಲೆ ಇಲ್ಲ. ಪರಂತು, ಪುರುಷ ಲಿಂಗ, ವಚನಗಳು ಹತ್ತುತವೆ. ಉ. (ಆಪೆನು) ಊನ ಕ್ರಿಯಾಪದದ ಉತಮ ಪುರುಷ, ಸಾಮಾನ್ಯ ಲಿಂಗ, ಏಕವಚನ.

೩೭. ಅವ್ಯಯ ಕ್ರಿಯಾಪದ ಬಂದಲ್ಲಿ=ಮೇಲಿನ ಆಖ್ಯಾತ ಪ್ರತ್ಯಯಗಳು ಸಹ ಹತ್ತುವದಿಲ್ಲ. ಉ. (ಬೇಕು, ಬೇಡ) ಮೊದಲಾದವುಗಳು.

ಮೇಲೆ ಹೇಳಿದ ಇಷ್ಟು ಪ್ರಕಾರಗಳು ಧ್ಯಾನದಲ್ಲಿಟ್ಟರೆ; ಗ್ರಂಥದ ಮೇಲಿಂದ ಸರಸವಾಗಿ, ವ್ಯಾಕರಣ ಮಾಡುವದಕ್ಕೆ ಬರುವದು. ಇವುಗಳಲ್ಲದೆ, ಇನ್ನೂ ಕೆಲವು ತೊಂದರೆಗಳು ವಿದ್ಯಾರ್ಥಿಗಳಿಗೆ ಬರುವವು. ಆದರೆ, ಅವುಗಳೆಲ್ಲವನ್ನು ಇಲ್ಲಿ ಬರಿಯುತ್ತ ಹೋದರೆ, ಒಂದು ಗ್ರಂಥವಾಗುವದು. ಆದ್ದರಿಂದ ಯಾರಿಗಾದರೂ, ಮೇಲೆ ವಿವರಿಸಿದವುಗಳ ಹೊರತು, ಮತ್ತೇನಾದರೂ ತೊಂದರೆಗಳು ಬಂದಾಗ್ಗೆ, ಅದರ ವಿಷಯವಾಗಿ, ವಿಚಾರ ಮಾಡುವದಕ್ಕೆ ಬರುವದು. ಮುಂದಕ್ಕೆ ಸಾಗುವದು.

ತಾ. ೩೦ ನೇ ಮಾಹೆ ಜುಲಾಯಿ ೧೮೭೬ ನೇ ಇಸವಿ ಮು. ಬೊಂ. ಶಾ. ಹಾ. ಜೆ. ಧಾ.

} ಸಹೀ ಜಗಂನಾಥ ಶ್ರೀಧರ ಗೋಖಲೇ ಹೆಡ್ಡಮಾಸ್ತರ ಸ್ಕೂಲ ಬೊಂಮನಹಳ್ಳಿ.

ರಾವಸಾಹೇಬ ಶಾಲಾಪತ್ರಕದ ಎಡೀಟರ ಇವರಿಗೆ.

ಅಯ್ಯಾ ತಂಮ, ಮೇ ೩೦ ಗಳ ಶಾಲಾಪತ್ರಕ ಮಾನು (೩೦೭೨೨) ನೇದ್ದರಲ್ಲಿ, ರಾಜೇಬಿನ್ಸ್ಕರ ಸಾಲಿಯಿಂದ ಬಂದ (೨) ಲೆಕ್ಕವನ್ನು ನೋಡಿದೆ. ಇಂಥ ಆಗದಂಥ ಲೆಕ್ಕವನ್ನು ಬರೆದು ಸುಮ್ಮನೇ ಜನರಿಗೆ ತೊಂದರೆ ಕೂಡುವದರಿಂದ ಏನು ಪ್ರಯೋಜನವಿಲ್ಲ. ಈ ಲೆಕ್ಕವನ್ನು ವಿದ್ಯಾರ್ಥಿಯು ಕಡಿಂದ ಛಾಪಿಸುವದರಿಂದಾದರೂ, ತಂಮ್ಮ ಸಾಲಿಯ ಮಹತ್ವ ಕಡಿಮೆ ಆಗುವದಂತೂ ಸಹಜವೇ. ಈ ಲೆಕ್ಕವನ್ನು ಎಂಥಾವನಾದರೂ ನೋಡಿದಕೂಡಲೇ ತಪ್ಪು ಗ್ರಹಿಸುವನು (೩೩೩೬೩೩೫) ಈ ಸಂಖೆಗಳು ಮೂರು ಉತ್ತರದಿಂದ ಬೆಳೆದವೆ. ಕಾರಣ, ಅದೇ ಅಂಕೆಯನ್ನು ಎಷ್ಟು ಸಾರೆ ಇಟ್ಟು ಕೂಡಿಶಿದಾಗ್ಯು, ಬೇರೀಜು (೪೮) ಅಥವಾ (೫೩).

ಆಗುತ್ತದೆ. ಇದರಕಿಂತಲೂ, ಹೆಚ್ಚಿಗೆ ಸರ್ವ ಧನವು ನಮಗೆ ಬೇಕಾಗಿಲ್ಲ, ಒಳಗೂ ಬೇಕಿಲ್ಲ. ನಮಗೆ(೫)ಸರ್ವ ಧನವಾ ಗಬೇಕು. ಬೇರೆ ಇದ್ದ ಒಂದು ವರಹದ ಚೀಲವು (೫೧) ಈ ಗುಂಪಿನಲ್ಲಿ ಬರುವದಿಲ್ಲ. ಎರಡು ಪದಗಳಲ್ಲಿ ಒಂದು (೪೯) ಎರಡನೇದ್ದು (೫೧) ಈ ಪ್ರಕಾರಬಂದು, (೫೧) ಸರ್ವ ಧನವುಳ್ಳಭಾಗದೊಳಗೆ ಒಂದು ವರಹದ ಚೀಲವು ಬರ ಲಿಕ್ಕೇ ಬೇಕು. ಹೀಗೆ ಬರುವದಂತೂ ಅಶಕ್ಯವೇ ಆದ್ದರಿಂದ ಚೀಲಗಳನ್ನು ವಡಿಯದೇ ಎಂಥವನಾದರೂ ಹಂಚಲಾರನು. ಇದೇ ಮಾಸಲೆಯ, ಇನ್ನೊಂದು ಸುಳ್ಳ ಲೆಕ್ಕವನ್ನು ನಂ ನೋದುವಿಕೆಯಲ್ಲಿ ಒಳಗಡೆ ಬಂದಿತ್ತು. ಅದು ಹೀಗೆ (೩॥ ೩॥೫॥೭॥೯॥೧೧॥೧೩॥೧೫॥೧೭॥ ಈ ಪ್ರಕಾ ಕ್ರಯವುಳ್ಳ (೯) ಉಂಗರಗಳನ್ನು ಉಭಯಬಾಂಧವರಿ ವರಹಗಳೂ ಉಂಗರಗಳೂ, ಸಮನಾಗುವಂತೆ ಹಂಚ್ಚ ತಕ್ಕ ದಾ ದರೂ ದುರ್ಲಭನೆಂಬದಕ್ಕೆ ಏನು ಸಂಶಯವಿಲ್ಲ. ಇಂಥವುಗಳ ನ್ನು ತೆಗೆದುಕೊಂಡು ವ್ಯರ್ಥ ಶ್ರಮಬಡುವವರು ಆಗದಂಥ ಲಸಕ್ಕೆ ಹಚ್ಚೆ ಕಡೆಗೆ ನಿರಾಶಿತರಾಗುವಂತೇ ಸರಿ.

ತಾ. ೨೪ ಅವಪ್ಪ ಸನ್ ೧೪೬೬ ಇ. ಮು. ಬಂಮ ನಹಳ್ಳಿ. ತಾ. ಹಾ. ಜೆ. ಧಾ. } ಸಹಿ ಜಗನ್ನಾಥ ಶ್ರೀಧ ಗೋಖಲೇ ಹೆ. ಬಮನ ಳ್ಳಿ.

ಮಹಾರಾಜ ರಾಜನುನ್ಯರಾಜಶ್ರೀ ಕನ್ನಡ ಶಾಲಾಪತ್ರಿಕೆ ಸಂ ಟರರಿಗೆ.

೨. ವಿ. ತಮ್ಮ ಕರದೊಳುದ್ಭವಿಸುವ ಮತಪತ್ರಿಕೆಂ ಕಳಗೆ ಬರೆದ ನಾಲ್ಕು ಪಂಕ್ತಿವಳಿಗೆ ಸ್ಥಳದೊರಿಯುವದಂದ ಕೈಯ್ಯತ್ತನೆ ಶಾಲಾಪತ್ರಿಕೆ ೨೨ ಪಾನು ಕಳಸೇದ

ಜಿಲ್ಲಾ ಧಾರವಾಡ ತಾಲೂಕಾ ಹಾನಗಲ್ಲ ವೈಕಿ ಆಲೂರ ಸಾ
ಲಿಯ ವಿದ್ಯಾರ್ಥಿಯಾದ· ಬಸಯ್ಯಾ ಜನಬಸಯ್ಯಾ ಜವಳಿಮ
ಠ ಇತನು ಪ್ರಶ್ನವಾಡಿದ್ದು ಯೇನಂದರೆ· ಲೆಖ್ಖವ್ರ. ಒಂದು
ಶಹರಿನಲ್ಲಿ ೫ ಕೋಟಿಗಳಿದ್ದವ್ರು· ಆ ಶಹರಿಗೆ ಯಡ್ಡನೇ ಭೂ
ಸೂಲನು ಬಂದು ಮೊದಲನೇ ಕೋಟಿಗೆ ಮುತ್ತಿಗಿ ಹಾಕಿದನು.
೫ ಕೋಟಿಯ ಯಜಮಾನನು ಬಾಕಿ ನಾಲ್ಕು ಕೋಟಿಯವರಿಗೆ
ಸಮ್ಮಲ್ಲಿ ಇದ್ದಷ್ಟು ಜನರನ್ನು ನೀವು ಪ್ರತ್ಯೇಕ ಪ್ರತ್ಯೇಕ ಕೋಟಿ
ರುವರು ಕೊಡರಿ ಅಂದನು. ಅವರು ಅದರಂತೆ ಕೊಟ್ಟರು. ಆ
ಮೇಲೆ ಕತ್ತುಗಳು ಹಿಮ್ಮೆಟ್ಟಿ ಯಡ್ಡನೇ ಮುರನೇ ನಾಲ್ಕ
ನೇ ಪದನೇ ಕೋಟಿಗಳಿಗೆ ಮುತ್ತಿಗೆ ಹಾಕುತ್ತಿರಲಾಗಿ ಪ್ರತ್ಯೇ
ಕೇಕಕೋಟಿಯವರು ಮೊದಲನೇ ಕೋಟಿಯವನಂತೆ ಸಹಾಯ
ಕೊಡಿದ್ದರಿಂದ ಕತ್ತುಗಳು ಹಿಮ್ಮೆಟ್ಟಿ ತಿರುಗಿ ಪ್ರೋದಮೇಲೆ
ಪ್ರತ್ಯೇಕ ಕೋಟಿಗಳಲ್ಲಿ ನೋಡುತ್ತಿರಲಾಗಿ ಆ ಆ ಕೋ
ಟಿಯಲ್ಲಿ ಮೊದಲು ಇದ್ದಷ್ಟು ಜನರಿದ್ದರು ಆದರೆ ಮೊದಲು.
ಒಂದೊಂದು ಕೋಟಿಗಳಲ್ಲಿ ಎಷ್ಟೆಷ್ಟು ಜನರಿದ್ದರೆಂಬುವದಕ್ಕೆ
ತಿಯು.

ಮೊದಲನೇ ಕೋಟಿಯಲ್ಲಿ ಎಷ್ಟು ಜನರಿರುವರೆಂದು ಸ್ಥಾ
ಪುವಿರಿ ಮೋದಲನೇ ಕೋಟಿಯ ೨ ಪಾಲು ೨ನೇ ಕೋಟಿ
ಲ್ಲಿ. ೩ನೇ ಕೋಟಿಯ ೩ ಪಾಲು ೩ನೇ ಕೋಟಿಯಲ್ಲಿ ೪
ಕೋಟಿಯ ೪ ಪಾಲು ೪ನೇ ಕೋಟಿಯಲ್ಲಿ ಮೊದಲನೇ
ಕೋಟಿಯ ೫ ಪಾಲು ೫ನೇ ಕೋಟಿಯಲ್ಲಿ ಈ ಪ್ರಕಾರಾ
ಸ್ಟು ಕೋಟಿಗಳಿದ್ದರೂ ಚೆಂತೆಇಲ್ಲ ಮೊದಲನೇ ಕೋಟಿಯ
ತ್ತುಗಳನ್ನು ಹೆಚ್ಚುವಾಡಿಕೋತ ಪ್ರೋದರಾಯಿತು ಮೊದಲ
ಕೋಟಿಯಲ್ಲಿ ಬೇಕಾದಂಥ ಸಂಖ್ಯೆ ಇಚ್ಛೆಸಿದರೂ ಚೆಂ
ಲ್ಲ. ಮೊದಲನೇ ಕೋಟಿಯ ವಟ್ಟುಗಳನ್ನು ಹೆಚ್ಚು ಮಾಡಿ

ಪರೆ ಉತ್ತರ ಹೊರಡುವದು.

೨ನೇ ಕೋಟೆಯ ಲ್ಲಿ ೭ ಜನರಿದ್ದರು } ೨ನೇ ಕೋ. ೬ಳ ಜನರು } ೩ನೇ ಕೋ. ೨೦ ಜನರು

೪ ನೇಕೋ. ೨೮ ಜನರು } ೫ ನೇ ಕೋಟೆಯ ಲ್ಲಿ ೩೫ ಜನರು.

ಈ ಪ್ರಕಾರ ಜನರಿದ್ದರು.

ಪತ್ರ ವಿಸಾರವಾದ ಬಗ್ಗೆ ಕ್ಷಮೆ ಇರಬೇಕು ಇತಿ ವಿ ಜ್ಞಾಪನಾ. ತಾರೀಖು ೭ ಮಾಹೆ ಸಪ್ಟಂಬರ ಸನ್ನ ೧೮೭೬ ನೇ ಇಸವಿ.

ಸಹೀ ಬಾಬಾ ದಿಕ್ಷಿತ ಬಿನ್ನ ದಿವಾಕರ ದಿಕ್ಷಿತ ಅಗರ ಖೇಡ ವಿದ್ಯಾರ್ಥಿ ಶಾಲಾ ಇಂಡಿ ತಾಲೂಕ ಇಂಡಿ ಜಿಲ್ಲಾ ಕಲಾದಗಿ.

ಮೇಹರಬಾನ ರಾವಸಾಹೇಬ ದಕ್ಷಿಣಭಾಗದ ಕನ್ನಡ ಶಾಲಾಪತ್ರಕದ ಎಡೀಟರರ ಚರಣಾರವಿಂದ್ದಕ್ಕೆ.

ಸೇವಕನು ಮಾಡುವ ಬಿನ್ನಹ ಏನಂದರೆ ಕೆಳಗೆ ಬರೆದ ಸಾಲ್ಕು ಪಂಕಿ ಗಳನ್ನು ತಮ್ಮ ಮನೋಹರವಾದ ಮತಪತ್ರಿಕದಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಮಹತ್ಕಾಂಕ್ಷೆಯನ್ನು ಧರಿಸಿದ್ದೇನೆ.

॥ ಪದ್ಯ ॥

ಬಾರೊಬಾವಜನಯ್ಯಾ । ತಾರಿಸುಯನ್ನನುನೀನು ॥ ದೋರೀಸನ್ಯಾರ್ಗವನು । ಶಿರಿಯಾದಿವರಿಯನೆಮರಿಯವಹೊಕ್ಕೆನು ॥ ॥ ಪಲ್ಲ. ॥

ಸುರಭೀಬೋರವಿದಾರಾ । ಸುರಭೀಸಂಹರಧೀರಾ ॥ ಸುರಭೀಭಾಗವತಾರಾ । ಗುರುತನಯವತಲರಿತವರೊಳಗಿಹ ॥ ೧ ॥ ಸ

ಗಜಾವಾತಸನೂತಾ। ನಗದಾಡ್ಯರಿಯಭ್ರಾತಾ ॥ ನಗದಭಿದಾಸೆ ಸೂತಾ। ನಗಧರಜಗಧರಮುಸುದಬ್ಜವಾಸನೆ ॥ ೨ ॥

ಗುರುಘಾತಕಅನುಜೇಯಾ। ಗುರುತಭಿವಾನದೊಡಿಯಾ ॥ ಗುರುಮುಹಿಪತಿಪ್ರಿಯಾ। ಕರಣರಭರಣಸು। ಕರುಣೊಳುಮೂರತಿ ॥ ೩ ॥

ಈ ಪದವು ನನಗೆ ಬಹು ಚಮತ್ಕಾರವಾಗಿ ಕಂಡು ಬಂದಿರುತ್ತದೆ. ಆದರೆ ನನ್ನ ಶ್ರೀಯ ಬಾಂಧವರಾದ ಯಾವತ್ತೂ ಸ್ಕೂಲವಾಸ್ತರರು ನನ್ನಮೇಲೆ ದಯವಾಡಿ ಈ ಪದವನ್ನು ಟೀಕಿಸುವಿರೆಂದು ತುಂಬಾ ಕೋರಿಕೆಯುಂಟು. ಪತ್ರವಿಸ್ತಾರವಾದ ಬಗ್ಗೆ ಕ್ಷಮವಾ ಇರಬೇಕು. ತಾರೀಖು೧೭ ಮಾಹೆ ಆಗಷ್ಟ, ಸನ್ ೧೮೬೬ ಇಸವಿ.

ಸಹೀ ರಾಘವೇಂದ್ರ ಅಪ್ಪಾಜಿ ಕಷ್ಟ್ಯಅಶಿಷ್ಟಂಟ ವಾಸ್ತರ
ಬಾಗೇವಾಡಿ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಕರ್ತರಿಗೆ

ವಿ. ವಿ. ಸನ್ನ ೧೮೬೬ ಇಸವಿ. ಜೂನ ತಿಂಗಳದ ಕನ್ನಡ ಶಾಲಾಪತ್ರಿಕೆಯ, ಪಾನಸಿಳ್ಳಲ್ಲಿ ಸ್ವಾಮಿ ಶೇಷಾಚಾರ್ಯರಿಗಾಲಿಗಿ ಸ್ಕೂಲವಾಸ್ತರ ಹಿರೇಕೊಪ್ಪ ಇವರು ಕೊಟ್ಟ ಜೋಗಳ ಪದದ ಅರ್ಥವನ್ನು, ನನ್ನ ಬುದ್ಧಿಗೆ ತಿಳಿದಷ್ಟು ಬರದಿದ್ದೇನೆ, ಅದನ್ನು ಛ್ಯಾಪಿಸಿ ಪ್ರಸಿದ್ಧಗೈವಿರೆಂದು ಅಪೇಕ್ಷಿಸುತ್ತೇನೆ.

ಜೋಗಳ ಪದಪ್ಪ

॥ ಪದ ॥ ಗೋಕರ್ಣಬೆರಳಿಗೆಉಂಗರಿಟ್ಟವಳು। ಗೋಕರ್ಣವೈರಿಯಮುಡಿಕಟ್ಟುಳ್ಳವಳು। ಗೋಜಾತಮುಖವುಳ್ಳಗೋ

ತ್ರಿಯಳು। ವರ। ಗೋಪವಹಾನಸತಿತೂಗಿಪಾಡುವಳುಜೋ
ಜೋ ॥ ೬ ॥

ಶಬ್ದಾರ್ಥವ್ಯ; ಗೋಕರ್ಣ=ಪರ್ವತವನ್ನು (ಗೋ=ಕಂಣು; ಕರ್ಣ=ಕಿವಿಯಾದದ್ದು) ಬೆರಳಿಗೆ। ಉಂಗರಿಟ್ಟವಳು=ಉಂಗರವನ್ನು ಮಾಡಿ ಇಟ್ಟಂಥವಳು (ಪಾರ್ವತಾದೇವಿಯು) ಗೋಕರ್ಣ=ಪರ್ವತ; ವೈರಿ=ವಿರೋಧಿಯಾದನ ವಿಲಿನಹಾಗೆ, ಮುಡಿಕಟ್ಟಿಳ್ಳವಳು=ತುರಬುವಳ್ಳಂಥಾಪಾರ್ವತಾದೇವಿಯು, ಗೋಜಾತ=ಕಮಲ (ಗೋ=ಉದಕ ಜಾತ=ಪುಟ್ಟಿದಂಥಾದ್ದು) ಮುಖವ್ಳಳ್ಳ=ಮೋರಿಯುಳ್ಳ ಗೋಪುತ್ರಿಯಳು=ಪರ್ವತರಾಜನ ಮಗಳಾದ, ವರ=ಶ್ರೇಷ್ಠನಾದ, ಗೋಪವಾಹನ=ಈಶ್ವರನ (ಗೋ=ನಂದಿಕೇಶ್ವರನನ್ನು, ವಾಹನ=ವಾಹನ ಮಾಡಿದಂಥವನ) ಸತಿ=ಹೆಂಡತಿಯಾದ ಪಾರ್ವತಾದೇವಿಯು, ತೂಗಿ ಪಾಡುವಳು, ತೂಗಿದಾಡುವಳು.

ಭಾವಾರ್ಥವ್ಯ; ಪರ್ವತವನ್ನು ಉಂಗರಮಾಡಿ ಬೆರಳಲ್ಲಿ ಇಟ್ಟಂಥಾ; ನವಿಲಿನಹಾಗೆ ಮುಡಿಕಟ್ಟುಳ್ಳಂಥಾ, ಕಮಲದಹಾಗೆ ಮುಖವುಳ್ಳಂಥಾ, ಪರ್ವತರಾಜನ ಮಗಳಾದಂಥಾ, ಶ್ರೇಷ್ಠನಾದ ಪರಮೇಶ್ವರನ ಸತಿಯಾದ ಪಾರ್ವತಾದೇವಿಯು ತೂಗಿ, ಜೋಗಳವನ್ನು ಹಾಡಿದಳು. (ಮುಂದಕ್ಕೆ ಸಾಗುವದು.)

ಬಸಲಿಂಗಪ್ಪಾ ಬಸಪ್ಪಾ ಕುರಡಿಕೇರಿ, ಪೆಡ್ಡಮಾಸ್ತರ, ಸಾ
ಡಿ· ತಾ॥ ರೋಣ ಜಿಲ್ಲಾ ಧಾರವಾಡ.

REGISTERED NO. 61
1876

—ಪ್ರಕಟನೆಯು—

—ಪಟಕೀ ಮೇಲೆ ಉತ್ತಮ ಔಷಧವು—

ಪಟಕೀ ಉಪದ್ರವದ ಮೇಲೆ ಉತ್ತಮ ಔಷಧವನ್ನು ಕ
ಡೋದೆಯ ವೈದ್ಯರಾದ ಬಾಳಕೃಷ್ಣರಾವ ಯೆಂಬವರು ತಯ
ರ ಮಾಡಿ, ಬಡೋದಾ, ಮುಂಬಯಿ, ಮತ್ತು ಮದ್ರಾಸ ಮುಂತ
ದ ಇಲಾಖೆಗಳಲ್ಲಿ. ಈ ಔಷಧವು ಅನುಭವಕ್ಕೆ ಬಂದಿರುತ್ತ
ಮುಂಬಯಿಯಲ್ಲಿ. ಇಂದುಪ ಕಾಶ ಛಾಪಖಾನೆಯಲ್ಲಿಯೂ, ಧ
ರವಾಡ ಜಿಲ್ಲಿ ವೈಕಿ ಗರಗ ಸೂಲಮಾಸರರ ಮನೆಯಲ್ಲಿಯ
ಯೂ ವೈದ್ಯ ಬಾವಾ ಇವರ ಕಡೆಗೂ ರೋಖ ಹಣಾ ಕಳು
ಕೊಟ್ಟರೆ ಔಷಧವು ದೊರಕುವದು- ಗರಗದಲ್ಲಿ ನಾಲ್ಕು ಜನ
ಗೆ ಸಾಕಾಗುವಷ್ಟು ಔಷಧಕ್ಕೆ ೧ ರೂ. ೬ ಅ. ಕಿಮ್ಮತ್ತು ಬೆ
ಳುವದು.

ತಾ|| ೧೯ ಫೆಬ್ರುವಾರಿ ಸನ್ ೧೮೭೬ ಇಸ್ವಿ.

ಕನ್ನಡ ಶಾಲಾಪತ್ರಿಕೆ

CANARESE SCHOOL PAPER.

ಪುಸ್ತಕ ೧೨] [ಸಂಚಿಕೆ ೫

ತಾರೀಖು ೨೫ ಮೊದಲು ಸಪ್ಟಂಬರ ೧೮೭೬.

ಅನುಕ್ರಮಣಿಕೆಯು.

ವಿಷಯಗಳು..... ಪ್ರುಟ.

ವಿದ್ಯಾ ಸುಧಾರಣಾ ಸಂಬಂಧದ ವೃತ್ತಾಂತಗಳು..... ೪೦೯
ನೋಟೀಸುಗಳು..... ೪೧೪
ಮೇಘದೂತಕಾವ್ಯ..... ೪೧೬
ಭಾಷಾದರ್ಪಣ..... ೪೨೦
ಪತ್ರವ್ಯವಹಾರವು..... ೪೨೩

CONTENTS..... Page
Educational Intelligence..... 409
Notices..... 414
The Cloud Messenger..... 416
A New Kanarese Grammar..... 420
Correspondence..... 423

BELGAUM.

Printed at the "Belgaum Samachar" Press.

ಶಾಲಾಪತ್ರಕವ್ಯ.

ಪುಸ್ತಕ ೧೨] [ಸಂಚಿಕೆ ೬

ತಾರೀಖು, ೨೫ನೇ ಮಾಹೆ ಸಪ್ಟಂಬರ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮೆ. ಎಜ್ಯುಕೇಶನಲ ಇನಸ್ಪೇಕ್ಟರ ಧೊರೆಗಳು ಟ್ರೇನಿಂಗ ಕಾಲೇಜಿನ ವಾರ್ಷಿಕ ಪರೀಕ್ಷೆಗಾಗಿ ಧಾರವಾಡಕ್ಕೆ ಬರತಕ್ಕ ವರಿದ್ದಾರೆಂದು ಕೇಳುತ್ತೇವೆ. ಈ ಪರೀಕ್ಷೆ ಬರುವ ತಿಂಗಳ ಎರಡನೆ ಸೋಮವಾರ ದಿನ ಪ್ರಾರಂಭವಾಗತಕ್ಕದ್ದದೆ.

ಮೇಜರ ಕ್ಯಾಂಡಿಷಾಹೇಬ ಮರಾಠಿ ಟಾನಸ್ಲೇಟರ, ಇವರು ನಡೆದ ತಿಂಗಳ ಪ್ರಾರಂಭದಿಂದ ತಮ್ಮ ಕೆಲಸದ ರಾಜೀನಾಮೆ ಕೊಟ್ಟು ಪೇನಶನ ತಕ್ಕೊಂಡರು. ಅವರ ಕೆಲಸಕ್ಕೆ ಅಹಮದನಗರ ಜಿಲ್ಲೆಯ ಡಿ. ಇನಸ್ಪೇಕ್ಟರರಾವ ರಾ. ಸಾ. ಶ್ರೀಕೃಷ್ಣ ರಂಗನಾಥ ಶಾಸ್ತ್ರಿ ತಳೇಕರ ಇವರನ್ನು ನೇಮಕ ಮಾಡಿದರು.

ಇಂಗ್ಲಂಡ ದೇಶದೊಳಗಿನ ಪ್ರಸಿದ್ಧ ಸಂಸ್ಕೃತಜ್ಞರಾದ

ಡಾಕ್ಟರ ಮೋನಿಯರ ವಿಲಿಯಮ್ಸ ಸಾಹೇಬರು ಈ ವರ್ಷದ
ಕೊನೆಕೊನೆಗೆ ತಿರುಗಿ ಹಿಂದುಸ್ಥಾನಕ್ಕೆ ಬರತಕ್ಕವರಿದ್ದಾರೆಂ
ದು ಕೇಳುತ್ತೇನೆ. ಹಿಂದುಜನರ ಧರ್ಮ ತತ್ವಗಳ ಕೋಧವಾ
ಡಿ, ಆ ವಿಷಯ ಒಂದು ಪುಸ್ತಕ ಬರೆಯಬೇಕೆಂಬ ಅಪೇಕ್ಷೆ
ಅವರ ಮನಸ್ಸಿನಲ್ಲಿ ಬಹಳವಿದೆ.

ಮುಂಬಯಿ ಯುನಿವರ್ಸಿಟಿಯ ಅಸಿಸ್ಟಂಟ ರಜಿಸ್ಟ್ರಾರ
ರಾವಸಾಹೇಬ ಗೋಪತರಾವ ಮೋರೋಬಾ ಪಿತಳೆ, ಎಂಬವರು
ಕೆಲವು ವರ್ಷಗಳ ಕೆಳಗೆ ಮುಂಬಯಿ ಯುನಿವರ್ಸಿಯ ಮ್ಯಾಟ್ರಿ
ಕ್ಯುಲೇಶನ ಲಿಟಲಗೋ, ಬೀಯೆ, ಎಮೆ ಪರೀಕ್ಷೆಗಳಲ್ಲಿ ಬೇರೆ
ಬೇರೆ ವಿಷಯಗಳಲ್ಲಿ ಹಾಕಿದ ಯಾವತ್ತು ಪ್ರಶ್ನೆಗಳನ್ನು
ಪ್ರಾರಂಭದಿಂದ ಒತ್ತಟ್ಟಿಗೆ ಕೂಡಿಸಿ ಛಾಪಿಸಿ ಪ್ರಸಿದ್ಧ ಮಾಡಿದ
ರು. ಈಗ ಅವರು ಎಲೆಲಬೀ ಪರೀಕ್ಷೆಯ ಪ್ರಶ್ನೆಗಳನ್ನು
ಒತ್ತಟ್ಟಿಗೆ ಕೂಡಿಸಿ ಛಾಪಿಸಿದ್ದಾರೆ. ಈ ಮೇರಿಗೆ ಪರೀಕ್ಷೆಗ
ಳ ಪ್ರಶ್ನೆಗಳನ್ನು ಮುದ್ರಿಸುವದರಿಂದ ಯಾವದೊಂದು ವಿಷ
ಯದಮೇಲೆ ಹಾಕಿದ ಯಾವತ್ತು ಹಿಂದಿನ ಪ್ರಶ್ನೆಗಳು ನೋ
ಡಲಿಕ್ಕೆ ಶಿಕ್ಷಕ, ಪರೀಕ್ಷಕರಿಗೂ ಉಮೇದವಾರರಿಗೂ ಬಹಳ
ಲಾಭವಾಗುವದು.

ವಿಲಾಯತಿಯಲ್ಲಿ ಮಿಸ್ಟರ ಕೆರನ ಎಂಬ ಸಾಹೇಬರು ಸಾ
ಲೆಗಳ ತಪಾಸಿಣಿ ವಿಷಯವ ಮೇಲೆ ಒಂದು ಸ್ವಾರಸ್ಯ ಪು
ಸ್ತಕವನ್ನು ಬರೆದಿದ್ದಾರೆ. ಈ ಗ್ರಹಸ್ಥರು ಸುಮಾರು ಹತ್ತು
ವರುಷ ಸ್ವತಃ ಸಾಲೇ ಇನಸ್ಪೇಕ್ಟರ ಕೆಲಸ ಮಾಡಿದ್ದಾರೆ. ಇ
ವರು ಮಾಡಿದ ಪುಸ್ತಕದಲ್ಲಿ ಮುಖ್ಯವಾಗಿ ಸಾಲೆಗಳ ಪರೀಕ್ಷೆ
ಹ್ಯಾಗೆ ತಕ್ಕೊಳ್ಳಬೇಕು, ಸಾಲೆಗಳಲ್ಲಿ ವಿದ್ಯಾಭ್ಯಾಸವು ಉತ್ತಮ

ಪ್ಪಮಾಗಿ ಸಾಗುವದಕ್ಕೆ ಏನೇನು ಹಂಚಿಕೆಗಳನ್ನು ಮಾಡಬೇಕು, ಎಂಬ ಬಗ್ಗೆ ವಿಶೇಷ ವಿವರ ಕೊಟ್ಟಿರುತ್ತಾರೆ.

ಈಗ ವಿಲಾಯತಿಯಲ್ಲಿ ಹಿಂದುಸ್ಥಾನಕ್ಕೆ ಬರುವ ಸಿವಿಲ ಎಂಜಿನೆಯರ ಜನರನ್ನು ಕಲಿಸಿ ತಯಾರ ಮಾಡುವದಕ್ಕಾಗಿ ಕೂಪರ್ಸ ಹಿಲ್ಲ ಕಾಲೇಜ ಎಂಬದೊಂದು ಸ್ವತಂತ್ರ ವಿದ್ಯಾಲಯವದೆ. ಅದೇ ಮೇರೆಗೆ ಹಿಂದುಸ್ಥಾನಕ್ಕೆ ಬರುವ ಸಿವಿಲ ಸರ್ವಂಟ ಜನರಿಗೆ ಅಭ್ಯಾಸ ಮಾಡಿಸುವದಕ್ಕಾಗಿಯೂ ಒಂದು ಹೊಸ ಕಾಲೇಜವನ್ನು ಹಾಕಬೇಕೆಂದು ಈಗಿನ ಸ್ಟೇಟ ಸೆಕ್ರೆಟರಿಗಳ ಅಭಿಪ್ರಾಯವದೆ.

ಮುಂಬಯಿಯೊಳಗಿನ ಪ್ರಸಿದ್ಧರಾದ ಸರ ಜಮಸೇಟಜಿ ಜೆಜಿಭಾಯಿ ಬಾರೋನೆಟ, ಇವರ ಅಳಿಯರಾದ ವಿಸ್ಪರ ಮೋರಾಭಾಯಿ ಎಂಬವರು ವಿಲಾಯತಿಯಲ್ಲಿ ಬಾರಿಸ್ಟರ ಪರೀಕ್ಷೆಯಲ್ಲಿ ಪಾಸಾದರೆಂದು ತಿಳಿಯುತ್ತದೆ. ಮತ್ತು ಲಂಡನ ಯುನಿವರ್ಸಿಟಿ ಕಾಲೇಜ ಆಸ್ಪಿತ್ರೆಯಲ್ಲಿ ಕಾನೋಬಾ ರಣಛೋಡ ಎಂಬವರಿಗೆ ಬೆಳ್ಳಿಯದು, ಆತ್ಮಾರಾಮ ನಾರಾಯಣ ಎಂಬವರಿಗೆ ಬಂಗಾರದ್ದು ಪದಕಗಳು ಬಕ್ಷೀಸು ದೊರೆದವು. ಈ ಮೇರೆಗೆ ನಮ್ಮ ದೇಶದವರು ವಿಲಾಯತಿಗೆ ಹೋಗಿ, ಅಭ್ಯಾಸ ಮಾಡಿ ದೊಡ್ಡ ಪರೀಕ್ಷೆಗಳಲ್ಲಿ ಪಾಸಾಗಿ ಬಕ್ಷೀಸುಗಳನ್ನು ಪಡಿಯುವದು ಬಹಳೇ ಭೂಷಣಾಸ್ಪದವಾದ ಮಾತು.

ರುರ್ಕಿ ಎಂಜಿನಿಯರ ಕಾಲೇಜದಲ್ಲಿ ಈ ವರ್ಷದ ಪರೀಕ್ಷೆಯಲ್ಲಿ, ಪಾಸಾದವರಲ್ಲಿ ಬಾಬು ಕೃಷ್ಣಚಂದ್ರ ಬಂಡೋಪಾಧ್ಯ, ಎಂಬವರು ಮೊದಲನೆ ನಂಬರು ಬಂದು ಕಾರಣ,

ಅವರಿಗ ೧೦೦೦ ದ ಬಕ್ಷೀಸು ದೊರಕಿತು. ಈ ಕಾಲೇಜದ ಲ್ಲಿ ಈ ಪ್ರಕಾರದ ಬಕ್ಷೀಸು ದೊರಕಿಸಿದವರು. ಇವರೇ ಮೊದ ಲಿನ ಹಿಂದು ಗೃಹಸ್ಥರು.

ಹುಬ್ಬಳ್ಳಿಯಲ್ಲಿ ಹೊಸವತ್ಸರಗಳ ೨೬ ತಾರೀಖಿನಿಂದ ಹುಬ್ಬಳ್ಳಿವೈಭವವೆಂಬದೊಂದು ಸಾಪ್ತಾಹಿಕ ವರ್ತಮಾನಪತ್ರವು ಹೊರಡಹತ್ತಿದೆ.

ಧಾರವಾಡದಲ್ಲಿ ನಡೆದ ಶಿಂಗಳ ಪ್ರಾರಂಭದಿಂದ ಚಂದ್ರೋದಯ ಎಂಬ ಸಾಪ್ತಾಹಿಕ ಕನ್ನಡ ವರ್ತಮಾನಪತ್ರವು ಹೊರಡಹತ್ತಿದೆ. ಈ ಪತ್ರವು ದಕ್ಷಿಣಮಹಾರಾಷ್ಟ್ರದೇಶದೊಳಗಿನ ಇತರ ಕೆಲವು ಪತ್ರಗಳಂತೆ ಅರ್ಧಕನ್ನಡ ಅರ್ಧ ಮಹಾರಾಷ್ಟ್ರವಿಲ್ಲದೆ. ಪೂರ್ಣವಾಗಿ ಕನ್ನಡಭಾಷೆಯಲ್ಲಿಯೆ ಹೊರಡುತ್ತದೆ.

ವಿಕ್ಟೋರಿಯಾ ಮಹಾರಾಣಿ ಧೊರೆಗಳವರ ಜೇಷ್ಠ ಪುತ್ರರಾದ ಯುವರಾಜ ಪ್ರಿನ್ಸ ಆಫ ವೆಲ್ಸ ಇವರು, ಹಿಂದುಸ್ಥಾನಕ್ಕೆ ಬಂದಾಗ, ಇಲ್ಲಿಯ ಸಂಸ್ಥಾನಿಕರು ಅವರಿಗೆ ಎಷ್ಟೋ ಚಮತ್ಕಾರದ ಬೆಲೆಯುಳ್ಳ ಪದಾರ್ಥಗಳನ್ನು ಕಾಣಿಕೆಯಾಗಿ ಕೊಟ್ಟರು. ಅವುಗಳಲ್ಲಿ ವಿಲಾಯತಿಯಲ್ಲಿ ಜನರು ಎಂದೂ ಕಾಣದಂಥ ಎಷ್ಟೋ ಪದಾರ್ಥಗಳವನ್ನು ಯುವರಾಜರು ಬಂದು ಪ್ರಸಿದ್ಧ ಸ್ಥಳದಲ್ಲಿ ಇರಿಸಿದ್ದಾರೆ. ಈ ಪ್ರದರ್ಶನವನ್ನು ನೋಡ ಬಂದವರು ಕೊಟ್ಟ ಫೀಯ ಆಕಾರವು ದಿನ ಪ್ರಾಂಪ್ತಿಗೆ ನಿದಾನ ೪೦೦೦ ರೂಪಾಯಿ ಆಗುತ್ತದೆಂದು ಒಬ್ಬ ಇಂಗ್ಲಿ

ಕ ವರ್ತಮಾನ ಪತ್ರಿಕರ್‌ನು ಬರೆದಿದ್ದಾನೆ. ಇದು ಸುಧಾ
ರಣೆಯ ಪರಿಣಾಮವು!

ಜರ್ಮನ ದೇಶದಿಂದ ಕೃಷಿಶಾಸ್ತ್ರದಲ್ಲಿ ಪರಮ ಪ್ರವೀಣ
ರಾದ ಸ್ಕ್ರಟ್ಕ ಎಂಬ ಸಾಹೇಬರು ಮುಂಬಯಿಯಲ್ಲಿ ಬಂದು
ನಿಂತಿದ್ದಾರೆ. ಅವರು ಇತ್ತಲಾಗಿ ಹಿಂದುಸ್ಥಾನದೊಳಗಿನ
ಕೃಷಿಕರ್ಮದ ವಿಷಯವಾಗಿ 'ಕೃಷಿಕರ್ಮದ ಮೂಲ ತತ್ವಗ
ಳು, ಎಂಬ ಪುಸ್ತಕವನ್ನು ರಚಿಸಿದ್ದಾರೆ. ಈ ನಮ್ಮ ದೇಶದ
ವರು ಈಗೆ ನಡೆದ ಪ್ರಮಾಣವಿಲ್ಲದ ಸಾಗು ಮಾಡುವ
ರೀತಿಯನ್ನು ಬಿಟ್ಟು, ಕೊಟ್ಟು, ಈ ಪುಸ್ತಕದಲ್ಲಿ ವಿವರಿಸಿದ
ರೀತಿಯನ್ನು ಅನುಕರಿಸಿ, ಬಕ್ಕಲತನ ಮಾಡಹತ್ತಿದರೆ; ಈಗೆ
ಸ್ಯಟ್ಟುನದಕ್ಕಿತಲೂ ಹೆಚ್ಚು ಧಾನ್ಯವು ಹುಟ್ಟುವದೆಂಬ ಬಗ್ಗೆ ಸಂ
ದೇಹವಿಲ್ಲ. ಸ್ಕ್ರಟ್ಕ ಧೊರೆಗಳು ಈಗ ನಮ್ಮ ದೇಶದಲ್ಲಿ
ನೈತರು ಸಾಗುವಳಿ ಮಾಡುವ ಕ್ರಮವನ್ನು ಪರಿತ್ಯಜಿಸಿರೆಂದು
ಹೇಳುವನಿಲ್ಲ; ಆದರೆ ಅವನ್ನು ತಿದ್ದುವದಕ್ಕೆ ಕೆಲವು ಹೊಸ
ಕ್ರಮಗಳನ್ನು ಹೇಳಿ, ಅವುಗಳಂತೆ ನಡೆಯರಿ ಎಂದು ಹೇಳಿ
ಸುತ್ತಾರೆ. ಈ ಪುಸ್ತಕವ ಮಹಾರಾಷ್ಟ್ರ ಭಾಷಾಂತರವನ್ನು
ಶಿಕದೊಳಗಿನ ಅನಂತರಾವಜಿ ಕಾನಳೀ ಎಂಬ ಗೃಹಸ್ಥರು
ಮಾಡಿರುತ್ತಾರೆ. ಅದರ ಕಯಮತ್ತನ್ನು ೩॥ ಅಂಣೆ ಇಟ್ಟಿರು
ತ್ತಾರೆ. ಕರ್ನಾಟಕ ದೇಶದಲ್ಲಿ ಯಾರಾದರು ದೇಶಾಭಿಮಾನಿ
ಗಳು ಈ ಪುಸ್ತಕದ ಕನ್ನಡ ಭಾಷಾಂತರವನ್ನು ಮಾಡಿ ಪ್ರಕ
ಟಿಸಿದರೆ, ಒಕ್ಕಲತನ ಮಾಡುವವರಿಗೆ ಬಹಳೀ ಉಪಯೋಗವಾ
ಗುವದು.

ಮದ್ರಾಸ ಸರಕಾರದ ಮಾಡೆಲ ಫಾರ್ಮದ ಸುಪರಿಂಟೆಂಡೆಂಟ

ರು ಮೈಸೂರ ಕೃಷಿಕರ್ಮಶಾಲೆಎಂಬ ಹೊಸದಾಗಿ ಸ್ಥಾಪಿಸಿದ ಶಾಲೆಗೆ ಬರುವ ವಿದ್ಯಾರ್ಥಿಗಳು ತಮ್ಮ ಕಡೆ ಅರ್ಜಿ ಮಾಡಬೇಕೆಂದು ಪ್ರಗಟ ಮಾಡಿದ್ದಾರೆ. ಆ ಶಾಲೆಯ ಮೊದಲನೇ ಟರ್ಮು (ಮುದ್ದತ್ತು) ೧ ನೇ ಅಕ್ಟೋಬರ ಸನ್ ೧೮೮೬ ದಿಂದ ಪ್ರಾರಂಭವಾಗಿ ೩೧ ನೇ ಮಾರ್ಚ ಸನ್ ೧೮೮೭ ಕ್ಕೆ ಮುಗಿಯುತ್ತದೆ. ಈ ಟರ್ಮಿನಲ್ಲಿ ಚನ್ನಾಗಿ ಅಭ್ಯಾಸ ಮಾಡಿದರೆಂದು ನಿಶ್ಚಯನಾದ ೨೪ ವಿದ್ಯಾರ್ಥಿಗಳಿಗೆ ಸರಕಾರಿ ಸಂಬಳ ದೊರೆಯುವದು. ಈ ಸಂಬಳವನ್ನು ಸರಕಾರದವರು ಮಾಡಿದ ಕೆಲವು ನಿಯಮಗಳನ್ನು ಅನುಸರಿಸಿ ನಡೆಯುವವರಿಗೆ ಎರಡೂವರೆ ವರ್ಷತನಕ ನಡೆಯುವದು. ಸರಕಾರಿ ಸಂಬಳ ದೊರೆಯುವ ಪ್ರತಿವ್ಯೊಂದು ವಿದ್ಯಾರ್ಥಿಗೆ ಮೊದಲನೇ ಆರು ತಿಂಗಳು ಮುಗಿಯುವ ತನಕ ೩೨॥ ರೂಪಾಯಿ, ಮುಂದೆ ಒಂದು ವರ್ಷತನಕ ೩೫ ರೂಪಾಯಿ, ಬಳಿಕ ಒಂದು ವರ್ಷತನಕ ೩೭॥ ರೂಪಾಯಿ ಕೊಡಬೇಕು ಎಂಬ ನಿಶ್ಚಯವಾಗಿದೆ. ಇದಲ್ಲದೆ ಆ ಶಾಲೆಯಲ್ಲಿ ತಿಂಗಳಿಗೆ ಹತ್ತತ್ತು ರೂಪಾಯಿಯ ಮೂರು ಪಗಾರಿ ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳುವರು. ಅವರಿಗೆ ಹತ್ತು ರೂಪಾಯಂತೆ ಎರಡು ವರ್ಷತನಕ ತಲಬು ಮುಟ್ಟುವದು

NOTICES.

ನೋಟೀಸುಗಳು.

ದಕ್ಷಿಣಭಾಗದೊಳಗಿನ ಡಿಪ್ಯುಟಿ ಎ. ಇನಸ್ಪೆಕ್ಟರರಿಗೂ ಹಾಯ ಮತ್ತು ಇಂಗ್ಲಿಶ ಸ್ಕೂಲಗಳ ಹೆಡ್‌ಮಾಸ್ತರರಿಗೂ ನೋಟೀಸು. — ೧ ನೇ ಸಪ್ಟಂಬರದಿಂದ ವಿದ್ಯಾಖಾತೆಯ ರೋಖ ಹಣದ ಲೆಖ್ಖವು ತಿಜೋರಿಗಳಿಂದ ತೆಗೆದು ಮೆ. ಎಜ್ಯುಕೇ

ಕಸಲ ಇನಸ್ಪೇಕ್ಟರ ಸಾಹೇಬರವರ ಆಫೀಶಿನಲ್ಲಿ ಇಡಬೇಕೆಂದು ಸರಕಾರದ ತರಾವ ಆಗಿರುತ್ತದೆ. ಆದದರಿಂದ ಶಾಳಾ ಖಾತೆಯ ಕಾಮದಾರರು ಇನ್ನು ಮುಂದೆ ತಿಜೋರಿಗಳಲ್ಲಿ ತಮ್ಮ ಬಿಲ್ಲುಗಳನ್ನು ತ್ರಿಪ್ಲಿಕೇಟ (ಮೂರು) ಕಳುಹಿಸುವ ಕಾರಣ ವಿಲ್ಲ. ನಡೆಯುತ್ತ ಬಂದಂತೆ ಡುಪ್ಲಿಕೇಟ (ಎರಡು) ಕಳುಹಿಸಿದರೆ ಸಾಕು.

ಬೆಳಗಾಂವ
೧೪ ನೇ ಸಪ್ಟಂಬರ ೧೪೭೬ } (Signed) W.A. Russell.
ಎ. ಇನಸ್ಪೇಕ್ಟರ ದಕ್ಷಿಣಭಾಗ

ಸಂನ ೧೪೭೬ ಇಸ್ವಿಯ ಅಗಸ್ಟು ತಿಂಗಳದಲ್ಲಿ ಮೇಹೆಬ್ಬಾನ ಇ. ಇ. ಸಾಹೇಬ ಬಾಹದ್ದೂರ ಪ್ರಾಂತ ದಕ್ಷಿಣಭಾಗ ಇವರ ಮಂಜೂರಿಯಿಂದ ಕಲಾದಗಿ ಜೆಲ್ಲೆಯೋಳಗಣ ಮಾಸ್ತರ ವ ಅ. ಜನರ ವರ್ಗಾವರ್ಗಿಗಳು:-

೧ ಬಾಗೇವಾಡಿ ತಾಲೂಕ ಮೋಳವಾಡ ಸಾಲಿಯ ಹೆಡ್ಡ ಮಾಸ್ತರರಾದ ಡಾವೋದರ ಮಹಾದೇವ ಇವರಂನು, ಇಂಡಿ ತಾಲೂಕ ಭತ ಗುಣಕಿ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿರುತ್ತದೆ. ಪಗಾರ ರೂ. ೧೨

೨ ಬಾಗಲಕೋಟ ತಾಲೂಕ ಬೇವ್ನೂರ ಸಾಲಿಯ ಮಾಸ್ತರರಾದ ವಿಠಲ ರಂಗೋ ಇವರಂನು, ಬಾಗೇವಾಡಿ ತಾಲೂಕ ಮೋಳವಾಡ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿಸಿರುತ್ತದೆ. ಪಗಾರ ರೂ. ೧೨.

೩ ಮುದ್ದೇಬಿಹಾಳ ತಾಲೂಕ ಬಸರಕೋಡ ಸಾಲಿಯ ಮಾಸ್ತರರಾದ ಅಂಣಾಜಿ ಬಾಳಕೃಷ್ಣ ಹಂಬಿಪ್ಪೊಳಿ ಇವರಂನು, ಬಾಗಲಕೋಟ ತಾಲೂಕ ಬೇವ್ನೂರ ಸಾಲ್ಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿಸಿರುತ್ತದೆ. ಪ. ರೂ. ೧೦

೪ ಶಿಂದಗಿ ತಾಲೂಕ ಹಿಪ್ಪರಗಿ ಸಾಲಿಯ ೩ ನೇ ಆ. ದಾ ದ ವೆಂಕಾಜಿ ವಾಸುದೇವ ಇವರಂನು, ಮುದ್ದೇಬಿಹಾಳ ತಾಲೂಕ ಬಸರಕೋಡ ಸಾಲಿಯ ಹೆಡ್ಡ ಮಾಸ್ತರರ ಕೆಲಸಕ್ಕೆ ನೇಮಿಸಿರುತ್ತದೆ. ಪ. ರೂ. ೩೦

೫ ಇಂಡಿ ತಾಲೂಕ ಭತ್ತಗುಣಕೀ ಸಾಲಿಯ ಮಾಸ್ತರರಾದ ರಾಮಚಂದ್ರ ಲಕ್ಷ್ಮಣ ಇವರಂನು ಪಗಾರ ಕಡಿಮೆ ಮಾಡಿ ಶಿಂದಗಿ ತಾಲೂಕ ಹಿಪ್ಪರಗಿ ಸಾಲಿಯ ೩ ನೇ ಆ. ಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ. ಪ. ರೂ. ೪೦

Ramchandra A. Sawanoor.

ಡಿ. ಇ. ಇ. ಜೆ. ಕಲಾದಗಿ.

THE CLOUD MESSENGER.

ಮೇಘದೂತಕಾವ್ಯ.

———೦೦೦———

ಪೀಠಿಕೆ.

ಈ ನಮ್ಮ ಭರತ ಖಂಡದಲ್ಲಿ ಪ್ರಾಚೀನ ಕಾಲದಿಂದ ಇಂದಿನ ವರೆಗೆ ಆಗಿ ಹೋದ ಅಸಂಖ್ಯಾತ ಕವಿಗಳಲ್ಲಿ ಕಾಲಿದಾಸನೇ ಅಗ್ರಗಣ್ಯನೆಂದು, ನಮ್ಮ ದೇಶದವರೇ ಅಲ್ಲ. ಯೂರೋಪಿಯನ ಜನರು ಸಹ ಒಪ್ಪಿಕೊಳ್ಳುತ್ತಾರೆ. ಯೂರೋಪ ಖಂಡದೊಳಗಿನ ಹಲವು ದೇಶಗಳಲ್ಲಿ ಈಗೇನು ಜನರಿಗೆ ಸಂಸ್ಕೃತ ವಿದ್ಯೆಯ ಅಭ್ಯಾಸವು ಇಷ್ಟು, ರುಚಿ ತಕ್ಕೊಂಡಿರುತ್ತದೆಯೋ. ಅದಕ್ಕೆ ಕಾಲಿದಾಸನ ಗ್ರಂಥಗಳೇ ಮೂಲ ಕಾರಣವು. ನಡೆದ ಶತವಾನದ ಪ್ರಾರಂಭದ ಸುಮಾರಕ್ಕೆ ಕಲಕತ್ತೆಯ ನ್ಯಾಯ ಸಭೆಯ ಮುಖ್ಯರಾದ ಸರ ವಿಲಿಯಮ್ ಜೋನ್ಸ ದೊರೆಗಳು ಕಾಲಿದಾಸನ ಶಾಂಕುಂತಲ ನಾಟಕದ

ಇಂಗ್ರಜಿ ಭಾಷಾಂತರವನ್ನು ಮಾಡಿದರು. ಆ ಭಾಷಾಂತರವನ್ನು ಓದಿ ನೋಡಿದ ಮೇಲಿಂದ ಸಂಸ್ಕೃತ ಭಾಷೆಯೊಳಗಿನ ತರತರದ ಸರಸ ಗ್ರಂಥಗಳನ್ನು ಓದಿ ನೋಡಬೇಕೆಂಬ ಇಚ್ಛೆ ಹಲವರ ಯುರೋಪಿಯನ ಪಂಡಿತರ ಮನಸ್ಸಿನಲ್ಲಿ ಉಂಟಾಯಿತು. ಜರ್ಮನ ದೇಶದಲ್ಲಿ ಗೇಟ ಎಂಬನೊಬ್ಬ ಮಹಾ ಕವಿಯು ಆಗಿ ಹೋದನು. ಅತನು ಕಾಲಿದಾಸನ ಶಾಕುಂತಲ ನಾಟಕವನ್ನು ಓದಿ "ಶಕುಂತಲಾ ಎಂಬ ಹೆಸರಿನಲ್ಲಿ ಈ ಪೃಥ್ವಿಯ ಮೇಲೆಯೂ, ಸ್ವರ್ಗದಲ್ಲಿಯೂ ಇರುವ ಯಾವತ್ತು ಅಪರೂಪ ಸುಂದರ ವಸ್ತುಗಳ ಸಮಾವೇಶವಾಗುವದು" ಎಂಬ ಉದ್ಗಾರವನ್ನು ಪ್ರಕಟ ಮಾಡಿದನು. ಈಗ ಯೂರೋಪದೊಳಗೆ ಕಾಲಿದಾಸನ ಶಾಕುಂತಲ ನಾಟಕದ ಯೋಗ್ಯತೆ ಇಷ್ಟು, ಬೆಳೆದಿರುತದೆಯೆಲ್ಲ. ಯೂರೋಪದಲ್ಲಿ ನಡೆಯುವ ಬಹುತರ ಯಾವತ್ತು ಭಾಷೆಗಳಲ್ಲಿ ಅದರ ಭಾಷಾಂತರಗಳು ಆಗಿರುತ್ತವೆ.

ಈ ಮೇರೆಗೆ ನಮ್ಮ ದೇಶದಲ್ಲಿಯೆ ಅಲ್ಲ. ಯೂರೋಪ ಖಂಡದಲ್ಲಿ ಸಹ ಕಾಲಿದಾಸನ ಬಗ್ಗೆ ಜನರದು ಇಷ್ಟು, ಪ್ರಾಜ್ಞಬುದ್ಧಿ ಇದಾಗ್ಯೂ ಅವನು ಹಿಂದುಸ್ಥಾನ ಯಾವ ಪ್ರದೇಶದಲ್ಲಿ, ಎಂದು ಆಗಿಹೋದನು. ಎಂಬ ಬಗ್ಗೆ ನಿಶ್ಚಯಾತ್ಮಕವಾಗಿ ಯಾರಿಗೂ ಗೊತ್ತಿಲ್ಲೆಂದರೆ ಸಾಗುವದು. ನಮ್ಮ ದೇಶದಲ್ಲಿ ಪ್ರಾವಿಣ್ಯರು ಹೇಳುವ ಕೆಲವು ದಂತಕಥೆಗಳಮೇಲಿಂದ ಕಾಲಿದಾಸನು ಧಾರಾನಗರಿಯ ಭೋಜರಾಜನ ಆಶ್ರಯದಲ್ಲಿ ಇದ್ದನೆಂದು ತಿಳಿದು ಬರುತದೆ. ಮತ್ತು ಕೆಲವು ದಂತಕಥೆಗಳಲ್ಲಿ ಆತನು ಉಜ್ಜಯಿನಿಯ ಚಕ್ರವರ್ತಿಯಾದ ವಿಕ್ರಮಾರ್ಕರಾಯನ ಸಭೆಯಲ್ಲಿ ನವರತ್ನರೆಂದೆನಿಸಿಕೊಂಡ ಪಂಡಿತರಲ್ಲಿ ಒಬ್ಬನಾಗಿದ್ದನೆಂದು ಹೇಳಿಯದೆ. ಇತ್ತಲಾಗಿ ವರರುಚಿ

ಸಿ ಪ್ರಸಿದ್ಧ ಪಂಡಿತ ಡಾಕ್ಟರ ಭಾವ್ಯ ದಾಜಿ ಎಂಬವರು ಕಾಲಿ
ದಾಸನ ವಿಷಯ ಬಹಳ ಸೂಕ್ಷ್ಮರೀತಿಯಿಂದ ಕೋಧ ಮಾಡಿ
ಆತನು ಕಾಶ್ಮೀರದೇಶದವನು, ಸಾರಸ್ವತಬ್ರಾಹ್ಮಣನು; ಕ್ರಿಸ್ತ
ಶತಕದ ಆರನೆ ಶತಮಾನದ ಮಧ್ಯದಲ್ಲಿ ಉಜ್ಜಯನಿಯ ಅರಸ
ನಾದ ಶಕ ವಿಕ್ರಮಾದಿತ್ಯನ ಕಾಲಕ್ಕೆ ಪ್ರಸಿದ್ಧಿಗೆ ಬಂದನು
ಎಂದು ತಮ್ಮ ಅಭಿಪ್ರಾಯ ಕೊಟ್ಟಿರುತ್ತಾರೆ. ಕೆಲವ ಯೂ
ರೋಪಿಯನ ಪಂಡಿತರು ಕಾಲಿದಾಸನು ಕ್ರಿಸ್ತ ಶಕದ ಎರಡನೇ
ಶತಮಾನದಲ್ಲಿ ಆಗಿ ಹೋಗಿರಬೇಕು, ಎಂದು ತರ್ಕಮಾಡು
ತ್ತಾರೆ. ಕಲಕತ್ತೆಯ ಸಂಸ್ಕೃತ ಪಾಠಶಾಲೆಯೊಳಗಿನ ನ್ಯಾಯ
ಶಾಸ್ತ್ರದ ವಿದ್ಯಾಗುರುಗಳಾದ ಪಂಡಿತ ತಾರಾನಾಥ ತರ್ಕವಾಚ
ಸ್ಪತಿಗಳು ಕಾಲಿದಾಸನು ಕ್ರಿಸ್ತ ಶಕದ ಆರಂಭಕ್ಕಿಂತ ಮೊದಲು
೫೬ ವರ್ಷ ವಿಕ್ರಮಾರ್ಕರಾಯನ ಆಶ್ರಯದಲ್ಲಿದ್ದನೆಂ
ದು ಸ್ಥಾಪಿಸಿದ್ದಾರೆ.

ಈಗ ನಮ್ಮ ಜನದಲ್ಲಿ, ಕಾಲಿದಾಸನ ಹೆಸರಿನ ಮೇಲೆ ಎ
ಷ್ಟೋ ಗ್ರಂಥಗಳು ಮಾರುತ್ತವೆ; ರಘುವಂಶ ಕುಮಾರಸಂಭವ
ಮೇಘದೂತ ಕಾವ್ಯಗಳು, ಶಾಕುಂತಲ ವಿಕ್ರಮೋರ್ವಶಿ, ಮಾ
ಲವಿಕಾಗ್ನಿಮಿತ್ರ ನಾಟಕಗಳು. ಋತುಸಂಹಾರ ಶ್ರುತಬೋಧ
ಶೃಂಗಾರತಿಲಕ, ಪುಷ್ಪಬಾಣವಿಲಾಸ ಜ್ಯೋತಿರ್ವಿದಾಭರಣ, ಘ
ಟಕರ್ಪರ ಮುಂತಾದ ಹೆಸ್ಸರ ಗ್ರಂಥಗಳು ಆತನೇ ಬರೆದ
ದ್ದವೆಂದು ಹಲವು ಜನರು ಹೇಳುತ್ತಾರೆ. ಆದರೆ ಈ ಸಂಗತಿ
ನಿಜವಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಮೇಲೆ ಹೇಳಿದ
ಗ್ರಂಥಗಳಲ್ಲಿ ಮೊದಲಿನವು ಆರು ಕಾಲಿದಾಸನವೆಂದು ಬಹು
ಕರವಾಗಿ ಯಾವತ್ತು ಪಂಡಿತರ ಐಕಮತ್ಯವದೆ. ಉಳಿದ
ವುಗಳಲ್ಲಿ ಋತು ಸಂಹಾರವೆಂಬ ಕಾವ್ಯವೂ ಆತನದೇ ಇರ
ಬಹುದೆಂದು ಕೆಲವರ ಅಭಿಪ್ರಾಯವದೆ. ಆದರೆ ಉಳಿದವನ್ನು

ಲ್ಲ ಎರಡನೆಯವರು ಯಾರಾದರೂ ಬರೆದು, ಕೇವಲ ಜನರಲ್ಲಿ ಪ್ರಸಿದ್ಧ ಯಾಗಬೇಕೆಂದು ಕಾಲಿದಾಸನ ಹೆಸರು ಹಾಕಿರುತ್ತಾರೆಂಬದಕ್ಕೆ ಸಂಶಯವಿಲ್ಲ.

ಮಹಾರಾಷ್ಟ್ರ ಭಾಷೆಯಲ್ಲಿ ಶಾಕುಂತಲ, ವಿಕ್ರಮೋರ್ವಶಿ ಮಾಲವಿಕಾಗ್ನಿಮಿತ್ರ ನಾಟಕಗಳವ್ರೂ ಕುಮಾರಸಂಭವ ಮೇಘದೂತ ಕಾವ್ಯಗಳವ್ರೂ ಭಾಷಾಂತರಗಳು ಆಗಿರುತ್ತವೆ. ಆದರೆ ಕನ್ನಡದಲ್ಲಿ ರಾ. ರಾ. ಶೇಷೋ ರಾಮಚಂದ್ರ ಚೂರಮುರಿ, ಎಂಬವರು ಮಾಡಿದ ಶಾಕುಂತಲ ನಾಟಕದ ಭಾಷಾಂತರದ ಹೊರ್ತು; ಕಾಲಿದಾಸನ ಎರಡನೆ ಗ್ರಂಥವ್ರ ಗೊತ್ತಿಲ್ಲ. ಆದದರಿಂದ ಈಗ ನಾವ್ರ ಮೇಘದೂತ ಕಾವ್ಯದ ಗದ್ಯಾತ್ಮಕ ಭಾಷಾಂತರವನ್ನು ಮಾಡಿ ನಮ್ಮ ವಾಚಕರಸಭುವಾಗಿ ಪ್ರತಿ ಅಂಕಿನಲ್ಲಿ ಅವಕಾಶಾನುಸಾರವಾಗಿ ಪ್ರಸಿದ್ಧ ಮಾಡುತ್ತೇವೆ.

ಮೇಘದೂತ ಕಾವ್ಯವ್ರ ಬಹಳ ಸಣ್ಣದದೆ, ಅದರಲ್ಲಿ ೧೫೦ ಕ್ಕೆ ಕೆತೆವ್ರ ಕಡಿಮೆ ಶ್ಲೋಕಗಳುಂಟು. ಅದರಲ್ಲಿ ವರ್ಣಿಸಿದ ಕಥೆಯು ಸಣ್ಣದಿದಾಗ್ಯೂ ಬಹ್ರ ಮನೋರಂಜಕವಾಗಿದೆ. ಈ ಕಾವ್ಯದಲ್ಲಿ ಅಲ್ಲಲಿಗೆ ಸೃಷ್ಟ, ಶೋಭೆಯ ವರ್ಣನಗಳೂ, ಮನುಷ್ಯರ ಶುದ್ಧ ಮನೋವೃತಿಗಳ ವರ್ಣನಗಳೂ, ಬಹಳೇ ರಸವಾಗಿರುವದರಿಂದ, ಇದನ್ನು ರಘುವಂಶ ಕುಮಾರ ಸಂಭವ, ಮಾಘ, ನೈಷಧ ಕಿರಾತ ಕಾವ್ಯಗಳತರುವಾಯ ಆರನೇ ಮಹಾಕಾವ್ಯವೆಂದು ಎಣಿಸುತ್ತಾರೆ. ಈ ಕಾವ್ಯದ ಮೇಲೆ ಮಲ್ಲಿನಾಥ ಮಹೋಪಾಧ್ಯಾಯನು ಬರೆದ ಸಂಸ್ಕೃತ ಟೀಕೆಯುಂಟು.

A NEW KANARESE GRAMMAR.

ಶ್ರೀ

ಭಾಷಾದರ್ಪಣ.

———000———

ಪೀಠಿಕೆ

॥ ಕಂದ ॥ ವ್ಯಾಕರಣದಿಂದೆ ಪದವು
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ
ನಾಕಾಂಕ್ಷೆಯ ಮುಕ್ತಿಯಕ್ಕುಮದೆ ಬುಧಗೆ ಫಲಂ*

ಶಬ್ದಮಣಿದರ್ಪಣ

ಕರ್ನಾಟ ಭಾಷೆಯಲ್ಲಿ ಹೊಸಗನ್ನಡ ಹಳೆಗನ್ನಡ ಎಂ
ಎರಡು ಭೇದಗಳುಂಟು. ಜನರು ಮಾತಾಡುವ ರಚನೆಯಂ
ರಚಿಸಿದ ಗದ್ಯ ಗ್ರಂಥಗಳೊಳಗಿನ ಭಾಷೆಯೇ ಹೊಸಗನ್ನ
ವು: ಕಾವ್ಯಗಳೊಳಗಿನ ಭಾಷೆಯೇ ಹಳೆಗನ್ನಡವು. ಈ
ವಿದ್ಯಾಶಾಲೆಗಳಲ್ಲಿ ಇವೆರಡೂ ಪ್ರಕಾರದ ಗ್ರಂಥಗಳನ್ನು
ಲಿಸುತ್ತಾರೆ; ಆದದರಿಂದ ಇವೆರಡೂ ತರದ ಭಾಷಾನಿಯಮಗ
ನ್ನು ತಿಳುಕೊಳ್ಳುವದು ವಿದ್ಯಾರ್ಥಿಗಳಿಗೆ ಅವಶ್ಯವದೆ.
ಕಾರಣ ಎರಡೂ ತರದ ನಿಯಮಗಳುಳ್ಳ ವ್ಯಾಕರಣ ವನು
ಬರೆಯುತ್ತೇವೆ.

ಈ ವ್ಯಾಕರಣದಲ್ಲಿ ಅಕ್ಷರಖಂಡ, ಶಬ್ದಖಂಡ, ವಾಕ್ಯಖ
ಡ ವೆಂಬ ಮೂರು ಭೇದಗಳುಂಟು.

---

* ವ್ಯಾಕರಣ ತಿಳಿವಿದ್ದರೆ ಪದಜ್ಞೀದ ತಿಳಿಯುವದು; ಆ ಪದಜ್ಞೀ
ದಿಂದ ಅರ್ಥ ತಿಳಿಯುವದು; ಆ ಅರ್ಥ ಜ್ಞಾನದಿಂದ ತತ್ವ ವಿಚಾ
ರುಟ್ಟುವದು; ಆ ತತ್ವವಿಚಾರದಿಂದ ಅಜ್ಞಾನದ ಬಿಡುಗಡೆ ಯಾ
ವದು; ಇದೇ ವ್ಯಾಕರಣ ಶಾಸ್ತ್ರದ ಫಲವು. ಆ ಕಾರಣ ವ್ಯಾಕ
ಣ ಕಲಿಯ ತಕ್ಕದ್ದು.

ಅಕ್ಷರಖಂಡ

೧ ಸಂಜ್ಞಾಪ್ರಕರಣ

೨ ಉಚ್ಚಾರಣೆಯೂ ಹಿರಿಯರು ಕಲ್ಪಿಸಿದ ಲಿಪಿ ಸಂಜ್ಞೆಯೂ ಇದ್ದ ಧ್ವನಿಗಳಿಗೆ ಅಕ್ಷರ ಅಥವಾ ವರ್ಣಗಳೆನ್ನುತ್ತಾರೆ; ಗುಡುಗು ಮುಂತಾದ ಧ್ವನಿಗಳಿಗೆ ಉಚ್ಚಾರಣೆ ಇದ್ದಾಗ್ಯೂ ಲಿಪಿಸಂಜ್ಞೆ ಇಲ್ಲ. ಇಂಥವು ಬರೆಯಲಿಕ್ಕೆ ಬಂದಾಗ್ಯೂ ಉಚ್ಚರಿಸ ಬರುವದಿಲ್ಲ. ಆ ಕಾರಣ ಇವುಗಳಿಗೆ ಅಕ್ಷರವೆನ್ನು ಕೂಡದು (ಶಬ್ದಮಣಿದರ್ಪಣ ೨ ನೆ ಸೂತ್ರ)*

೩ ಧ್ವನಿರೂಪದಿಂದ ಕವಿಗೆ ವಿಷಯವಾಗುವ ಅಕ್ಷರಕ್ಕೆ ಶಾವಣ ಎಂತಲು, ಲಿಪಿ ಭೇದದಿಂದ ಹಲವು ಆಕಾರವಾಗಿ ಕಣ್ಣಿಗೆ ತೋರುವ ಅಕ್ಷರಕ್ಕೆ ಚಾಕ್ಷುಷ ಎಂತಲು ಹೆಸರುಂಟು. (ಕ. ಮ. ದ. ೩ ನೆ ಸೂ.)

೪ ವರ್ಣಮಾಲೆ, ಕಾಗುಣಿತಾಕ್ಷರ, ಒತ್ತಕ್ಷರಗಳೆಂದು ಮೂರು ವಿಧವು.

೫ ಪ್ರಾಣಿಗಳ ಇಚ್ಛಾವಾತದಿಂದ ಗಂಟಲೊಳಗೆ ಅ ಸ್ವರವು ಹುಟ್ಟುತ್ತದೆ; ಅದನ್ನು ಉಚ್ಚರಿಸುವಾಗ ನಾಲಿಗೆಯನ್ನು ಚಲಿಸುವದರಿಂದಲೂ, ತುಟಿಗಳನ್ನು ಕೂಡಿಸುವದರಿಂದಲೂ ಬಾಯೊಳಗೆ ಬೇರೆ ಬೇರೆ ವರ್ಣಗಳು ಹುಟ್ಟುತ್ತವೆ; ಆ ವರ್ಣಗಳ ಸಮುದಾಯಕ್ಕೆ ವರ್ಣಮಾಲೆ ಎಂಬ ಹೆಸರು.

೬ ವರ್ಣಮಾಲೆ- ಕನ್ನಡದಲ್ಲಿ ವ್ಯವಹರಿಸುವ ವರ್ಣಮಾಲೆಯೊಳಗೆ ೫೩ ವರ್ಣಗಳುಂಟು. ಇವುಗಳಲ್ಲಿ ೧೫ ಸ್ವರಗಳು, ೩೪ ವ್ಯಂಜನಗಳು, ೨ ಯೋಗವಾಹಗಳು ಎಂದು ಮೂರು ಭೇದಗಳುಂಟು. ಸ್ವರಗಳೆಂದರೆ- ಬೇಕಾದಷ್ಟು ಕಾಲದವರೆಗೆ ಉಚ್ಚರಿಸಬಹುದಾದ ಸ್ವಾಭಾವಿಕ ಧ್ವನಿಗಳು. ವ್ಯಂಜನಗಳೆಂದರೆ- (ವಿ=ವಿಶೇಷವಾಗಿ, ಅಂಜನ=ಸ್ಪಷ್ಟೀಕರಣ)

ಭಾಷೆಯನ್ನುಂಟು ಮಾಡುವದಕ್ಕೋಸ್ಕರ ಮನುಷ್ಯರು ಯತ್ನ
ದಿಂದ ಉಚ್ಚರಿಸಿದ ಸ್ಪಷ್ಟ ಧ್ವನಿಗಳು. ಯೋಗವಾಹಗಳಿಂದ
ಸ್ವರ ವ್ಯಂಜನಗಳ ಸಂಯೋಗವನ್ನು ವಹಿಸುವ ಧ್ವನಿಗಳು.

ಉದಾಹರಣೆ.

ಸ್ವರಗಳು-ಅ ಆ. ಇ. ಈ ಉ, ಊ * ಋ, * ೠ
*ಎ ಏ ಐ. ಒ, ಓ ಔ.

ವ್ಯಂಜನಗಳು-ಕ್, ಖ್ ಗ್. ಘ್. ಙ್. ಚ್, ಛ್. ಜ್
ಝ್, ಞ್; ಟ್; ಠ್, ಡ್. ಢ್, ಣ್ ತ್ ಥ್, ದ್, ಧ್ ನ್,
ಪ್; ಫ್, ಬ್; ಭ್; ಮ್, ಯ್; ರ್, ಲ್, ವ್, ಶ್; ಷ್.
ಸ್, ಹ್. ಳ್,.

ಯೋಗವಾಹಗಳು-ಅಂ. ಅಃ. ಇವುಗಳಲ್ಲಿ . ಅಂ , ಎಂ
ಬದಕ್ಕೆ ಅನುಸ್ವಾರ ಅಃ . ಎಂಬದಕ್ಕೆ ವಿಸರ್ಗ ವೆನ್ನುತ್ತಾ
ರೆ. ಇವುಗಳಬಗ್ಗೆ ನುಂದೆ ಹೆಚ್ಚಿಗೆ ಬರೆಯುವೆನ.

೭ ಕನ್ನಡ ವರ್ಣಮಾಲೆಯಲ್ಲಿ ಎ. ಒ ಳ. ಈ ಮೂರು
ವರ್ಣಗಳು ಹಚ್ಚುಂಟು. ಆದರೆ ಋ ೠ ಷ್ ಜ್ಞ ಶ್
ಷ್, ಱ ಈ ವರ್ಣಗಳು ಅಚ್ಚ ಗನ್ನಡದಲ್ಲಿ ಇಲ್ಲ ಇವ ತ
ತ್ಸಮ ಶಬ್ದಗಳಲ್ಲಿ ಪಾತ ಬರುವವರಿಂದ ಕನ್ನಡ ವರ್ಣ ಮಾ
ಲೆಯಲ್ಲಿ ಗೂಡಿಸಿಟ್ಟಿದೆ. ಜ್ಞ ಷ್. ಇವೆರಡು ವರ್ಣಗಳು ಮುಂ
ದಿನ ಇಪ್ಪತ್ನೇ ನಿಯಮದ ಪ್ರಕಾರ ಕನ್ನಡ ಶಬ್ದಗಳಲ್ಲಿ ಪಾತ
ಬರುತ್ತವೆ ಅವುಗಳ ಹೊರತು ಬೇರೆ ತರದಿಂದ ಬರುವದಿಲ್ಲ.

(ಅ) ಆದರಿಂದ ಋ, ೠ, ಷ್. ಜ್ಞ ಶ್. ಷ್, ಱ ಇವು
ತತ್ಸಮ ಶಬ್ದಗಳಲ್ಲಿಯೇ ಬರುವಕಾರಣ ಇವುಗಳಿಗೆ ಕ್ಲೇಶ ವ

---

* ಋ, ೠ ಇವು ದೇವನಾಗರೀ (ಸಂಸ್ಕೃತ) ಲಿಪಿಯೊಳಗಿದ್ದ
ನವ್ವ ಕನ್ನಡ ಲಿಪಿಯಲ್ಲಿ ಕೇರಿವೆ. ಇವುಗಳ ಮೂಲ ಸ್ವರೂಪ ನೋ
ಡಿರಿ: ಋ=ಋ, ೠ=ೠ, ಱ ಱ

ರ್ಣಗಳೆಂಬ ಹೆಸರು; ಎ, ಓ, ಳ್, ಇವ್ರ ಮೂರು ಕನ್ನಡ ಶ
ಬ್ದಗಳಲ್ಲಿಯೇ ಬರುವಕಾರಣ ಇವ್ರಗಳಿಗೆ ವಿಶೇಷ್ಯವರ್ಣಗಳೆಂ
ಬ ಹೆಸರು (ಶ. ವ. ದ. ೪ಸೆ ಸೂ.).

(ಮುಂದೆ ಸಾಗುವದು.)

ಗಂಗಾಧರ ಮಡಿವಾಳೇಶ್ವರ ಅ. ಕನ್ನಡ ಶ್ರಾನ್‌ಸ್ಲೇಟರ್.

CORRESPONDENCE.
ಪತ್ರವ್ಯವಹಾರವು.

ರಾವಬಹಾದೂರ ಕನ್ನಡ ಶಾಲಾಪತ್ರಿಕೆಯ ಎಡಿಟರ ಇ
ವರ ಸನ್ನಿಧಿಗೆ.

ಮಾಹೆ ಮೇ ಸನ್ ೧೮೭೬ ಇಸವಿ ತಿಂಗಳ ಮಹಾಪತ್ರಿ
ಕೆಯ ೫೫ ನೇ ಪಾನಿನಲ್ಲಿ ಭೀವರಾಜ ನಾರಾಯಣ ಯಾ
ದಿ ೯ ಜ. ಸೂಲವಾಸರ ಗೋಕಾವಿ ಇವರ ಕೊಟ್ಟ ಶ್ಲೋ
ಕದ ಅರ್ಥವನ್ನು ನನ್ನ ಅಲ್ಪ ಬುದ್ಧಿಗೆ ತೋಚಿದಷ್ಟು ಬರೆದಿ
ರುತ್ತೇನೆ ಯೋಗ್ಯ ಕಂಡಲ್ಲಿ ಆಕ್ಷರಪಡಿಸಿರಿಯಬೇಕು.

ಮೂಲಶ್ಲೋಕ.

ಜಂಭಾರಿಮುಖ್ಯ ಸುರದಂಭಾಪಹಾರ್ಯಸುರ ಕುಂಭೋನಸಾಂ
ಡಜಗುರೋ।
ಸಂಭಾವಯಾಮ್ಯ ಸುರಡಿಂಭಾಸುಪೇಬ ಪತಿಕುಂಭಸದ್ಮಯೊ
ದ್ಯಾನ ಕೃತೆ॥
ಸ್ವಂಭೋವ್ಯಪೇತಿಪವಿತಂಭಾವಿ ಸು ತಮುಹಂಭಾವತೋವ
ರತರಂ।
ಕಂಭ್ಯಾದಿದೇವನುತ ಮಂಭೋಭಿಶಾಯಿನನುರಂಭಾ ಸವಾ
ವನ್ಯಹರಿಂ॥ ೬॥

ಸಾನ್ವಯಾರ್ಥವು.

ಜಂಭಾರಿಮುಖ್ಯ ಸುರದಂಭಾಪಹಾರ್ಯಸುರಕುಂಭೀನಸಾಂ ಡಜಗುರೋ। ಜಂಭಾರಿಮುಖ್ಯ=ಇಂದ್ರನೇ ಮೊದಲಾದಂಥ। ಸುರ=ದೇವತೆಗಳ। ದಂಭಾಪಹಾರಿ=ಕಾಪಟ್ಯವನ್ನು ಹರಣ ಮಾಡುವಂಥ। ಅಸುರ=ದೈತ್ಯರೆಂಬ। ಕುಂಭೀನಸ=ಸರ್ಪಗಳಿಗೆ। ಅಂಡಜಗುರೋ=ಗರುಡನಾದಂಥಾತನೆ। ಅಸುರಡಿಂಭಾಸುಖೇ ಭಪತಿಕುಂಬದ್ವಯೋರ್ದನಕೃತೇ ಸ್ಫಂಭೋದ್ಭವ। ಅಸುರ=ದೈತ್ಯನಾದ ಹಿರಣ್ಯಕಶ್ಯಪನ। ಡಿಂಬ=ಪತ್ಸನಾದ ಪ್ರಲ್ಹಾದನ। ಅಸುಖ=ದುಃಖವೆಂಬ। ಇಭಪತಿ=ಗಜೇಂದ್ರನ। ಕುಂಭದ್ವಯ=ಯೆರಡು ಕುಂಭಸ್ಥಲಗಳ। ಅದನಕೃತೆ=ಮರ್ದನಾರ್ಥವಾಗಿ। ಸ್ಫಂಭೋದ್ಭವ=ಕಂಭದಬಿಶೆಯಿಂದ ಹುಟ್ಟಿದಂಥಾತನೇ। ಇತಿ=ಈ ಪ್ರಕಾರವಾಗಿ। ದಿವಿ=ಸ್ವರ್ಗದಲ್ಲಿ। ರಂಭಾದಿಭಿಃ=ರಂಭಾದಿಗಳಿಂದ। ಸ್ತುತಂ=ನುತಿಸಿಕೊಳ್ಳಲ್ಪಟ್ಟಂಥ। ಶಂಭಾದಿ ದೇವನುತಂ=ಈಶಪ್ರಮುಖರಾದ ದೇವತೆಗಳಿಂದ ಸ್ತುತಿಸಿಕೊಳ್ಳಲ್ಪಟ್ಟಂಥ। ಅರಂ=ಚನ್ನಾಗಿ। ಭಾಸಮಾನಂ=ಶೋಭಾಯಮಾನನಾದಂಥ। ವರತರಂ=ಶ್ರೇಷ್ಠನಾದಂಥ। ಅಂಭೋಧಿಶಾಯಿನಂ=ಸಾಗರ ಶಯನನಾದಂಥ। ನೃಹರಿಂ=ನರಸಿಂಹನನ್ನು। ಅಹಂ=ನಾನು। ಭಾವತಃ=ಮನಃಪೂರ್ವಕವಾಗಿ। ಸಂಭಾವಯಾಮಿ=ಭಜಿಸುತ್ತೇನೆ.

ಭಾವಾರ್ಥ.

ದೇವತೆಗಳಿಗೆ ಭ್ರೀತ್ಯಾಸ್ಪದರಾದ ದೈತ್ಯರೆಂಬ ಸರ್ಪಗಳಿಗೆ ಗರುಡಾಯಮಾನನಾದವನೆ ಪ್ರಲ್ಹಾದನ ಕಷ್ಟಗಳೆಂಬ ಆನೆಯ ಕುಂಭಸ್ಥಲವನ್ನು ಶೀಳುವದಕ್ಕಾಗಿ ಕಂಭದಿಂದ ಹುಟ್ಟಿದಂಥಾತನೇ ಈ ಪ್ರಕಾರವಾಗಿ ರಂಭಾದಿ ಸ್ತ್ರೀಯರಿಂದಲೂ ಈಶ ಪ್ರಮುಖರಾದ ದೇವತೆಗಳಿಂದಲೂ ಸ್ತುತಿಸಿಕೊಳ್ಳಲ್ಪಟ್ಟ ನರಸಿಂ

ಷ್ಟನಂನು ನಾನು ಮನಃಪ್ರೂರ್ವಕವಾಗಿ ಭಜಿಸುತ್ತೇನೆ.

ಶ್ರುತವಿರಬೇಕು ಇಂತಿ ವಿನಂತಿ.

ಶು. ಕನ್ನೂರ ತಾ. ೨೩ | ೯ | ೭೬. } ರಾಮಚಂದ್ರ ದುದಾಚಾರ್ಯ ಸ್ಕೂಲ ವಾಸ್ತರ ಕನ್ನೂರ ತಾ. ವಿಜಾಪೂರ.

ಮಹಾರಾಜ ರಾಜಶ್ರೀ ಕನ್ನಡ ಶಾಲಾಪತ್ರಕದ ಏಡಿ
ಟರವರ ಸನ್ನಿಧಾನಕ್ಕೆ.

ವಿನಯ ಪೂರ್ವಕ ವಿಜ್ಞಾಪನಃ ಏನಂದರೆ? ಮಾಹೆ ಅಗಷ್ಟ ಸನ್ ೧೯೭೬ ಇಸವಿಯ ಪಾನು (೧೯೭೬) ನೇದರಲ್ಲಿ ಶಿಗ್ಲಿ ಪೂಲಿಯ ಹೆಡ್ಡ ವಾಸ್ತರರಾದ ರಾ. ವಿಷ್ಣು ವರಶುರಾಮ ಇವರಿಂದ ಬರೆಯಲ್ಪಟ್ಟ ವೊದಲನೇ ಶ್ಲೋಕದ ಅರ್ಥವನ್ನು ನಂಗ ಅಲ್ಪ ಮತ್ತಿಗೆ ತಿಳಿದಷ್ಟು ಬರೆದು ಕಳುಹಿಸಿದ್ದೇನೆ. ಇದನ್ನು ತಾತ್ಸರ ಮಾಡದೆ ತಮ್ಮ ಶಾಲಾಪತಿಕೆಯಲ್ಲಿ ಛಾಪಿಸಿ ಪ್ರಸಿದ್ಧಗೊಳಿಸ ಬೇಕೆಂದು ಇಚ್ಛಿಸುತ್ತೇನೆ.

ರಾಜಶೇಖರವಿಳಾಸ ಪಂಚಮಾಶ್ವಾಸದ ೨೦ ನೇ ಪದ್ಯ.

ವೃ॥ ಮರುದಾಕೀರ್ಣಲಸತ್ ಘನಪ ಸವತ್ಕಾರಾರಾಜಿತಂಹಂ
ಸಬಂ।
ಧುರಸಾಪಾಳಿರುಚಿಪ್ರಧಾನಕವಿರಾಜಾಲಂಕೃತಂದಿವ್ಯಸಂ॥
ಧುರಸತ್ವಾವರವ್ಯಯಾತಕಮುಲಾಸಾಂಗಪೃಭಾಭಾಸುರಂ।
ಸರದಂತಾಬರದಂತೆರಂಜಿಸಿದುದಾರಾಜೇಂದ್ರ ನೊಡ್ಡೋಲಿಗಂ॥೨೦॥

(ಈ ಪದ್ಯದಲ್ಲಿ ಸರೋವರ ಆಕಾಶವರವನ್ನು. ಮತ್ತು, ರಾಜನಾಒಡ್ಡೋಲಗವರವನ್ನು, ಬೇರೆ ಬೇರೆಯಾಗಿ (೩) ಅರ್ಥ ಬರೆದಿರುತ್ತೇನೆ.

ಅನ್ವಯ.

ಮರುದಾಕೀರ್ಣಲಸತ್ ಘನಪ್ರಸತತಾರಾರಾಜಿತಂ ಮರುತ್= ವಾಯುವಿನಿಂದ ; ಆಕೀರ್ಣ= ವ್ಯಾಪ್ತವಾದ । ಲಸತ್=ಒಪ್ಪುತಿರ್ದ । ಘನ=ಅಧಿಕವಾದ । ಪ್ರಸತತ=ಕಮ್ಮಗಳಿಂದ । ತಾರಾರಾಜಿತಂ=ನಕ್ಷತ್ರಂಗಳಂ । ಹಂಸಬಂಧುರಸಾಪಾಳಿಯುಬೆ ೃಧಾನಕವಿರಾಜಾಲಂಕೃತಂ ಹಂಸಬಂಧು=ಕುಲಗಳ । ರಸ=ಗಂಧರಸವನ್ನು । ಪಾ=ಪಾನಮಾಡುತಿರ್ದ । ಅಳಿ= ಭೃಮರಗಳ । ರುಚಿ=ಪ್ರೀತಿಯಿಂದ । ಪ್ರಧಾನ ಮುಖ್ಯವಾದ । ಕವಿರಾಜ =ಜಾಜಿಪುಷ್ಪಶ್ರೇಷ್ಠನಿಂದ । ಅಲಂಕೃತಂ=ಭೂಷಿತವಾದಂಥ । ದಿವ್ಯಸಿಂಧುರಸತ್ಪಾವಹರಮ್ಯಂ, ದಿವ್ಯ=ದೇವ್ಯಾಯವಾನವಾದ । ಸಿಂಧು=ನದಿಗಳ । ರಸತ್ಪಾ=ಉದಕತವನ್ನು । ವಹ=ವಹಿಸಿರ್ಪೋದರಿಂದ । ರಮ್ಯ=ಸುಂದರವಾದಂಥ । ಆತ್ತ ಕಮಲಾಪಾಂಗಪ್ರಭಾಭಾಸುರಂ, ಆತ್ತ=ಪಡಿಯಲ್ಪಟ್ಟ । ಕಮಲಾಪಾ=ಸೂರ್ಯನ । ಅಂಗಪ್ರಭಾ=ದೇಹಪ್ರಭೆಯಿಂದ । ಭಾಸುರಂ=ನುನ್ನೋಹರವಾದಂಥ । ಸದಂತೆ=ಸಜ್ಜನರ ಹಾಗೆ । ಆರಾಜೇಂದ್ರಸೊಡ್ಡೋಲಗಂ=ಆ ಮಹರಾಜನ ಸಭೆಯು । ರಂಜಿಸಿದುದು=ಶೋಭಿಸಿತು.

ಮರುದಾಕೀರ್ಣಲಸತ್ ಘನಪ್ರಸತತಾರಾರಾಜಿತಂ. ಮರುತ್= ದೇವತೆಗಳಿಂದ । ಆಕೀರ್ಣ=ಮುಸುಕಿರ್ದ । ಲಸತ=ಒಪ್ಪುವ । ಘನ=ಮೇಘಗಳ । ಪ್ರಸತ=ಸಮೂಹವಿಂದಲೂ । ತಾರಾ=ನಕ್ಷತ್ರಗಳಿಂದಲೂ । ರಾಜಿತ=ಒಪ್ಪುವಂಥ ; ಹಂಸಬಂಧುರಸಾಪಾಳಿರುಚಿಕೃಧಾನಕವಿರಾಜಾಲಂಕೃತಂ, ಹಂಸ=ಸೂರ್ಯನಿಂದ । ಬಂಧುರ=ಮನೋಹರವಾದ । ಸಾಪಾಳಿ=ಕ್ಷೇಪುವಿನ । ರುಚಿ= ಪ್ರಕಾಶದಿಂದ । ಪ್ರಧಾನ=ಶ್ರೇಷ್ಠವಾದ । ಕವಿ=ಶುಕ । ರಾಜ=ಚಂದ್ರನಿಂದ । ಅಲಂಕೃತಂ=ಅಲಂಕರಿಸಲ್ಪಟ್ಟಂಥ । ದಿವ್ಯಸಿಂ

ಧುರಸತ್ಯಾವಹರಮ್ಯಂ. ದಿವ್ಯಸಿಂಧು=ದೇವಗಂಗೆಯ। ರಸತ್ಯಾವ
ಜಾನನ್ನ। ವಹ=ಸಹಿತವಿರುವವನಿಂದ। ರಮ್ಯ=ಸುಂದರವಾ
ದಂಥ। ಆತ ಕಮಲಾಪಾಂಗಪ್ರಭಾಭಾಸುರಂ. ಆತ=ಸಂಗ ಹಿ
ಸಿದ। ಕಮಲಾಪ=ಕೃಷ್ಣನ। ಅಂಗಪ ಭಾ=ದೇಹದ ಕಾಂತಿ
ಯಂತೆ। ಭಾಸುರ=ಪ ಕಾಶಿಸುವಂಥ। ಅಂಬರದಂತೆ=ಆ
ಕಾಶದ ಹಾಗೆ। ಆರಾಜೇಂದ್ರನ ಸೊಡ್ಡೋಲಗಂ=ಆ ರಾಜಾಸ್ಥಾನ
ವು। ರಂಜಿಸಿದುದು=ಶೋಭಿಸಿತು.।

ಮರುದಾಕೀರ್ಣಲಸತ್ಫನಪ ಸವತಾರಾರಾಜಿತಂ. ಮರುತ=
ಧನ್ಯರಿಗಳಿಂದ। ಆಕೀರ್ಣ=ಅಚ್ಛಾದಿಸಿದ। ಲಸತ್=ಶೋಭಿಸುವ।
ಫನ=ಮಿಗಿಲಾದ। ಸ್ರಸವ=ಪುಷ್ಪವಾಲಾಧಾರಿಗಳಿಂದಲೂ। ತಾ
ರಾ=ನಕ್ಷತ್ರ ವಾಲಾಧಾರಿಗಳಿಂದಲೂ। ರಾಜಿತ=ಒಪ್ಪುವಂಥ।
ಸೂಸಬಂಧುರಸಾಪಾಳಿರುಜಿಸ್ಥಾನಕವಿರಾಜಾಂಕೃತಂ. ಸೂ
ಸಬಂಧು=ಸೂರ್ಯಕುಲೋತ್ಪನ್ನರಾದ। ರಸಾಪ=ರಾಜರ।
ಆಳಿ=ಸಮೂಹದಲ್ಲಿ। ರುಜಿ=ಪ್ರೀತಿಯುಳ್ಳ। ಪ್ರಧಾನ=ಮಂತ್ರಿ
ಗಳಿಂದ। ಕವಿರಾಜ=ಕವೀಶ್ವರರಿಂದ। ಅಲಂಕೃತಂ=ಅಲಂಕ
ರಿಸಲ್ಪಟ್ಟಂಥ। ದಿವ್ಯಸಿಂಧುರಸತ್ಯಾವಹರಮ್ಯಂ. ದಿವ್ಯ ಸಿಂಧುರ=
ಐರಾವತದ। ಸತ್ಯ=ಸಾಮರ್ಥ್ಯವನ್ನು। ವಹ=ವಹಿಸಿದಸುಭಟ
ರಿಂದ। ರಮ್ಯ=ಸುಂದರವಾದಂಥ।ಆತ ಕಮಲಾಪಾಂಗಪ ಭಾ
ಭಾಸುರಂ, ಆತ=ಸಂಪಾದಿಸಿದ। ಕಮಲಾ=ಲಕ್ಷ್ಮಿಯ। ಅ
ಪಾಂಗಪ ಭಾ=ಕೇಕರಿಂದೆ। ಭಾಸುರಂ=ಮಿಗೆ ಮನೋಹರ
ವಾದಂಥ। ಆರಾಜೇಂದ್ರನ ಸೊಡ್ಡೋಲಗಂ=ಆನರೇಂದ್ರನ ಸಭಾ
ಮಂಟಪವು। ರಂಜಿಸಿದುದು=ಕಂಗೆ ಶೋಭಿಸಿತು.

ಭಾವಾರ್ಥ.

(ಇವರಲ್ಲಿ ಮೂರೂ ಭಾವಾರ್ಥಗಳನ್ನು ಕೂಡಿಸಿ ಬರೆದಿ
ದ್ದೇನೆ.)

ಮಾಯುವಿನಿಂದ (ದೇವತೆಗಳಿಂದ) (ಧನ್ವಂತರಿಯಿಂದ) ವೃ
ಪೆವಾದಂಥ ಒಳ್ಳೇ ಕಮಲಗಳಿಂದ(ಮೇಘ. ನಕ್ಷತ್ರಗಳಿಂದ
(ಪುಷ್ಯಮೂಲಾ, ಮತ್ತು ನಕ್ಷತ್ರಮೂಲಾಧಾರಿಗಳಿಂದ) ಒಸ್ಸುವ
ಥ, ಕಮಲಗಳ ಗಂಧವನ್ನು ಸ್ವೀಕರಿಸುತ್ತಿರ್ದ ಭ್ರಮರಗಳಿ
ದಲೂ ಜಲ ಪಕ್ಷಿಗಳಿಂದಲೂ (ಸೂರ್ಯ, ಕೇತು ಶುಕ್ರ ಚ
ದ್ರರಿಂದ) (ಸೂರ್ಯ ವಂಶದರಾಜ ಮಂತ್ರಿ, ಕವೀಶ್ವರರಿಂದ
ಭೂಷಣವಾದಂಥ, ನದಿಗಳಂತೆ ಉದಕ ಪೂರ್ಣತ್ವದಿಂದ(ಪ
ವಗಂಗೆಯ ಉದಕತ್ವದಿಂದ) (ಐರಾವತದ ಸಾಮರ್ಥ್ಯವ
ನ್ನು ವಹಿಸಿದ ಸುಭಟರಿಂದ) ಸುಂದರವಾದಂಥ ಸೂರ್ಯ
ಪ್ರತಿಬಿಂಬದಿಂದ (ಕೃಷ್ಣನ ಶರೀರದ ಕಾಂತಿಯಂತೆ) (ಲಕ್ಷ್ಮೀ
ಯ ಕಡೆಗಣ್ಣಿನ ಕಾಂತಿಯಿಂದ) ಮನೋಹರವೆನಿಸಿದ. ಆ ಸ
ಜನ ಒಡ್ಡೋಲಗನ್ನ ಸರೋವರದ ಹಾಗೆಯೂ, ಆಕಾಶದಂ
ಗೆಯೂ, ಕಣ್ಣಿಗೆ ಕ್ಷೋಭಿಸತು.

ಮುಕ್ಕಾಮು ಕ ಜಗೇರಿ ತಾ· V ನೇ ಮಾಹೆ ಸಪಟಂಬರ ಸನ್ನ ೧೮೬೬ ಇಸವಿ.

ಸಹಿ ಮಲ್ಲಯ್ಯಾ ಪದ್ದಿಯ್ಯಾ ಗಾಪ್ಪೂರ ಹೆ· ಮಾ· ಕ ಜಗೇ
ತಾ· ರೋಣ ಜಿ· ಧಾರವಾಡ.

ಮಹಾರಾಜ ರಾಜಮಾನ್ಯರಾಜಶ್ರೀ ದಕ್ಷಿಣಭಾಗದ
ಲಾಪತ್ತದ ಎಡಿಟರರ ಚರಣಾರವಿಂದಗಳಿಗೆ·

ಸೇವಕನು ಮಾಡುವ ವಿನ್ನಹವೇನಂದರೆ-ಮಹಾರಾಜ
ಜಮಾನ್ಯರಾಜಶ್ರೀ ಗಂಗಾಧರ ಮಡಿವಾಳೇಶ್ವರ ಅ. ಟ್ಯಾನ್ಸ್ಲೇ
ಟರವರು ಕನ್ನಡ ಕವಿತಾಪದ್ಧತಿಯೆಂಬ ಪುಸ್ತಕದವನ್ನ
ಮಾಡಿ ಅದರಲ್ಲಿ ಕೆಲವೃತ್ತಗಳ ನಿಯಮಗಳನ್ನು ಹೇಳಿದ್ದಾ
ಪ್ಪೆ ಅದೇ ಕ್ರಮವನ್ನು ಅನುಸರಿಸಿ ಈಗ ನಾನು ಮತ್ತೆ ಸ
ವು ಹ್ರಸ್ವ ವೃತ್ತಗಳ ಗಣನಿಯಮಗಳನ್ನು ಗೊತ್ತು ಮಾ

ಕವಿತಾರೂಪದಿಂದಾ ಕೂಡಿಸಿ ತಮ್ಮ ಸನ್ನಿಧಿಗೆ ಕಳುಹಿಸಿರು
ತ್ತೀನೆ ತಮ್ಮ ಕರಕಮಲದಲ್ಲಿ ಹುಟ್ಟುವ ಪತ್ರಿಕೆಯಲ್ಲಿ ಮು
ದ್ರಿಸಿ ಪ್ರಕಟ ಮಾಡುವಿರೆಂಬ ಕಾಂಕ್ಷೆಯುಳ್ಳವನಾಗಿದ್ದೇವೆ.

॥ ವಿಭೂತಿವೃತ್ತ ॥

ಪಾವಕಂ ದಿನೇಶಗಾ । ರೀವರಂಬರುತಿ ರ ॥
ಲ್ಕೀವಿಭೂತಿ ವೃತ್ತ ಕೇ । ಳೀವನೇಜಲೋಚನೆ ॥ ೩ ॥

॥ ಧೃತವಿಲಂಬಿತವೃತ್ತ ॥

ನುತಸುರಾಮೃತಕರಾರ್ಕ ಪಾವಕಂ ।
ಧೃತವಿಲಂಬಿತಮೆನಿಪ್ಪವೃತ್ತ ಕಂ ॥
ಸತತವೊಪ್ಪುತಿಹವರ್ಕವರ್ಣಮು ।
ರ್ವಿತಳದಲ್ಲಿ ತಿಳಿಕಂಜಲೋಚನೆ ॥ ೩ ॥

॥ ಕಳಾಭೂಷಣವೃತ್ತ ॥

ಆಶುಗಾಪ ಸುರಶೀತಕರದ್ವಿತಯಾನಲಂ ।
ಶೇಷವೇಣಿ ಬಹವೀಗಣಾಸಂಜಯತತ್ಕಳಾ ॥
ಭೂಷಣಾಖ್ಯವರವೃತ್ತ ಕೆ ಧಾತ್ರಿಯೊಳಾವಗಂ ।
ಶೋಷಿಕುಂ ಜನಕೆ ಪಂಚದಶಾಹ್ನೆರದಿಂದಿದುಂ ॥ ೩ ॥

॥ ಉತ್ಸಾಹವೃತ್ತ ॥

ಲೋಹಿತಾಶ್ವಸೂರ್ಯಪಾವಕಾರ್ಕ ಪಾವಕಂಗಳು ।
ತ್ಸಾಹವೃತ್ತ ಕೆಂದುಮೊಪ್ಪುತಿರ್ಕುಮೆಂದೆ ಕೇಳು ಕಾ ॥
ಳಾಹಿವೇಣಿಪಕ್ಷಸಂಖ್ಯೆಯುಳ್ಳ ವರ್ಣಗಳ್ಬರಲ್ ।
ವೋಹದಿಂದೆ ನೀನು ಕೇಳಲಿಂತುವೇಳ್ದೆನಾನಿದಂ ॥ ೪ ॥

॥ ಮಂದಾಕ್ರಾಂತಾವೃತ್ತ ॥

ಬಂದಿಕ್ರಾಂಭೋಶಶಿವಿಬುಧತ್ರಾರಾಧ್ವಯುಗ್ಮಂ ಧ್ವಯುಗ್ಮಂ ।
ಮಂದಾಕ್ರಾಂತಾಖ್ಯವಿಸುತಸುವೈಕ್ಕವಿಂತೀಗಣಂಗಳ್ ॥

ಪಂದಿಕ್ಕುಗಂದೀಳನಬುಮುಕಾಳೋತ್ತುಂಗವಪ್ಪೋಜಯು
ಗ್ಮೇ ।
ಚಂದಂ ಚಿತ್ತಿರ್ದಮಲಪದಿನೇಳ್ವರ್ಣಗಳ್ಸರ್ವಕಾಲಂ ॥೫॥

॥ ಮಲ್ಲಿಕಾಮೂಲಾವೃತ್ತ ॥

ಲೀತಿಯಿಂದ ನಲಾನಿಲಂಕರ್ಣಯುಗಂಗಳುಂಶಶಿಪಾವಕಂ।
ಬಾಲಕೇಳ್ಬಹವಿಂತುತಪ್ಪದಲೀಗಣಂಗಳುಮಲ್ಲಿಕಾ ।
ಮಾಲೆಯುಂಬುವವೃತ್ತಕಂ ಯತಿಯುಂತ್ಯದಲ್ಲಿವಿರಾಜಿಕುಂ
ಮೇಲನಿಪ್ಪ ಸುವರ್ಣಗಳ್ಪದಿನೆಂಟು ಜಪ್ಪವು ಸಂತತ
॥೬॥

॥ ಮಣಿವಿಭೂಷಣವೃತ್ತ ॥

ವೀತಿಹೋತ್ರಸುತಶೀತಕರದ್ವಿತಯಾನಲಂ।
ಈತ್ರಿಯಂಮಣಿವಿಭೂಷಣನಾಮವದವೃತ್ತಕಂ ॥
ಭೂತಳಕ್ಕಾಗ್ಯದೆಗಣಂಗಳು ಶೋಭಿಸುಗುಂ ನದೇ।
ಜಾತಲೋಚನೆ ರತ್ನಮಲ್ಲಿಕಾಯುವಿ ನಾವಗಂ ॥೭॥

॥ ಹರಿಣೋತ್ಪ್ಲುತವೃತ್ತ ॥

ತ್ರಿದಶವಮಪೂನಂ ಭಾನ್ಯೆಶ್ವಾನಯಾನಿಲಮೆಂಬಿವೆಂ।
ಮೊದಲು ಬಹವಾಮೆಲ್ಕಂಜೊಪ್ಪಂಶಿವಂಬರಲಿಂತಿದ ॥
ಕ್ಕೊದಗಿಸ್ರದು ನೀಂಕೇಳಬ್ಜಾತಾನನೇ ಹರಿಣೋತ್ಪ್ಲುತಾ।
ಖ್ಯಾದ ಪೆಸರು ಭೂವಿಬುವಿದ್ವಾಂಸರ್ಕಳಂಬಿರ್ದಾವಗಂ ॥೪

॥ ಛಂದೋವೃತ್ತ ॥

ವಾವಕತ್ರಿದಶಶೀತಕರಪ್ಪೋಣತ್ವಸನವ್ಪಯವಿಪ್ಪಗೌ
ರೀವರಂಬರುತ್ತಿರಲ್ಕ ಮಛಂದೋವೃತ್ತವೆನಿಪ್ಪುದು ಧಾ
ಯೊಳ್ ।
ಭೂವಿಸಲ್ಕೆ ವರವರ್ಣಗಳಪ್ಪತ್ತಂಬರುತ್ತಿರ್ಪವು ಕೇಳುರ

ಜೀವನೇಕ್ರೆ ವಿಧುಬಿಂಬಸಮಾನಾಸ್ಯಂಬುಜೆ ತಪ್ಪದುಸಂತ

ಕಂ ॥ ೯ ॥

॥ ಪೃಥ್ವೀವೃತ್ತ ॥

ದಿವಾಕರಸಮಿರಸಾಯ್ಕಪವನಾಂಬುಕಂಜೊಂಬಕಂ।
ಶಿವಾವರವಿವೇಂದು ವೈಬೆಬಹವೀಸುಪೃಥ್ವೀಪಿನಿ॥
ಸ್ವವೃತ್ತಕವಿದಂ ವ್ಯಗಾಂಕಮುಪಿ ನೀಲಕಂಜಾಕ್ಷಿ ಸಲ್।
ಪ್ರವಾಳನಿಧಿಲೋಹಿತಾಧರೆ ನಿರಂತರಂ ಕೇಳು ನೀಂ

॥ ೮೦ ॥

॥ ಶಿಖಾರಿಣೀವೃತ್ತ ॥

ಗಣಂಗಳ್ಸಲ್ಗಂಸದ್ವಿಬುಧಮತದಿಂದಂ ನುತಶಿಖಾ।
ರಿಣೀ ವೃತ್ತಕಂವಾರಿಕುಸುರಸಭೂಲೀಂದುಮಿವೆಕ್ಕಂ॥
ಕಣಭ್ರಾಜಿತ್ಕಂತಾಮಣಿ ಬಳಿಕ ನೀಂಕೇಳು ಜಲಜೇ।
ಪ್ಪಣಂಕರ್ವಂಬಕುರ್ಗಂ ಕಡೆಗವದಿನೇಳ್ವಣ್ಣತಕಿಯೊಳ್

॥ ೮೮ ॥

॥ ತ್ರೋಟಕವೃತ್ತ ॥

ಕುಕವಾಣಿಯೆ ಕೇಳಳಿಯೊಳ್ಕರುತಂ।
ಸುಕಲಾವಿದಸಂಪುತಪಿಂದುರೆ ತೋ॥
ಟಕವೃತ್ತಮೆಸಿಪ್ಪದಕೆವರ್ವ ಮಾ।
ನಕವಿತ್ರಗಣಂಗಳು ನಾಲ್ಕು ನಿಶಂ॥ ೮೯॥

॥ ಭುಜಂಗಸ್ಪಯಾತ ವೃತ್ತ ॥

ವಸುವಾಂಬುಕ್ಷಿಲಾಲನೆಂಬೀಗಣಂಗಳ್।
ದಿಸಾಧ್ಯಷ್ಟಸಾಂಖ್ಯಾಂಕವರ್ಣಂಗಳುಂ ಸ।
ಜ್ಜನಸ್ತುತ್ಯವಾದೀ ಭುಜಂಗಪ್ರಯಾತ।
ಕ್ಕನಿತ್ಯಂ ಬರುತ್ತಿರ್ದವಬ್ಜಾಕ್ಷಿ ನೀ ಕೇಳ್॥ ೯೦॥

॥ ಉಪೇಂದ್ರವಜ್ರ ವೃತ್ತ ॥

ದಿವಾಕರವ್ಯೋಮರವೀಶಯುಗ್ಮಂ ।
ಇವ್ವೈದೆ ಬಂದಿದ್ದೊಡೆ ಕೇಳುಪೆಂದ್ರಾ ॥
ಖ್ಯವೃತ್ತಮಿಂತಿರ್ಪವಕಕ್ಕರಂಗಳ್ ।
ಶಿವೇಕಸಂಖ್ಯಾಂಕವು ಕಾಂತೆ ನೀಕೇಳ್ ॥ ೩೪ ॥

॥ ಶುದ್ಧ ಕಾಮುದಾವೃತ್ತ ॥

ಅನಿಮಿಷಾಗ್ನಿಯುಗ್ಮಂಪದಾಂತ್ಯದೊಳ್ ।
ವನಜಲೋಚನಂ ಪಾರ್ವತೀಧವಂ ॥
ಅನಿಕವಿಲಸತ್ಶುದ್ಧ ಕಾಮುದಾ ।
ಯೆನಿಪವೃತ್ತಕಂನಲ್ಲೆ ಶೋಭಿಕುಂ ॥ ೩೫ ॥

॥ ಕಾಮುದಾವೃತ್ತ ॥

ನೇಮದಿಂಕೃಶಾಸ್ವಂಬುಭಾಸ್ಕರಂ ।
ವ್ಯೋಮಕೇಕವಿಂತ್ರಿ ದೆಬಕ್ಕುಮಿ ॥
ಕಾಮುದಾಖ್ಯವೃತ್ತಕ್ಕೆ ಸಂತತಂ ।
ಪ್ರೇಮದಿಂಪೆಕೇಳ್ವಮನೇತ್ರನೀಂ ॥ ೩೬ ॥

ಸಹಿ ತಾತ್ಪರ್ಯ ಕೃಷ್ಣ ಉಗಾರ ಹೆತ್ತ ಮಾಸ್ತರ
ಹಾರು ಬೀಡಿ ಹೊಂಗಲ.

REGISTERED NO. 61
1876

-ಪ್ರಕಟನೆಯು-

-ಪಟಕೀ ಮೇಲೆ ಉತ್ತಮ ಔಷಧವು-

ಪಟಕೀ ಉಪದ್ರವದ ಮೇಲೆ ಉತ್ತಮ ಔಷಧವನ್ನು ಬ
ಡೋದೆಯ ವೈದ್ಯರಾದ ಬಾಳಕೃಷ್ಣರಾವ ಯೆಂಬವರು ತಯಾ
ರ ಮಾಡಿ, ಬಡೋದಾ, ಮುಂಬಯಿ, ಮತ್ತು ಮದ್ರಾಸ ಮುಂತಾ
ದ ಇಲಾಖೆಗಳಲ್ಲಿ, ಈ ಔಷಧವು ಅನುಭವಕ್ಕೆ ಬಂದಿರುತ್ತದೆ.
ಮುಂಬಯಿಯಲ್ಲಿ, ಇಂದುಪ್ರಕಾಶ ಛಾಪಖಾನೆಯಲ್ಲಿಯೂ, ಧಾ
ರವಾಡ ಜಿಲ್ಲೆ ಪ್ಯೆಕಿ ಗರಗ ಸ್ಕೂಲಮಾಸ್ತರರ ಮನೆಯಲ್ಲಿಯೂ,
ಯಾ ವೈದ್ಯ ಬಾವಾ ಇವರ ಕಡೆಗೂ ರೋಖ ಹಣಾ ಕಳುಹಿ
ಕೊಟ್ಟರೆ ಔಷಧವು ದೊರಕುವದು- ಗರಗದಲ್ಲಿ ನಾಲ್ಕು ಜನರಿ
ಗೆ ಸಾಕಾಗುವಷ್ಟು ಔಷಧಕ್ಕೆ ೧ ರೂ. ೬ ಅ. ಕಿಮ್ಮತ್ತು ಬೀ
ಳುವದು.

ತಾ|| ೧೯ ಫೆಬ್ರುವಾರಿ ಸನ್ ೧೮೭೬ ಇಸ್ವಿ.

ಕನ್ನಡ ಶಾಲಾಪತ್ರಿಕೆ

CANARESE

SCHOOL PAPER.

ಪುಸ್ತಕ ೧೨] [ಸಂಚಿಕೆ ೨

ತಾರೀಖು ೨೫ ಮೂಹೆ ಆಕ್ಟೋಬರ ೧೮೭೬.

ಅನುಕ್ರಮಣಿಕೆಯು.

ವಿಷಯಗಳು..... ಪುಟ.

ವಿದ್ಯಾ ಸುಧಾರಣಾ ಸಂಬಂಧದ ವೃತ್ತಾಂತಗಳು..... ೪೩೩

ನೋಟೀಸು..... ೪೩೬

ಚಂದ್ರಗುಪ್ತಿಯ ವರ್ಣನೆ..... ೪೩೭

ಸುಪಯ ವರ್ಣನೆ..... ೪೪೧

ಟ್ರೇನಿಂಗ ಕಾಲೇಜ ಸರಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.. ೪೪೬

CONTENTS..... Page

Educational Intelligence..... 433

Notice..... 436

A Short Account of Chandragutti..... 437

A Short Account of Supa..... 441

Dharwar Training College Examination Questions..... 446

BELGAUM.

Printed at the "Belgaum Samachar" Press.

ಶಾಲಾಪತ್ರಕವ್ಯ.

ಪುಸ್ತಕ ೩೭] [ಸಂಚಿಕೆ ೭

ತಾರೀಖು, ೭೫ನೇ ಮಾಹೆ ಆಕ್ಟೋಬರ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ

ವೃತ್ತಾಂತಗಳು.

ಮೆ. ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾ
ದ್ದರ, ದಕ್ಷಿಣ ಭಾಗ, ದೊರೆಗಳವರು ಈ ತಿಂಗಳಲ್ಲಿ
ಧಾರವಾಡ ಟ್ರೇನಿಂಗಕಾಲೇಜ ಹಾಯಿಸ್ಕೂಲಗಳ ಪರೀ
ಕ್ಷೆಗಳನ್ನು ತೀರಿಸಿ ಕೊಂಡು ತಿರಿಗಿ ಬೆಳಗಾವಿಗೆ ಹೊರ
ಟು ಹೋದರು. ದೊರೆಗಳವರವು ಧಾರವಾಡದಲ್ಲಿ ಸು
ಮಾರು ೧೫ ದಿವಸ ಮುಕ್ಕಾಮಮಾಡಿದವು. ಇಲ್ಲಿಂದ ಹೋದ
ಮೇಲೆ ಮುಂದೆ ಕೊಲ್ಲಾಪುರ ಹಾಯಿಸ್ಕೂಲದ ಪರೀಕ್ಷೆ
ಗೆ ಹೋಗತಕ್ಕವರಿದ್ದಾರೆಂದು ತಿಳಿಯುತ್ತವೆ.

ರಾ. ರಾ. ಕಾಯಿಮು ಕನ್ನಡ ಟ್ರಾನಸ್ಲೇಟರ, ಎಜ್ಯುಕೇಶನ
ಡಿಪಾರ್ಟಮೆಂಟ್, ಇವರು ಬರುವ ಜಾನೇವಾರಿ ೭೫ನ

ನೇ ತಾರಿಖಿನ ವರೆಗೆ ಹಬ್ಬಿಗೆ ರಜೆಯನ್ನು ತಕ್ಕೊಂಡಿರು
ತ್ತಾರೆ.

ಈ ವರ್ಷದ ಮುಂಬಯಿ ಯುನಿವರ್ಸಿಟಿಯ ಮ್ಯಾಟ್ರಿ
ಕ್ಯುಲೇಶನ ಪರೀಕ್ಷೆಗಾಗಿ, ಧಾರವಾಡದಿಂದ ೨೨, ಬೆಳ
ಗಾವಿಯಿಂದ ೨೨, ಕೊಲ್ಲಾಪುರದಿಂದ ೪೪ ಉಮೇದವಾ
ರರು ಹೋಗತಕ್ಕವರಿದ್ದಾರೆ. ನಾವು ಕೊಟ್ಟ ಸಂಖ್ಯೆ
ಸರಕಾರೀ ಸಾಲೆಗಳೊಳಗಿಂದ ಹೋಗತಕ್ಕವರು, ಇಂ
ರಲ್ಲದೆ ಖಾಸಗೀ ಅಭ್ಯಾಸ ಮಾಡಿ ಹೋಗುವ ವಿದ್ಯಾರ್ಥಿ
ಗಳು ಇರಬಹುದು.

ಉತ್ತರ ಅಮೇರಿಕೆಯಲ್ಲಿ ಸ್ವತಂತ್ರ ಸಂಸ್ಥಾನಗಳಲ್ಲಿ
ಒಟ್ಟು ೪,೧೦೦ ವರ್ತಮಾನ ಪತ್ರಗಳು ಹೊರಡುತ್ತವೆ
ಅವುಗಳಲ್ಲಿ ೩/೪ ಕ್ಕಿಂತ ಹೆಚ್ಚು ಸಾಪ್ತಾಹಿಕ ಪತ್ರಗಳ
ಉಂಟು.

ವಿಲಾಯತಿಯೊಳಗಿನ ಒಬ್ಬ ಪ್ರಸಿದ್ಧ ಕಾಗದ ಮಾ
ಡುವವನು ಹಿಂದುಸ್ಥಾನದ ಸ್ಟೇಟ ಸೇಕ್ರೆಟರಿಗಳಾದ ಲಾ
ರ್ಡ ಸಾಲಿಸ್ಬರಿ ದೊರೆಗಳವರ ಕಡೆಗೆ, ಮದ್ರಾಸ ಇಲಾಖೆ
ಯೊಳಗ ಹಿಂದು ಕಾಗದ ಮಾಡುವ ಹೊಸ ಕಾರಖಾನೆ ಹ
ಚ್ಚುವದಕ್ಕೆ ಅಪ್ಪಣೆ ಕೇಳರುತ್ತಾನಂತೆ.

ಹಿಂದುಸ್ಥಾನದೊಳಗಿನ ದೊಡ್ಡ ದೊಡ್ಡ ಸರಕಾರ
ಅಧಿಕಾರಿಗಳಿಗೆ ಸನ್ ೧೮೭೩ ಇಸವಿಯಲ್ಲಿ ಸುಮಾರ

೧,೪೦,೦೦೦ ರೂಪಾಯಿಗಳ ಕಾಗದ ಮಿ ಮುಂತ್ರಾದ ಸಾಮಾನು ಹತ್ತಿತು. ಈ ಸಾಮಾನು ವಿಲಾಯತಿಯಿಂದ ತರುವದರಿಂದ ಇಲ್ಲಿಯು ದುಡ್ಡು ಅಲ್ಲಿ ಹೋಗುತ್ತದೆ. ಅದಕ್ಕೆ ಇನ್ನು ಮುಂದೆ ಆದಷ್ಟು ಈ ಸಾಮಾನು ಹಿಂ ದುಸ್ತಾನದೊಳಗೇ ಕೊಳ್ಳಬೇಕೆಂದು ಗವರ್ನರ ಜನರಲ ಸಾಹೇಬರವರ ಹೇತು ಉಂಟು. ಹೀಗೆ ಮಾಡುವದರಿಂದ ನಮ್ಮ ದೇಶದ ಕೈಗಾರಿಕೆಗೆ ಬಹಳ ಉತ್ತೇಜನ ಬರುವದು.

ಕಲ್ಕತ್ತಾ ಯುನಿವರ್ಸಿಟಿಯು ಬರುವ ಮ್ಯಾಟ್ರಿಕ್ಯುಲೇಶನ ಪರೀಕ್ಷೆಗೆ ೩೫೦೦ ಉಮೇದವಾರರ ಹೆಸರುಗಳು ರಜಿಸ್ಟರ ಆಗಿರುತ್ತವಂತೆ. ನಮ್ಮ ಜನರಲ್ಲಿ ವಿದ್ಯೆ ಕಲಿಯುವ ಹವ್ಯಾಸ ಬೇಗನೆ ಬೆಳದಂತೆ ಬೇರೆ ಬೇರೆ ತರದ ಉದ್ಯೋಗಗಳನ್ನು ಮಾಡುವ ಹವ್ಯಾಸ ಇನ್ನು ಹುಟ್ಟಿಲ್ಲ. ಅದು ಹುಟ್ಟದಲೆ ದೇಶದ ಊರ್ಜಿತ ಸ್ಥಿತಿ ಬಂತ್ರಿಂದು ಅನ್ನಕೂಡದು.

ಮುಂಬಯಿ ಯುನಿವರ್ಸಿಟಿಯು ಮೆಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ಇಪ್ಪತ್ತು ದಿವಸ ಇಂಗ್ರಜಿಯಲ್ಲಿಯೂ, ವಿದ್ಯಾರ್ಥಿಯು ತಾನಾಗಿ ಆರಿಸಿ ತಕ್ಕೊಂಡು ಎರಡನೇ ಭಾಷೆಯಲ್ಲಿಯೂ ಬಾಯಿ ಪರೀಕ್ಷೆ ಆಗುತ್ತಿತ್ತು. ಆದರೆ ಇನ್ನು ಮುಂದೆ ಎರಡನೇ ಭಾಷೆಯಲ್ಲೀ ಬಾಯಿ ಪರೀಕ್ಷೆ ತಕ್ಕೊಳ್ಳ ಬಾರದೆಂದು ಈ ವರ್ಷದಿಂದ ಹೊಸ ನಿಯಮ ಮಾಡಿರುತ್ತಾರೆ.

ಈ ವರ್ಷ ಗ್ರಾಂಟ್ ಹೈಸ್ಕೂಲ್ ಶಾಲೆಯೊಳಗಿಂದ ೪೦ ಉಮೇದವಾರರು ಡಾಕ್ಟರ ಜೆಲಸದ ಮೊದಲನೇ ಪರೀಕ್ಷೆಗೆ ಹೋಗಿದ್ದರು; ಅವರಲ್ಲಿ ಇಪ್ಪತ್ತು ಮಂದಿ ಪಾಸಾದರು.

NOTICE.

ನೋಟೀಸು.

ಬೆಳಗಾಂವಿ ಜಿಲ್ಲೆಯೊಳಗಿನ ಯಾವತ್ತೂ ಸ್ಕೂಲಮಾಸ್ತರರಿಗೆ; ಹಿಪೂಟಿ ಎಜ್ಯುಕೇಶನಲ ಇನಸ್ಪೇಕ್ಟರ ಜಿಲ್ಲಾ ಬೆಳಗಾಂವ ಇವರ ಕಡಿಯಿಂದ ಬರದು ತಿಳಿಸುವದೇನಂದರೆ, ಈ ಜಿಲ್ಲೆಯೊಳಗಿನ ಅನೇಕ ಸ್ಕೂಲ ಮಾಸ್ತರರು ತಾವು ಅಥವಾ ತಮ್ಮ ಅಸಿಪ್ಟಂಟರು ರಜೇದ ಮೇಲೆ ಹೋದ ಸಾಂಗು ವರ್ಗಾದ ಮುಂತಾದ ಪ್ರಸಂಗಗಳಲ್ಲಿ, ತಮ್ಮ ಸಾಲೀ ಬಾಬ್ತಿನವನ್ನು ಕೊಟ್ಟ ಸಾಂಗು ಕೈಗೆವಕೊಂಡ ಮತ್ತು ಆಸಿಪ್ಟಂಟರನ್ನು ಬಿಡುಗಡೆ ಮಾಡಿದ ಅಥವಾ ಪುನಃ ನೇಮಿಸಿ ಕೊಂಡ ಮುಂತಾದ ಪ್ರಸಂಗಗಳಲ್ಲಿ, (ಘಂಟೆ) ವೇಳೆಯನ್ನು ಬರಿಯದೆ ಫಕ್ತ ತಾರೀಖು ಮಾತ್ರ ಬರದು ತಿಳಿಸುತ್ತಾರೆ. ಅದರಿಂದ ನಮ್ಮಲ್ಲಿ ಪಗಾರ ಆಕಾರಿಸುವಾಗ್ಗೆ ಬಹಳೇ ತೊಂದರೆ ಉಂಟಾಗುತ್ತವೆ. ಆದರೆ ಇನ್ನು ಮೇಲೆ ಯಾವತ್ತೂ ಸ್ಕೂಲಮಾಸ್ತರರು ಮೇಲೆ ಬರದ ಪ್ರಸಂಗಗಳಲ್ಲಿ ವೇಳೆಯನ್ನು (ಘಂಟೆ) ನಮೂದ ಮಾಡಿ ಸೋಕ್ಷ್ಯ ಕಾಲಕ್ಕೆ ರಿಪೋರ್ಟಗಳನ್ನು ಮಾಡುತ್ತಿರಬೇಕು. ತಪ್ಪ ಬಾರದು. ತಿಳಿಯೋದು.

ತಾರೀಖು ೬ ಆಕ್ಟೋಬರ ೧೯೦೯ ನೇ ಇಸವಿ.

(Signed) K. N. Bhangamkar.

ಡಿ. ಎ. ಇ. ಜಿ. ಬೆಳಗಾಂವ

